# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2019




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 36**

**ಸಂಚಿಕೆ - 08**

**ಮೇ - 2019**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ರಾಜಯೋಗ್ಯ ಸವಾಲಿನ ಪ್ರಸಂಗ | ವತ್ಸಲ | 3 |
| ಕರುಣೆಗೆ ಕೊಟ್ಟ ಕಪ್ಪ | ಪ್ರಕಾಶ್ | 6 |
| ಪ್ರಕೃತಿ ಚಿಕಿತ್ಸೆ | ಗೀತಾ ಕುಂದಾಪುರ | 7 |
| ನಮ್ಮ ಕಾಲ್ಗುಣ | ಡಾ। ಡಿ.ವಿ. ಗುರುಪ್ರಸಾದ್ | 10 |
| ಕಳೆದು ಹೋಗಿದೆ, ಹುಡುಕಿ ಕೊಡಿ | ಹೆಚ್. ಆರ್. ಪ್ರಭಾಕರ | 13 |
| ರಬ್ಬರ್ ಬ್ಯಾಂಡಿನಂತೆ... | ಆರತಿ ಘಟಿಕಾರ್ | 22 |
| ಕಾವೇರಿಗೆ ಫೇಸ್ಲಿಫ್ಟ್ | ಇ.ಆರ್. ರಾಮಚಂದ್ರನ್ | 25 |
| ತುಂತುರು | ದಂನಿಅ | 27 |
| ಶೈಲೂ ಗಂಡ ಐಲೂ | ನಳಿನಿ ಸೂರ್ಯ ಪ್ರಕಾಶ್ | 28 |
| ಗೋಕುಲಾಷ್ಟಮಿಯೂ... | ಪ್ರಕಾಶ್ ಆರ್. | 31 |
| ಕುಶಾಗ್ರತನದ ಕುಶಲೋಪರಿ | ವೈ. ಎನ್. ಗುಂಡೂರಾವ್ | 34 |
| ಕಂಡೋರ ದೃಷ್ಟಿ ಬಿದ್ದರೆ.. | ಪ್ರೇಮಾ ಭಟ್ | 39 |

**ವ್ಯಂಗ್ಯಚಿತ್ರ : ಮುಖಪುಟ – ನಾಗನಾಥ್**

ಪ್ರಕಾಶಕರು*:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



**''ಚುನಾವಣಾ ಬಂತು ನಾಡಿಗೆ, ಬಂತು ಕಾಡಿಗೆ**

**ಬಂತು ಬೀಡಿಗೆ'' ಅಂತ ಅಪರಂಜಿಯೂ ಪಲುಕಿದಳಂತೆ ! !**

★★★

ಪರೀಕ್ಷೆ – ದ್ವಿತೀಯ ಭಾಷೆ – ಗೆ ಇಪ್ಪತ್ತೈದು ಸಾವಿರ

ವಿದ್ಯಾರ್ಥಿಗಳು ಗೈರು ! ! – ಸುದ್ದಿ

**ಅವರಿಗೆ ''ಪ್ರಥಮ''ವೇ ಸಾಕಾಗಿತ್ತೇನೋ ? !**

★★★

ಎಲಿವೇಟೆಡ್ ಕಾರಿಡಾರ್ ಯೋಜನೆಗೆ ಟೆಂಡರ್ – ಸುದ್ದಿ

**ಆಶ್ವಾಸನೆಯೋ ಬೆದರಿಕೆಯೋ ? ?**

★★★

''ದುಬಾರಿ ಸುಂಕದ ದೇಶ ಭಾರತ '' – ಅಧ್ಯಕ್ಷ ಟ್ರಂಪ್

**''ನಮ್ಮ ಹತ್ತಿರ ಸುಖ ದುಃಖ ? !''**

★★★

ಕ್ರಿಕೆಟ್ ವಿಶ್ವಕಪ್‌ಗೆ ಐ ಪಿ ಎಲ್ ಮಾನದಂಡವಲ್ಲ – ಹೇಳಿಕೆ

**ಅಲ್ಲವೇ ಮತ್ತೇ ! !**

★★★

''ಪ್ರಚಾರಕಣದಲ್ಲಿ ಅಮಿತೋತ್ಸಾಹ '' – ಶೀರ್ಷಿಕೆ

**ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು ! !**

★★★

ಮನೆಗಳ್ಳನ ಬಳಿ ಇತ್ತು ಎರಡುಸಾವಿರ ನಕಲಿ ಕೀ ! !

**ಗಿನ್ನಿಸ್‌ಗೆ ಏಕೆ ಪ್ರಯತ್ನಿಸಬಾರದು ? !**

★★★

ಜನಪ್ರಿಯ ದ್ರಾವಿಡ್‌ಗೆ ''ಡೈರೆಕ್ಟರ್ ಆಫ್ ಕ್ರಿಕೆಟ್'' ಜವಾಬ್ದಾರಿ.

**ಅಪರಂಜಿಯ ಶುಭಾಶಯಗಳು ! !**

# ರಾಜಯೋಗ್ಯ ಸವಾಲಿನ ಪ್ರಸಂಗ

● ವತ್ಸನ

ಬಹು ಹಿಂದೆ ಸ್ಕಾಟ್ಲೆಂಡ್ ಯಾರ್ಡಿನ ಆಹ್ವಾನವನ್ನು ಮನ್ನಿಸಿ ಶರಲೇಖನೊಂದಿಗೆ ನಾನೂ ಸಹಾ ಇಂಗ್ಲೆಂಡಿಗೆ ಹೋಗಿದ್ದ ಬಗ್ಗೆ ಬರೆದದ್ದನ್ನು ಈ ಪುಟಗಳಲ್ಲಿ ನೀವು ಓದಿರಲಿಕ್ಕೆ ಸಾಕು. ನಾವು ಆ ದೇಶದಲ್ಲಿದ್ದಷ್ಟು ದಿನಗಳು ನಮ್ಮನ್ನು ಬಹು ವಿಶ್ವಾಸದಿಂದ, ಆದರದಿಂದ ನೋಡಿಕೊಂಡದ್ದು ಇನ್ಸ್‌ಪೆಕ್ಟರ್ ಜಿಮ್ ಕಥ್‌ಬರ್ಟ್. ಜಿಮ್ ಮತ್ತು ಅವನ ಗೆಳತಿ ಜೆಸ್ಸಿಕಾ ನಮ್ಮ ಬಗ್ಗೆ ತೋರಿದ ಪ್ರೀತಿ ಕಾಳಜಿಗಳನ್ನು ನಾನು ಎಂದಿಗೂ ಮರೆಯಲಾರೆ. ಹಾಗಾಗಿ ಹಲವು ವಾರಗಳ ಹಿಂದೆ ಜಿಮ್ ಶರಲೇಖನಿಗೆ ಫೋನ್ ಮಾಡಿ ತಾನು ಕೆಲಸದ ಮೇಲೆ ಬೆಂಗಳೂರಿಗೆ ಬರುತ್ತಿರುವುದಾಗಿ ತಿಳಿಸಿದಾಗ ನಮ್ಮಿಬ್ಬರಿಗೂ ಆದ ಆನಂದ ಅಷ್ಟಿಷ್ಟಲ್ಲ. ಜಿಮ್ ಸರ್ಕಾರದ ಕೆಲಸದ ಮೇಲೆ ಬಂದಿದ್ದರಿಂದ ಅವನ ವಸತಿ ಸೌಕರ್ಯವನ್ನು ಡಿ.ಐ.ಜಿ ಅವರೇ ಮಾಡಿದ್ದರು. ಒಂದು ಸಂಜೆಯಾದರೂ ಅವನು ನಮ್ಮ ಫ್ಲಾಟಿಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ನಾನು ಅವನನ್ನು ವಿನಂತಿಸಿಕೊಂಡಿದ್ದೆ. ಅವನು ಒಪ್ಪಿ ನಿನ್ನೆ ಸಂಜೆ ನಮ್ಮಲ್ಲಿಗೆ ಬಂದಿದ್ದ. ಅಪರೂಪದ ಅತಿಥಿಗೆ ಪರಿಚಯಿಸಲು ಶರಲೇಖ ನಮ್ಮ ಸ್ನೇಹವಲಯದ ಅಧಿಕಾರಗಳಲ್ಲಿ ಹಲವರನ್ನು ಈ ಸಂತೋಷಕೂಟಕ್ಕೆ ಆಹ್ವಾನಿಸಿದ್ದ.

ಸೌಜನ್ಯಶೀಲ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ, ಯುವ ಆಫೀಸರ್ ಭುವನ್, ಫಾರೆಸ್ಟ್ ಆಫೀಸರ್ ರಾಮಚಂದ್ರ ಗೌಡ ಇವರೆಲ್ಲರೂ ನಮ್ಮ ಆಹ್ವಾನದ ಮೇರೆಗೆ ಬಂದು ಜಿಮ್‌ನ ಬರುವಿಕೆಯನ್ನೇ ಕಾಯುತ್ತಿದ್ದರು. ಅಕಸ್ಮಾತ್ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದ ಕಡ್ಯಮಾಡ ಕಾಡುಮನೆ ಎಸ್ಟೇಟಿನ ಬೆಳ್ಳಿಯಪ್ಪ ಕೂಡ ನಮ್ಮಲ್ಲಿಗೆ ಬಂದಿದ್ದರಿಂದ ಪರಸ್ಪರ ಸ್ನೇಹದ ಬೆಚ್ಚಗಿನ ವಾತಾವರಣ ನಮ್ಮ ಫ್ಲಾಟನ್ನು ತುಂಬಿತ್ತು.

ಇಂಗ್ಲೀಷಿನವರ ಸಮಯ ಪ್ರಜ್ಞೆ ಬಗ್ಗೆ ಬೇರೇ ಹೇಳಬೇಕೆ? ಸಂಜೆ ಏಳಕ್ಕೆ ಸರಿಯಾಗಿ ಜಿಮ್ ನಮ್ಮ ಬಾಗಿಲಲ್ಲಿ ನಿಂತಿದ್ದ. ನೆರೆದಿದ್ದ ಎಲ್ಲರನ್ನೂ ಪರಸ್ಪರ ಪರಿಚಯ ಮಾಡಿಸಿದ ಮೇಲೆ ಮಾತುಕತೆ ನಿರರ್ಗಳವಾಗಿ ಹರಿಯಿತು. ಇದರಲ್ಲೇನೂ ಆಶ್ಚರ್ಯ ಇಲ್ಲ ಅನ್ನಿ. ಒಂದೇ ವೃತ್ತಿಯ ಹಲವರು ▷

**ಅಪರಂಜಿಯ ಹೃದಯಾಂತರಾಳದ ಧನ್ಯವಾದಗಳು**

ನಮ್ಮ ಅಪರಂಜಿಯ ಅಭಿಮಾನಿಗಳೂ ಕೊರವಂಜಿ ಕಾಲದಿಂದಲೂ ಮತ್ತು ಅಪರಂಜಿಯ ಅಭಿಮಾನಿ ಓದುಗರೂ ಆಗಿರುವ

**ಶ್ರೀಮತಿ ಎಚ್.ಎಸ್. ಪದ್ಮ ಮತ್ತು ಶ್ರೀಮತಿ ಎಚ್.ಎಸ್. ರುಕ್ಮಿಣಿ**

ಸಹೋದರಿಯರು ಬಹಳ ಉದಾರ ಮನಸ್ಸಿನಿಂದ ಅಪರಂಜಿಯ ಶ್ರೇಯೋಭಿವೃದ್ಧಿಗಾಗಿ ರೂ. 1,00,000/- (ಒಂದು ಲಕ್ಷ ರೂಪಾಯಿಗಳನ್ನು ) ದೇಣಿಗೆಯಾಗಿ ನೀಡಿರುತ್ತಾರೆ. ಕೊರವಂಜಿ ಅಪರಂಜಿ ಟ್ರಸ್ಟ್ ಮತ್ತು ಅಪರಂಜಿಯ ಸಂಪಾದಕ ಮಂಡಳಿಯ ಪರವಾಗಿ ಶ್ರೀಮತಿ ಪದ್ಮ ಮತ್ತು ಶ್ರೀಮತಿ ರುಕ್ಮಿಣಿ ಸಹೋದರಿಯರಿಗೆ ನಮ್ಮ ಅನಂತಾನಂತ ಧನ್ಯವಾದಗಳು. ಈ ಸಹೋದರಿಯರ ಸೇವೆ ಇನ್ನಿತರರಿಗೂ ಮಾದರಿಯಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಸೇರಿದರೆ ಅದಾವುದೋ ಅವ್ಯಕ್ತ ಬಾಂಧವ್ಯ ಅವರೆಲ್ಲರನ್ನು ಬಂಧಿಸಿ ಸಂವಹನ ಬಹು ಸರಾಗವಾಗಿಬಿಡುತ್ತದೆ.

ನಾನು ಒಳಕ್ಕೆ ಹೋಗಿ ತಿಂಡಿ ತೀರ್ಥಗಳನ್ನು ತಂದು ಅತಿಥಿಗಳಿಗೆ ಸರಬರಾಜು ಮಾಡಲು ಪ್ರಾರಂಭಿಸಿದೆ. ನಾನು ಪ್ರವೇಶಿಸಿದಾಗ ಭುವನ್ ''ಮೊನ್ನೆ ಸುದ್ದಿ ನೋಡಿದ್ರಾ, ವಿಜ್ಞಾನಿಗಳು ಬ್ಲಾಕ್‌ಹೋಲ್ ಒಂದರ ಫೋಟೋ ತೆಗೆಯುವುದರಲ್ಲಿ ಯಶಸ್ವಿಯಾಗಿರುವರಂತೆ. ಅಷ್ಟು ದೂರ ಇರುವ ಒಂದು ಚುಕ್ಕೆಯ ಫೋಟೋ ತೆಗೆಯಬೇಕಾದರೆ ಎಷ್ಟು ಸೂಕ್ಷ್ಮವಾದ ಕ್ಯಾಮೆರಾ ಇರಬೇಕು ಅಲ್ವಾ?'' ಅಂತ ಉದ್ಗರಿಸುತ್ತಿದ್ದ.

''ಸೂಕ್ಷ್ಮ ಅಲ್ಲ, ಗಾತ್ರ. ಪ್ರಪಂಚದ ಸುತ್ತ ಇರೋ ಎಂಟು ರೇಡಿಯೋ ಟೆಲಿಸ್ಕೋಪುಗಳನ್ನು ಒಟ್ಟಿಗೆ ಬಳಸಿದಾಗ ನಮ್ಮ ಭೂಮಿಯ ಗಾತ್ರದ ಟೆಲಿಸ್ಕೋಪು ಸೃಷ್ಟಿಯಾದದ್ದರಿಂದ ಈ ಅಸಾಧ್ಯವೆನಿಸುವ ಕೆಲಸ ಸಾಧ್ಯವಾಯಿತು.'' ಅಂತ ಜಿಮ್ ಉತ್ತರಿಸಿದ.

''ನೀವು ಏನೇ ಹೇಳಿ ವಿಜ್ಞಾನಿಗಳು ಎಷ್ಟೇ ಪ್ರಗತಿ ಸಾಧಿಸಿದರೂ ಅವರು ಉತ್ತರಿಸಲಾಗದ ಸವಾಲುಗಳು ನಿರಂತರವಾಗಿ ಹುಟ್ಟುತ್ತಿರುತ್ತವೆ. ಜೀವ ಸಂಕುಲ ಹುಟ್ಟಿದ್ದಾದರೂ ಹೇಗೆ?, ಚಿಂಪಾಂಜಿ, ಗೊರಿಲ್ಲಾಗಳಂತೆ ಕೇವಲ ಪ್ರಾಣಿಗಳಾಗಿದ್ದ ನಮ್ಮ ಪೂರ್ವಜರಲ್ಲಿ ಮಾನವ ಪ್ರಜ್ಞೆ ಮೂಡಿದ್ದಾದರೂ ಎಂತು? ಇಂತಹ ಸವಾಲುಗಳಿಗೆ ಎಂದಿಗೂ ನಮಗೆ ಉತ್ತರ ಸಿಗಲಾರದು'' ಎಂದು ರಾಮಚಂದ್ರ ತನ್ನ ಅನಿಸಿಕೆಯನ್ನು ಮಂಡಿಸಿದ.

ಮಾತುಕತೆ ಇದೇ ರೀತಿಯಲ್ಲಿ ಗಂಭೀರ ವಿಷಯಗಳ ಅಸುಪಾಸಿನಲ್ಲೇ ಸುಳಿದಾಡುತ್ತಿರುವುದನ್ನು ಕಂಡು ಪರಿಸರವನ್ನು ತಿಳಿಗೊಳಿಸುವ ಉದ್ದೇಶದಿಂದ, ''ನೋಡು ಗೌಡ, ಇಂತಹ ಬಿಡಿಸಲಾಗದ ಸವಾಲುಗಳು ತಮ್ಮ ಮುಂದೆ ಬಂದಾಗ ನಮ್ಮ ಪೂರ್ವಿಕರು ದೇವರಿಗೇ ಗೊತ್ತು ಅಂತ ಹೇಳಿ ಸುಮ್ಮನಾಗುತ್ತಿದ್ದರು. ಈಗ ನಾವೂ ಸಹಾ....'' ಅಂತ ನಾನು ಹೇಳುತ್ತಿದ್ದಾಗಲೇ, ಇನ್ಸ್‌ಪೆಕ್ಟರ್ ಭುವನ್ ಮಾತು ಪ್ರಾರಂಭಿಸಿದ.

''ದೇವರು ಅಂದಾಗ ನೆನಪಿಗೆ ಬಂತು. ಹಿಂದೊಮ್ಮೆ, ಒಮ್ಮೆ ಏನು, ಮೂರು ಬಾರಿ ನೀವು ಮತ್ತು ಶರಲೇಖ ದೇವರನ್ನೇ ಭೇಟಿಯಾಗಿದ್ದ ಪ್ರಸಂಗಗಳ ಬಗ್ಗೆ ನೀವೇ ಬರೆದಿದ್ದಿರಿ. ಅವರನ್ನೇ ಕರೆಸಿ ಯಾವ ಸವಾಲಿಗಾದರೂ ಉತ್ತರ ಪಡೆಯಲಾಗದೇ?'' ಎಂದು ನಸುನಗುತ್ತಾ ಕೇಳಿದ.

ಶರಲೇಖ ಈಗ ಸಂಭಾಷಣೆಯ ದೋಣಿಯನ್ನೇರಿದ.

''ಜಿಮ್, ಭುವನ್ ಹೇಳಿದ ಮಾತು ನಿನಗೆ ಅರ್ಥವಾಗಿಲ್ಲದಿರಬಹುದು. ದೇವತೆಗಳ ರಾಜ ಇಂದ್ರ ದೇವ ನಮ್ಮ ಈ ಕುಚೇಲ ಕುಟೀರಕ್ಕೆ ಬಂದು ನಮ್ಮ ಸಲಹೆ ಕೇಳಿ ಹೋಗಿದ್ದಂತೂ ನಿಜ.''

ಜಿಮ್‌ಗೆ ಇದೆಲ್ಲಾ ಹೊಸದು. ಬಾಯಿ ಬಿಟ್ಟರೆ ಬಣ್ಣಗೇಡು ಅಂದುಕೊಂಡು ಸುಮ್ಮನೆ ಮುಗುಳ್ನಗುತ್ತಾ ಕುಳಿತಿದ್ದ.

ಭುವನ್‌ನ ಉತ್ಸಾಹ ಏರುತ್ತಲೇ ಇತ್ತು. ''ನಮ್ಮ ಮಾನ್ಯ ಅತಿಥಿಗಳ ಮನರಂಜನೆಗಾಗಿ ಈಗೊಂದು ಆಟ. ನಮ್ಮಲ್ಲಿ ಯಾರಾದರೊಬ್ಬರು ಒಂದು ಜಟಿಲವಾದ, ಬಿಡಿಸಲಾಗದ ಸಮಸ್ಯೆಯನ್ನು ಸವಾಲಿನ ರೂಪದಲ್ಲಿ ಒಂದು ಚೀಟಿಯಲ್ಲಿ ಬರೆದು ಈ ಹೂದಾನಿಯಲ್ಲಿ ಹಾಕಬೇಕು. ಆಮೇಲೆ ಶರಲೇಖ ಇಂದ್ರದೇವರನ್ನು ಆವಾಹನೆ ಮಾಡಿ ಅವರಿಂದ ಉತ್ತರ ಪಡೆಯಬೇಕು. ಉತ್ತರ ಪಡೆದನಂತರ ಕೇಳಿದ ಸವಾಲು ಏನೆಂದು ಯಾರು ಸರಿಯಾಗಿ ಊಹಿಸುವರೋ ಅವರೇ ಗೆದ್ದಂತೆ.''

ಭುವನ್ ಪ್ರಸ್ತಾಪಿಸಿದ ಈ ಪಾರ್ಟಿ ಆಟ ಶರಲೇಖನ ಕುತೂಹಲವನ್ನು ಕೆರಳಿಸಿತು.

ಶರಲೇಖ ಹೇಳಿದ. ''ಭುವನ್, ಇಂದ್ರದೇವ ಕಳೆದ ಬಾರಿ ಇಲ್ಲಿಗೆ ಬಂದಾಗ ಅವನ ಕೋರಿಕೆಯನ್ನು ನಾನು ನಡೆಸಿಕೊಡಲಿಲ್ಲ (ದೇವತಾ ಪ್ರಭುತ್ವ ಪ್ರಸಂಗ) ಹಾಗಾಗಿ ಈಗ ಅವರ

ಮಂತ್ರದಂಡವನ್ನು ಬಳಸಿ ಆವಾಹನೆ ಮಾಡಿದರೆ ಇಂದ್ರದೇವ ಬರುವುದೇ ಸಂಶಯ ಆದರೂ ಪ್ರಯತ್ನ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಈಗ ಸವಾಲು ಕೇಳುವುದು ಯಾರು ಎಂಬುದನ್ನು ನಿರ್ಧರಿಸಬೇಕಲ್ಲಾ''

''ಅದಕ್ಕೇನು ಮುಟ್ಟಿಸಬೇಕ್ರೀ?, ಇಲ್ಲಿರ್ರೋ ನಾವೆಲ್ಲಾ ಪೊಲೀಸರು. ಬೆಳ್ಳಿ ಸಾಹೇಬ್ರು ಒಬ್ರೇ ಸಿವಿಲ್ಲು. ಸಿವಿಲ್ಲು ಸೃಷ್ಟಿಸಿದ ಸವಾಲುಗಳಿಗೆ ಉತ್ತರ ಹುಡುಕೋದು ಪೊಲೀಸರ ಕೆಲಸ. ಬೆಳ್ಳಿ ಸಾಹೇಬ್ರೇ ಸವಾಲಿನ ಚೀಟಿ ಬರೆದರಾತು'' ಅಂತ ಉಳ್ಳಾಗಡ್ಡಿ ಸಾಹೇಬ್ರು ಅಪ್ಪಣೆ ಕೊಡಿಸಿದ ಮೇಲೆ ಬೆಳ್ಳಿ ನಾನು ಕೊಟ್ಟ ಬಿಳೀಹಾಳೆಯನ್ನು ತೆಗೆದುಕೊಂಡು, ದೂರದ ಮೂಲೆಗೆ ಹೋಗಿ, ಯಾರಿಗೂ ಕಾಣಿಸದಂತೆ ಸವಾಲನ್ನು ಬರೆದು ಚೆನ್ನಾಗಿ ಮೂರು ಮಡಿಕೆ ಹೂದಾನಿಯಲ್ಲಿ ಹಾಕಿದ.

ಶರಲೇಖ ಬಡುವಿನ ಹತ್ತಿರ ಹೋಗಿ ಇಂದ್ರ ದೇವ ಕರುಣಿಸಿದ್ದ ಮಂತ್ರದಂಡವನ್ನು ಬಹು ಗೌರವದಿಂದ ಎತ್ತಿ ಹಿಡಿದು, ಏಕಾಗ್ರತೆಯಿಂದ ಇಂದ್ರದೇವನನ್ನು ಆವಾಹನೆ ಮಾಡಿದ.

ಮರುಕ್ಷಣವೇ ನಾವು ಕುಳಿತಿದ್ದ ಹಾಲ್‌ನಲ್ಲಿ ಕಣ್ಣು ಕೋರೈಸುವ ಬೆಳಕಿನ ಮಧ್ಯೆ ಸಾಕ್ಷಾತ್ ಇಂದ್ರದೇವ ಪ್ರತ್ಯಕ್ಷವಾಗಿದ್ದ.

''ನಮ್ಮ ಸಭೆಯಲ್ಲಿ ಫ್ಲೋರ್ ಟೆಸ್ಟ್ ಇದ್ದಾಗ ಐವರು ಪಕ್ಷಾಂತರಿಗಳ ಮನಸ್ಸನ್ನು ಬದಲಿಸುವಂತೆ ಮಾಡಿದ್ದರಿಂದ ನನಗೆ ಅಸಮಾಧಾನವಾಗಿದ್ದು ನಿಜ. ಆದರೆ ಮಾನವರು ಭಕ್ತಿಯಿಂದ ಕರೆದಾಗ ಓಗೊಟ್ಟು ಬರುವುದು ದೇವತೆಗಳ ಪವಿತ್ರ ಧರ್ಮ. ಹಾಗಾಗಿ ಇಲ್ಲಿ ಬಂದಿದ್ದೇನೆ. ಬಂದ ತಕ್ಷಣ ನೀವು ನನ್ನನ್ನು ಇಲ್ಲಿಗೆ ಕರೆದ ಉದ್ದೇಶ ಅರ್ಥವಾಯಿತು. ಇಗೋ ನಿಮ್ಮ ಉತ್ತರ ಹೀಗಿದೆ. ಸಾವಧಾನದಿಂದ ಕೇಳಿಸಿಕೊಳ್ಳಿ.

ಬಹು ಹಿಂದಿನ ಕಾಲದ ಮಾತು. ಆ ದಿನಗಳಲ್ಲಿ ದೇವತೆಗಳು ಹಾಗೂ ಮಾನವರುಗಳ ಮಧ್ಯೆ ಬಹುವಾಗಿ ಸಂಪರ್ಕ ಇತ್ತು. ಕಠಿಣ ತಪಸ್ಸನ್ನು ಮಾಡಿ ದೇವಲೋಕಕ್ಕೇರುವುದು ಸಾಮಾನ್ಯ ಘಟನೆಯಾಗಿದ್ದ ಕಾಲವದು. ಆಗ ಇಲ್ಲಿ ವಿಠಲವರ್ಮನೆಂಬ ರಾಜ ರಾಜ್ಯವಾಳುತ್ತಿದ್ದ. ಹಿಮಾಲಯದ ತಪ್ಪಲಲ್ಲಿ ಬೆಳೆಯುತ್ತಿದ್ದ ಸೋಮರಸದ ಮೂಲಿಕೆಗಳನ್ನು ಇಲ್ಲಿಗೆ ತಂದು, ಸೋಮರಸವನ್ನು ತಯಾರಿಸಿ ದೇವಲೋಕಕ್ಕೆ ಸರಬರಾಜು ಮಾಡುವುದು ಆ ರಾಜನ ಒಂದು ಹವ್ಯಾಸವಾಗಿತ್ತು. ಇದರಿಂದಾಗಿ ನಾನು ಅವನ ಬಗ್ಗೆ ಬಹುವಾಗಿ ಅಭಿಮಾನ ತಾಳಿದ್ದೆ. ಆದರೆ ಅವನ ನಂತರ ಅವನ ಮಗ ಗದ್ದುಗೆಗೆ ಏರಿದ ಮೇಲೆ ಸೋಮರಸದ ಸರಬರಾಜಿನಲ್ಲಿ ಏರುಪೇರಾಯಿತು. ಮೊದಲ ಒಂದೆರಡು ಬಾರಿ ಛೆ ಹುಡುಗು ಬುದ್ಧಿ ಎಂದು ನಾನು ಅವನನ್ನು ಕ್ಷಮಿಸಿದ್ದೆ. ಕೊನೆಗೆ ಅವನು ಸೋಮರಸವನ್ನು ರವಾನಿಸಲು ಬಂದ ಅಪ್ಸರೆಯರನ್ನೇ ಕಾಡತೊಡಗಿದಾಗ ನಾನು ಅವನಿಗೆ ಶಾಪವನ್ನು ಕೊಡಬೇಕಾಯಿತು. ''ನಿನ್ನ ವಂಶಜರಿಗೆ ನಿನಗಿಷ್ಟವಾದ ಹವ್ಯಾಸದಲ್ಲಿ ಎಂದಿಗೂ ಯಶಸ್ಸು ಸಿಗದಿರಲಿ'' ಎಂಬುದೇ ಆ ಶಾಪ. ಇದೇ ನಿಮ್ಮ ಸವಾಲಿಗೆ ಉತ್ತರ'' ಎಂದು ಹೇಳಿ ಇಂದ್ರದೇವ ಅಂತರ್ಧಾನವಾದ.

ಬೆಳ್ಳಿ ಕೇಳಿದ್ದ ಸವಾಲು ಏನಿರಬಹುದು ಎಂಬ ಒಗಟನ್ನು ಬಿಡಿಸಲು ಯಾರಿಗೂ ಸಾಧ್ಯವಾಗಲಿಲ್ಲ. ಕೊನೆಗೆ ನಾವೆಲ್ಲಾ ಗಿವಪ್ ಅಂದ ಮೇಲೆ ರಾಮಚಂದ್ರ ಹೂದಾನಿಯಬಳಿ ಸಾಗಿ ಅದರಲ್ಲಿದ್ದ ಚೀಟಿಯನ್ನು ಹೊರತೆಗೆದು ನಮ್ಮೆಲ್ಲರ ಮುಂದೆ ಇಟ್ಟ.

ಆ ಚೀಟಿಯಲ್ಲಿ ಹೀಗಿತ್ತು.

''ಆರ್.ಸಿ.ಬಿ. ಯಾಕೆ ಹೀಗೆ?''

''ಭಲೆ, ಬೆಳ್ಳಿ, ಇಂದ್ರದೇವನಿಗೆ ರಾಜಯೋಗ್ಯವಾದ ಸವಾಲನ್ನೇ ಎಸೆದೆ. ವಿಠಲ ವರ್ಮನ ಮಗ ವಿಜಯ ವರ್ಮ! ನಿಜವಾಗಿಯಾ ರಾಯಲ್ ಛಾಲೆಂಜೇ ಸರಿ!'' ಎಂದು ಉದ್ಗರಿಸಿದ ರಾಮಚಂದ್ರ. ■

# ಕರುಣೆಗೆ ಕೊಟ್ಟ ಕಪ್ಪ

**● ಪ್ರಕಾಶ್**

ನಮ್ಮ ಮದುವೆಯಾಗಿ ಇಪ್ಪತ್ತೈದು ವರ್ಷಗಳು ಕಳೆದಿವೆ. ಭಗವಂತನ ದಯೆಯಿಂದ ನಮ್ಮ ವೈವಾಹಿಕ ಜೀವನ ಸುಸೂತ್ರವಾಗಿಯೇ ಸಾಗಿದೆ. ನನ್ನ ಕೆಲಸ, ಬಂಧುಮಿತ್ರರ ಒಡನಾಟ ಇವುಗಳಿಂದ ಜೀವನದ ಏರುಪೇರುಗಳಿದ್ದರೂ ತಕ್ಕಮಟ್ಟಿಗೆ ನಾವಿಬ್ಬರೂ ಸುಖವಾಗಿರುವುದು ಸಾಧ್ಯವಾಗಿದೆ. ಒಬ್ಬನೇ ಮಗ ಶೇಖರ್ ದೂರದ ಅಮೆರಿಕೆಯಲ್ಲಿ ಪತ್ನಿಯೊಡನೆ ಜಗಳವಾಡಿಕೊಂಡು ಆರಾಮವಾಗಿದ್ದಾನೆ. ಆಗಾಗ್ಗೆ ವಾಪಸ್ ಬರುತ್ತೇವೆ ಅಂತ ಬೆದರಿಸುತ್ತಾನೆ!! ಹೋದ ತಿಂಗಳು ಹತ್ತನೆಯ ತಾರೀಖು, ನಾವು ಬಾಳದೋಣಿಯಲ್ಲಿ ಒಟ್ಟಿಗೆ ಕಾಲಿಟ್ಟ ದಿನದ ಬೆಳ್ಳಿಯ ಹಬ್ಬ, ಅರ್ಥಾತ್ ನಮ್ಮ ಸಿಲ್ವರ್ ವೆಡಿಂಗ್ ಆ್ಯನಿವರ್ಸರಿ. ಶಾಲಿನಿಗೆ ಒಂದು ಸರ್‌ಪ್ರೈಸ್ ಕೊಡೋಣ ಅಂತ ಸುಮಾರು ದುಬಾರಿ ಹೋಟೆಲ್ ಒಂದರಲ್ಲಿ ಟೇಬಲ್ ಬುಕ್ ಮಾಡಿದೆ. ಸಂಜೆ ನಾವಿಬ್ಬರೂ ಮನೆಯ ಬಳಿಯ ಪಾರ್ಕ್ ಒಂದರಲ್ಲಿ ವಾಕಿಂಗ್ ಮಾಡಲು ಹೋದೆವು. ತಂಗಾಳಿ, ಹಕ್ಕಿಗಳ ಕಲರವ, ಆಡುತ್ತಿರುವ ಮಕ್ಕಳ ಉತ್ಸಾಹದ ಕೂಗಾಟ ಇವೆಲ್ಲ ನಮಗೆ ಬಹುವಾಗಿ ಮುದವನ್ನು ತಂದವು.

ನಾವು ಕುಳಿತಿದ್ದ ಕಲ್ಲುಬೆಂಚಿನ ಹತ್ತಿರವೇ ಒಬ್ಬಾತ ಕುಳಿತು ಪೇಪರ್ ಓದುತ್ತಿದ್ದ. ನನ್ನ ನಗೆಚಾಟಿಕೆಯ ಮಾತುಗಳು ಶಾಲಿನಿಯಲ್ಲಿ ನಗೆಯ ಬುಗ್ಗೆಗಳನ್ನೇ ಹೊರಡಿಸಿದ್ದವು. ನಮ್ಮ ಪಕ್ಕದ ಬೆಂಚಿನ ಅಪರಿಚಿತ ನಮ್ಮ ಕಡೆ ನೋಡುತ್ತಿದ್ದು ನಾವು ಅದನ್ನ ಗಮನಿಸಿದಾಗ ಆತ ಬೇರೆಯ ಕಡೆ ತಿರುಗುತ್ತಿದ್ದ. ಪಾಪ, ನಾವು ಆತನನ್ನು ತಪ್ಪಿತಸ್ಥನಂತೆ ಕಾಣಬಹುದು ಎಂದು ಅವನ ಹಾವಭಾವಗಳು ಸೂಚಿಸುತ್ತಿದ್ದವು. ಆತನ ವಯಸ್ಸು ಸುಮಾರು ಐವತ್ತಿರಬಹುದು. ಅರೆನರೆತ ತಲೆಗೂದಲು. ಸ್ವಲ್ಪ ಸಮಯದನಂತರ ಆತ ಎದ್ದುನಿಂತ. ನಿಧಾನವಾಗಿ ನಮ್ಮ ಬಳಿ ಬಂದ. ಹತ್ತಿರ ಬಂದು ನಿಂತು, ''ಹೆದರ ಬೇಡಿ ತಾಯಿ, ನನ್ನ ಹೆಸರು ಶ್ಯಾಮಸುಂದರ್, ವೃತ್ತಿಯಲ್ಲಿ ಶಾಲಾ ಉಪಾಧ್ಯಾಯ. ನಿಮ್ಮಂತೆ ನನ್ನದೂ ಒಂದು ಸುಖಸಂಸಾರವಾಗಿತ್ತು. ಆದರೆ ವಿಧಿವಿಲಾಸ, ನನ್ನ ಮಡದಿ ಸರಳಾ ರೈಲು ಅಪಘಾತದಲ್ಲಿ ಸಿಕ್ಕಿ ಹರಿಪಾದ ಸೇರಿದಳು. ಮಗಳು ಈಗ ದೆಹಲಿಯಲ್ಲಿ, ನಾನು ಇಲ್ಲಿ ಒಂಟಿ ಜೀವನ ನಡೆಸುತ್ತಿರುವೆ. ಆಗಾಗ ನಿಮ್ಮಂತಹ ಸಂತಸ ತುಂಬಿದ ದಂಪತಿಗಳನ್ನು ನೋಡಿದಾಗ ಮನಸು ಸ್ವಲ್ಪ ಹಗುರವಾಗುತ್ತದೆ. ನನ್ನ ಸುದಿನಗಳ ನೆನಪಿನ ದೋಣಿಯಲ್ಲಿ ಮನಸ್ಸು ಪಯಣಿಸುತ್ತದೆ.'' ಎಂದು ಆತ ಹೇಳುತ್ತಿರುವಾಗ ಶಾಲಿನಿಯ ಕಣ್ಣಂಚು ಹನಿಗೂಡಿತು. ನನಗೂ ಗಂಟಲು ಒತ್ತಿಬಂತು. ಆತ ಕಣ್ಣೊರಸಿಕೊಂಡು, ''ಸರಿ, ನಾನು ಬರುತ್ತೇನೆ'' ಎಂದು ಹೇಳಿ ಹೊರಡುವ ಮುಂಚೆ ಭಾವಾವೇಶದಲ್ಲಿ ನನ್ನ ಸನಿಹಕ್ಕೆ ಬಂದು ನನ್ನನ್ನು ತಬ್ಬಿಕೊಂಡು. ಅನಂತರ ''ನಿಮಗಿಬ್ಬರಿಗೂ ನನ್ನ ವಂದನೆಗಳು'' ಎಂದು ಹೇಳಿ ಪಕ್ಕದ ರಸ್ತೆಯಲ್ಲಿ ನಿಲ್ಲಿಸಿದ್ದ ಸ್ಕೂಟರನ್ನು ಏರಿ ಹೊರಟುಹೋದ.

ನಾವಿಬ್ಬರೂ ಸ್ವಲ್ಪ ಹೊತ್ತು ಮೌನದಲ್ಲಿ ನಿಂತಿದ್ದೆವು. ಆಗಲೇ ನನಗೆ ನಮ್ಮ ಸಂಜೆಯ ಡಿನ್ನರ್ ನೆನಪಿಗೆ ಬಂದದ್ದು. ಕೋಟಿನ ಜೇಬು ಮುಟ್ಟಿ ನೋಡಿಕೊಂಡೆ. ನಗದು ಇಟ್ಟಿದ್ದ ಪರ್ಸ್ ಮಂಗಮಾಯ. ಸದ್ಯಕ್ಕೆ ಕ್ರೆಡಿಟ್ ಕಾರ್ಡ್ ಒಳಜೇಬಿನಲ್ಲಿತ್ತು. ಡಿನ್ನರ್ ಸಂತೋಷದಿಂದ ಮುಗಿಸಿ ರಾತ್ರಿ ಮನೆ ಸೇರಿದಾಗ ಗಂಟೆ ಹನ್ನೊಂದಾಗಿತ್ತು. ನಾನಿದನ್ನ ಶಾಲಿನಿಗೆ ಹೇಳಲೇ ಇಲ್ಲ, ನೀವೂ ಕೂಡ ಯಾರಿಗೂ ಇದನ್ನ ಹೇಳಬೇಡಿ ಪ್ಲೀಸ್!

■

# ಪ್ರಕೃತಿ ಚಿಕಿತ್ಸೆ

● ಗೀತಾ ಕುಂದಾಪುರ

ನೋಡು ನೋಡುತ್ತಿದ್ದಂತೆ ನಮ್ಮ ಲೇಔಟಿನ ಹೆಂಗಸರು ಸಣ್ಣಗಾಗ ತೊಡಗಿದರು. ಮೊದಲು ಗುಡಾಣದಂತಹ ಹೊಟ್ಟೆಯ ಇಬ್ಬರು ಹೆಂಗಸರು ಸಣ್ಣಗಾದರು, ನಂತರ ದಿನಾ ಸಾಯಂಕಾಲ ಏದುರಿಸು ಬಿಡುತ್ತಾ ಪಾರ್ಕಿನಲ್ಲಿ ಗರಗರ ತಿರುಗುತ್ತಿದ್ದ ನಾಲ್ಕು ಜನರ ಹೆಂಗಸರು ಸಣ್ಣಗಾದರು, ಗಣೇಶ ಹಬ್ಬಕ್ಕೆ ಕುಂಕುಮಕ್ಕೆ ಕರೆದಾಗ ಲೇಔಟಿನ ಸುಮಾರು ಎಂಟು, ಹತ್ತು ಹೆಂಗಸರಾದರೂ ಸಣ್ಣಗಾಗಿದ್ದರು. ಹೆಂಗಸರು ಸಣ್ಣಗಾಗುತ್ತಿದ್ದಂತೆ ಪಾರ್ಕಿನಲ್ಲಿ ವಾಕಿಂಗ್ ಬರುವುದು ಕಡಿಮೆಯಾಯಿತು. ಯಾವುದೋ ಅಂಟು ರೋಗ ಬಂದಿದೆಯೇ ಇವರಿಗೆ? ನೋಡಲು ಖಾಯಿಲೆ ಬಂದ ಹಾಗಿರಲಿಲ್ಲ, ಸಂತೋಷವಾಗೇ ಇದ್ದರು, ಕುಣಿದು ಕುಪ್ಪಳಿಸುವಂತಿದ್ದರು. ಏನು ವಿಶೇಷ ಎಲ್ಲರೂ ಒಮ್ಮೆಲೆ ಸಣ್ಣಗಾಗಿದ್ದೀರಲ್ಲ, ಭಾರಿ ಡಯಟ್ಟಾ? ಒಬ್ಬರು ಮತ್ತೊಬ್ಬರ ಮುಖ ನೋಡಿಕೊಂಡು ಏನಿಲ್ಲ ಆಂಟಿ ಎಂದರು. ಆಂಟಿ ಶಬ್ಧ ಕೇಳಿ ಮೆಟ್ಟಿ ಬಿದ್ದೆ, ಇವರು ನಿನ್ನೆ ಮೊನ್ನೆಯವರೆಗೆ ಹೆಸರು ಹೇಳಿ ಕರೆಯುತ್ತಿದ್ದರು ಇಲ್ಲವೆ ಗೀತಕ್ಕ ಎನ್ನುತ್ತಿದ್ದರು. ಇವರುಗಳು ಏಳೆಂಟು ಕೇಜಿ ಸಣ್ಣಗಾಗಿದ್ದು ಹೌದು ಆದರೆ ಅವರ ವಯಸ್ಸು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿತ್ತೇ ಹೊರತು ಕಡಿಮೆಯಲ್ಲ, ನನ್ನದೂ ಅಷ್ಟೇ, ಆದರೆ ಇವರುಗಳು ಸಣ್ಣಗಾಗಿ ನನ್ನನ್ನು ಆಂಟಿಯ ಸ್ಥಾನಕ್ಕೇರಿಸಿದ್ದಾದರೂ ಏಕೆ? ಬೇಸರವಾಯಿತು.

ಮೊನ್ನೆ ನಮ್ಮ ಲೇಔಟಿನ ಉದ್ದದ ದಾರಿಯಲ್ಲಿ ನಡೆದುಕೊಂಡು ದೇವಸ್ಥಾನಕ್ಕೆ ಹೊರಟಿದ್ದೆ. ಸ್ವಲ್ಪ ದೂರ ನಡೆದಿದ್ದೇನೋ ಇಲ್ಲವೋ ಸಂಜೆಯ ಹೊತ್ತಿನಲ್ಲೂ ಕಣ್ಣಿಗೆ ತಂಪು ಕನ್ನಡಕ, ಕೆಂಪು ಲಿಪ್‌ಸ್ಟಿಕ್, ಜೀನ್ಸ್ ಇಲ್ಲವೆ ಸ್ಕರ್ಟ್ ಧರಿಸಿದ ಏಳೆಂಟು ಹೆಣ್ಣುಮಕ್ಕಳು ಎದುರಾದರು, ಇದ್ಯಾರಪ್ಪ ಅನ್ನಿಸಿತು, ನಮ್ಮ ಲೇಔಟಿನ ಹೆಚ್ಚಿನ ಹೆಣ್ಣು ಮಕ್ಕಳ ಗುರುತು ಪರಿಚಯವಿತ್ತು, ಅವರ್ಯಾರೂ ಅಲ್ಲ, ಹೆಣ್ಣು ಮಕ್ಕಳು ಹತ್ತಿರ ಬರುತ್ತಿದ್ದಂತೆ ಜೋತು ಬಿದ್ದ ಕೆನ್ನೆ, ಗುಳಿ ಬಿದ್ದ ಕಣ್ಣುಗಳನ್ನು ನೋಡಿ ಇವರು ಹುಡುಗಿಯರಂತೆ ವೇಷ ಧರಿಸಿದ ಹೆಂಗಸರೆಂದು ತೋರಿತು, ಮತ್ತು ಹತ್ತಿರಕ್ಕೆ ಬಂದಾಗ ಇವರನ್ನು ಎಲ್ಲಿಯೋ ನೋಡಿದ್ದೇನೆ ಅನ್ನಿಸಿತು. ಹಾಯ್ ಆಂಟಿ ಎಲ್ಲಿಗೆ ಹೊರಟಿದ್ದೀರಿ? ಎಂದಾಗ ಸ್ವರದ ಪರಿಚಯವಾಯಿತು, ಇವರುಗಳು ಮತ್ಯಾರೂ ಅಲ್ಲ ನಮ್ಮ ಮಹಿಳಾ ಮಂಡಳಿಯ ಹೆಂಗಸರೇ, ಎಲ್ಲರೂ ಏಕದಂ ಸಣ್ಣಗಾಗಿದ್ದು ಮಾತ್ರ ಅಲ್ಲ ಕಾಲೇಜು ಹುಡುಗಿಯರ ಡ್ರೆಸ್ಸುಗಳನ್ನೂ ಹಾಕತೊಡಗಿದ್ದರು. ಯಾರೂ ಪಾರ್ಕಿನಲ್ಲಿ ಕಾಣಿಸುತ್ತಿಲ್ಲ, ವಾಕಿಂಗ್ ಮಾಡುವುದನ್ನು ಬಿಟ್ಟು ಮನೆಯಲ್ಲೇ ಎಕ್ಸರ್ಸೈಸ್ ಮಾಡುತ್ತಿದ್ದೀರಾ ಹೇಗೆ?, ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡು ಕಿಸಿಕಿಸಿ ನಕ್ಕರು, ಅದರಲ್ಲೊಬ್ಬಳು ವಯ್ಯಾರದಿಂದ ಎಕ್ಸರ್ಸೈಸ್, ಯೋಗ ಒಂದೂ ಇಲ್ಲ, ಹೀಗೆ ಜಾಲಿಯಾಗಿದ್ದೀವಿ ಎಂದಳು, ಉಳಿದವರು ನನ್ನನ್ನು ಒಂದೂ ಅರಿಯದ ಗೂಬೆಯನ್ನು ನೋಡುವಂತೆ ನೋಡಿದರು, ಇಲ್ಲ ನನಗೆ ಹಾಗೆ ಅನ್ನಿಸಿತೋ.

ನನಗೆ ತಲೆಬಿಸಿ ಶುರುವಾಯಿತು, ತಲೆಬಿಸಿಯಿಂದ ಮತ್ತೆರಡು ಕೇಜಿ ದಪ್ಪಗಾದೆ. ನಾನೇನು ಅಷ್ಟು ದಪ್ಪಗಿಲ್ಲ, ಹಾಗೆಂದುಕೊಂಡು ನನಗೆ ನಾನು ಸಮಾಧಾನ ಪಟ್ಟುಕೊಳ್ಳುತ್ತಿದ್ದೇನೆ. ನಾನು ಅಷ್ಟೊಂದು ದಪ್ಪ ಗಿಲ್ಲ ಅನ್ನುವ ಮಟ್ಟದಲ್ಲಿರಲು ದಿನಕ್ಕೆ 5-6 ಕಿಮೀ. ನಡೆಯುತ್ತೇನೆ, ಅರ್ಧ

ಗಂಟೆಯಿಂದ ಮುಕ್ಕಾಲು ಗಂಟೆ ಯೋಗ ಮಾಡುತ್ತೇನೆ. ಸಿಹಿ ತಿಂಡಿಗಳೆಂದರೆ ಇಷ್ಟ ದಪ್ಪಗಾಗದಿರಲೆಂದು ಅವುಗಳನ್ನು ತಿಂದಂತೆ ಮಾಡಿ ಎಂಜಲು ನುಂಗುತ್ತೇನೆ. ತುಪ್ಪದ ರುಚಿ ಮರೆತು ಹೋಗಿದೆ. ಇಷ್ಟೆಲ್ಲಾ ತ್ಯಾಗ ಮಾಡಿದರೂ ತೆಳ್ಳಗಿದ್ದೇನೆ ಎಂದು ಹೇಳಿಕೊಳ್ಳುವಂತಿರಲಿಲ್ಲ.

ನಮ್ಮ ಹಿಂದಿ ಸಿನೆಮಾ ನಟಿಯರನ್ನು ಗಮನಿಸಿದ್ದೀರಾ? ಅವರು ತಿನ್ನುವುದನ್ನು ಮರೆತು ಯುಗಗಳೇ ಆಗಿರಬೇಕು, ತಿಂಡಿ ತೀರ್ಥಗಳನ್ನು ನೋಡಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಿರಬೇಕು. ಇನ್ನು ಹಿಂದಿ ಟಿವಿ ಸೀರಿಯಲ್ಲಿನ ನಟಿಯರೂ ಅಷ್ಟೆ ಕಳೆದವಾರ ಗುಂಡಗಾಗಿ ಕಣ್ಣು ತುಂಬುತ್ತಿದ್ದವಳು ಈ ವಾರ ವಾಷಿಂಗ್ ಮೆಷ್ಟಿನ್ನಿನಲ್ಲಿ ಎರಡು ಸುತ್ತು ತಿರುಗಿ ಬಂದವಳಂತೆ, ಹಿಂಡಿದ ಬಟ್ಟೆಯಂತೆ, ಗಾಳಿ ತೆಗೆದ ಬೆಲೂನಿನಂತೆ ಏಕ್‌ದಂ ಸಣ್ಣಗಾಗಿದ್ದಳು. ಮತ್ತೆರಡು ಚ್ಯಾನಲ್ ತಿರುಗಿಸಿದರೆ ಅಲ್ಲೂ ಅಷ್ಟೇ. ನಟಿಮಣಿಯರು ಗಾಳಿ ಅವರ ಮೈಯ ಕೊಬ್ಬು ಹೀರಿದವರಂತೆ ಸಣ್ಣಗಾಗಿದ್ದರು. ದಿನದಿಂದ ದಿನಕ್ಕೆ ಸಣ್ಣಗಾಗುವುದಲ್ಲ, ಏಕದಂ 20–25 ಕೇಜಿ ಮೈಯ ತೂಕವನ್ನು ಇಳಿಸಿಕೊಳ್ಳುವುದು. ಇವರ–ಇದರ ಗುಟ್ಟು ಆ ಬ್ರಹ್ಮನಿಗಾದರೂ ಗೊತ್ತಿರಬಹುದೇ? ಅಷ್ಟೇ ಅಲ್ಲ ಕಪ್ಪು ಬಣ್ಣದ ಚರ್ಮ ಯಾವ ಕ್ರೀಮಿನ ಹಂಗಿಲ್ಲದೆ ಬಿಳಿ ಬಣ್ಣವಾಗುತ್ತದೆ, ಮೊಂಡು ಮೂಗುಗಳು ರಾತ್ರಿ ಬೆಳಗಾಗುವುದರಲ್ಲಿ ಉದ್ದ ಬೆಳೆದಿರುತ್ತದೆ, ತೆಳು ತುಟಿ ಏಕದಂ ಜೇನು ನೊಣ ಕಚ್ಚಿದ ಹಾಗೆ ಊದಿರುತ್ತದೆ, ಇನ್ನು ಕೆಲವರ ಬಾಯಿಯ ಆಕಾರವೇ ಬದಲಾಗಿರುತ್ತಿದೆ, ಅವರ ಕಣ್ಣೋ, ಕಿವಿಯನ್ನೋ ನೋಡಿ ಗುರುತು ಹಿಡಿಯಬೇಕು. ಬ್ರಹ್ಮನಿಗೆ ಮಾತ್ರ ಸೃಷ್ಟಿಯ ಗುಟ್ಟು ಗೊತ್ತಿದೆಯೆಂದು ಎಣಿಸಿದ್ದೆ, ಆದರೀಗ ಬ್ರಹ್ಮನಿಗೇ ಸವಾಲೊಡ್ಡುವಂತಹ, ಅವನ ಸೃಷ್ಟಿಯನ್ನೇ ಬದಲಾಯಿಸುವ ನಿಪುಣರು ಹುಟ್ಟಿಕೊಂಡಿದ್ದಾರೆ. ಈಗ ಯಾರು ಬೇಕಾದರೂ ಬೇಕಾದ ಆಕಾರದಲ್ಲಿ, ಬೇಕಾದ ಬಣ್ಣದಲ್ಲಿ ಇರಬಹುದು, ನಿಜಕ್ಕೂ ಇದು ಸೌಂದರ್ಯ ಪ್ರಿಯರ ಸುವರ್ಣ ಯುಗ, ಕೇವಲ ದುಡ್ಡೊಂದು ಇದ್ದರೆ ಸಾಕು. ಹೆಂಗಸರ ಸೌಂದರ್ಯ ವರ್ಧಿಸಲು ಅತೀ ಹೆಚ್ಚು ಆವಿಷ್ಕಾರಗಳಾಗಿವೆ.

ಇನ್ನು ನನ್ನ ಸಣ್ಣಗಾದ ಗೆಳತಿಯರ ಗುಟ್ಟು ರಟ್ಟಾಗುವ ಕಾಲ ಬಂದೇ ಬಂತು. ಅಂದು ನಮ್ಮ ಲೇಔಟಿನ ಒಬ್ಬರ ಮನೆಯಲ್ಲಿ ಸತ್ಯನಾರಾಯಣ ಪೂಜೆ, ಪರಿಚಯವಿರುವ ಹೆಂಗಸರನ್ನೆಲ್ಲಾ ಕರೆದಿದ್ದರು. ಸೀರೆಯನ್ನುಟ್ಟು ಅವರೂ ಬಂದರು, ತಮ್ಮ ಮೈಯಲ್ಲಿ ಕೊಬ್ಬಿನಂಶ ಇಲ್ಲವೆಂದು ತೋರುವಂತೆ ಅಲ್ಲಿ ಇಲ್ಲಿ ಪ್ರದರ್ಶನ ಮಾಡುತ್ತಾ ಬಂದರು ತೆಳ್ಳಗಾದ ನೀರೆಯರು, ಮುಖದಲ್ಲಿ ಅರ್ಧ ಇಂಚಿನ ಮೇಕಅಪ್ ಇತ್ತು. ಏನೋ ಒಂದು ತರಹದ ಗತ್ತು, ಬಳುಕುವ ಸೊಂಟವನ್ನು ಮತ್ತಷ್ಟು ಬಳುಕಿಸಿದರು, ಬಾಗಿದರು ಸುಂದರಿಯರು.

ಊಟದ ಸಮಯದಲ್ಲಿ ನನ್ನ ಪಕ್ಕದಲ್ಲೇ ಕೂತಿದ್ದರು ಅವರು. ಪಕ್ಕದಲ್ಲಿ ಏನು ಬಂದರೂ ಬೇಡ ಎನ್ನುವ ಸ್ವರ ಕೇಳಿ ತಲೆಯೆತ್ತಿದರೆ ನನ್ನ ಬಳುಕುವ ಗೆಳತಿಯರ ಎಲೆಯಲ್ಲಿ ಕೋಸಂಬರಿ, ಪಲ್ಯ ಮಾತ್ರ ಇತ್ತು, ಬೇರೇನನ್ನೂ ಹಾಕಿಸಿಕೊಂಡಿರಲಿಲ್ಲ, ಒಂದು ಚಮಚ ಸತ್ಯನಾರಾಯಣ ಪ್ರಸಾದವನ್ನೂ ಏಳೆಂಟು ಜನ ಹಂಚಿಕೊಂಡು ತಿಂದರು. ಕೋಸಂಬರಿ, ಪಲ್ಯದಲ್ಲೇ ಹೊಟ್ಟೆ ತುಂಬಿಸಿಕೊಳ್ಳುವುದಾ ಹೇಗೆ? ಊಟಕ್ಕೆ ಬಂದು ಏನು ಪ್ರಯೋಜನ ಎಂದೆ, ಹಾಗಲ್ಲ ಆಂಟಿ ನಾವೆಲ್ಲಾ ಪ್ರಕ್ರತಿ ಚಿಕಿತ್ಸೆಯಲ್ಲಿದ್ದೇವೆ, ನಮ್ಮದು ಊಟ ಕಡಿಮೆ ಎಂದಳು ಒಬ್ಬಳು ಕೊರಳು ಕೊಂಕಿಸುತ್ತಾ, ಪ್ರಕೃತಿ ಚಿಕಿತ್ಸೆ ಎಂದರೆ ಊಟ ಬಿಡುವುದಾ?, ಇದು ಎಷ್ಟು ದಿನ ನಡೆಯುತ್ತದೆ,

ಮನೆಯಲ್ಲಿ ಕೆಲಸ ಮಾಡುವುದಾದರೂ ಹೇಗೆ? ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದೆ. ಹಾಗಲ್ಲ ಆಂಟಿ, ಅದೂ ನಾವೆಲ್ಲಾ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಪ್ರೊಟೀನ್ ಶೇಕ್ ಕುಡಿಯುತ್ತಿದ್ದೇವೆ, ಆಗ ಊಟ ಬೇಡ, ಎಂಟೇ ದಿನದಲ್ಲಿ ಸಣ್ಣ ಆಗುವುದು ಗ್ಯಾರಂಟಿ, ಸ್ವಲ್ಪ ವೀಕ್‌ನೆಸ್ ಇರುತ್ತದೆ, ಆದರೆ ಮನೆಯಲ್ಲಿ ಕೆಲಸ ಮಾಡಲು ಕೆಲಸದವರಿದ್ದಾರೆ, ಗಂಡ ಇದ್ದಾರೆ, ಆಂಟೀ ನೀವು ಸೇರಿ ಪ್ರಕೃತಿ ಚಿಕಿತ್ಸೆಗೆ, ಹತ್ತೇ ದಿನಗಳಲ್ಲಿ ನೀವೂ ನಮ್ಮಂತೆ. ಒಮ್ಮೆಗೆ ನನಗೆ ಖುಷಿಯಾಯಿತು. ಅಡಿಗೆ ಮಾಡುವ, ತಿನ್ನುವ ರಗಳೆ ಇಲ್ಲ, ಸಣ್ಣ ಆಗಬೇಕೆಂದು ಕಸರತ್ತು ಮಾಡುವುದೂ ಬೇಡ, ಹಗಲೂ ರಾತ್ರಿ ಪ್ರೋ ಶೇಕ್ ಕುಡಿದರೆ ಸಾಕು. ಆದರೂ ಅನುಮಾನದಿಂದ ಕೇಳಿದೆ ಖರ್ಚು ಎಷ್ಟಾಗುತ್ತದೆ, ಹೆಚ್ಚಿಲ್ಲ ಆಂಟಿ, ತಿಂಗಳಿಗೆ ಹದಿನೈದರಿಂದ ಇಪ್ಪತ್ತು ಸಾವಿರದ ಬಿಲ್ಲಾಗುತ್ತದೆ ನನ್ನ ಹೃದಯ ಎರಡು ಸೆಕೆಂಡಿನ ಮಟ್ಟಿಗೆ ಕೆಲಸ ಮಾಡುವುದನ್ನು ನಿಲ್ಲಿಸಿತು.

ನನಗೆ ಚಿಂತೆ ಹತ್ತಿತ್ತು, ಊಟ, ತಿಂಡಿ ಬಿಟ್ಟರೆ ತಾನಾಗಿಯೇ ಸಣ್ಣಗಾಗುತ್ತೇವೆ, ಇದಕ್ಕಾಗಿ ಪ್ರೊಟೀನ್ ಶೇಕ್ ಏಕೆ ಕುಡಿಯಬೇಕು? ಅದೂ ಹದಿನೈದು, ಇಪ್ಪತ್ತು ಸಾವಿರ ಕೊಟ್ಟು, ಮನೆ ಕೆಲಸದವರ ಸಂಬಳ ಬೇರೆ. ಎಷ್ಟು ಸಣ್ಣಗಾದರೂ ಮುಖದ ಮೇಲಿನ ಸುಕ್ಕುಗಳು ಮತ್ತು ನೆರೆಗೆಗಳು ವಯಸ್ಸು ಹೇಳುತ್ತವೆ ಅನ್ನಿಸಿತು. ಸಣ್ಣಗಾಗಲು ನನ್ನದೇ ತಂತ್ರ ಸರಿ ಎನ್ನಿಸಿತು. ■

## ಕಡೆ ಆಸೆ

ನ್ಯಾಯಾಧೀಶರು : (ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿಗೆ) 'ನಿನ್ನ ಕೊನೆಯ ಆಸೆ ಏನಾದರೂ ಇದ್ದರೆ ಹೇಳು'

ಅಪರಾಧಿ : "ಅಂತಹ ದೊಡ್ಡ ಆಸೆಯೇನೂ ಇಲ್ಲ ನನಗೆ, ಆದರೆ ನನ್ನ ಅಂತಿಮ ಯಾತ್ರೆಯಲ್ಲಿ ಯಾರು ಯಾರು ಬರುತ್ತಾರೆಂದು ನೋಡಬೇಕೆಂಬುದೊಂದೇ ನನ್ನ ಕಡೆಯ ಆಸೆ"

## ಬುದ್ದಿವಂತ

ಮಂಜ : "ನನ್ನ ಕ್ರೆಡಿಟ್ ಕಾರ್ಡ್ ಕಳೆದು ಹೋಯ್ತು, ಅದೂ ಗೋಲ್ಡ್ ಕಾರ್ಡ್ "

ನಂಜ : "ಅದಿಕ್ಕೇ ನೋಡು ನಾನು ಪ್ಲಾಸ್ಟಿಕ್ ಕಾರ್ಡೇ ಉಪಯೋಗಿಸ್ತಿದೀನಿ"

**ಕೆ.ಆರ್.ಮಧುಸೂದನ್.**

# ನಮ್ಮ ಕಾಲ್ಗುಣ

● ಡಾ.ಡಿ.ವಿ. ಗುರುಪ್ರಸಾದ್

ಕುಟುಂಬದ ಸದಸ್ಯರೆಲ್ಲಾ ಸೇರಿ ರಾತ್ರಿಯ ಭೋಜನವನ್ನು ಸೇವಿಸುತ್ತಿದ್ದಾಗ ಟಿವಿಯಲ್ಲಿ ನ್ಯೂಜಿಲೆಂಡ್‌ನ ಕ್ರೈಸ್ಟ್‌ಚರ್ಚ್‌ನ ಮಸೀದಿಯಲ್ಲಾದ ಆತಂಕವಾದಿಯ ದಾಳಿಯ ದೃಶ್ಯಗಳು ಬಿತ್ತರವಾದವು. ಅದನ್ನು ನೋಡಿದ ನನ್ನ ಸುಪುತ್ರ, "ಅಪ್ಪಾ-ಅಮ್ಮಾ ನೀವೆಷ್ಟು ಲಕ್ಕಿ, ಒಂದು ವಾರದ ಹಿಂದೆ ಏನಾದರೂ ಈ ದಾಳಿ ನಡೆದಿದ್ದಲ್ಲಿ ಇಂದು ನೀವು ಇಷ್ಟು ಅರಾಮವಾಗಿ ನಮ್ಮೊಡನೆ ಕೂಡಲು ಆಗುತ್ತಿರಲೇ ಇಲ್ಲ" ಎಂದ.

"ಹೌದು ಕಣೋ, ನಮ್ಮ ಜೀವಕ್ಕೆ ಅಪಾಯವೇನೂ ಆಗದಿದ್ದರೂ ಖಂಡಿತವಾಗಿ ನಮ್ಮ ವಿಮಾನ ಪ್ರಯಾಣವಂತೂ ಮುಂದೆ ಹೋಗುತ್ತಿತ್ತು. ನೀನೇ ನೋಡಿದೆಯಲ್ಲ, ಊರಲ್ಲಿ ಕರ್ಫ್ಯೂ ಹಾಕಿದ್ದಾರೆ. ನಮಗೆ ಬೆಂಗಳೂರಿಗೆ ವಾಪಸಾಗಲು ಟಿಕೆಟ್ ಯಾವಾಗ ಸಿಗುತ್ತಿತ್ತೋ ಏನೋ? ಪರದೇಶದಲ್ಲಿ ಇಂತಹ ತೊಂದರೆಗೆ ನಾವು ಸಿಕ್ಕಿಹಾಕಿಕೊಳ್ಳಲಿಲ್ಲವಲ್ಲ, ನಾವು ಲಕ್ಕಿ ಕಣೋ" ಎಂದಳು ನನ್ನ ಶ್ರೀಮತಿ.

ಅಷ್ಟರಲ್ಲಿ ಗೂಗಲ್ ಮೂಲಕ ನಾವು ನ್ಯೂಜಿಲೆಂಡಿನಲ್ಲಿ ಇಳಿದುಕೊಂಡಿದ್ದ ಊರಿಗೇ ಪ್ರವಾಹ ಬಂದು ಆ ಪ್ರದೇಶವೇ ಜಲಾವೃತವಾಗಿರುವ ಚಿತ್ರಗಳನ್ನು ತೋರಿಸಿದ ಮಗಳು, "ಅಮ್ಮಾ, ನೀವು ಹೋದ ವರ್ಷ ಇರಾನ್‌ಗೆ ಹೋದಾಗಲೂ ನೀವು ಊರು ಬಿಟ್ಟ ಮಾರನೆಯ ದಿನವೇ ನೀವಿದ್ದ ಊರಿನಲ್ಲಿ ಭಾರೀ ಭೂಕಂಪವಾಗಿ ಸಾವಿರಾರು ಜನ ಸಾಯಲಿಲ್ಲವೇ? ಆಗಲೂ ನೀವು ತೊಂದರೆಯಿಂದ ಬಚಾವಾಗಿದ್ದಿರಿ, ಈಗಲೂ ಹಾಗೆಯೇ ಆಗಿದೆ" ಎಂದು ನೆನಪಿಸಿದಳು ನನ್ನ ಪುತ್ರಿ ಅಪೂರ್ವ.

"ಅಪೂರ್ವ, ನಮ್ಮ ಅಮ್ಮ-ಅಪ್ಪ ಯಾವಾಗ ವಿದೇಶಕ್ಕೆ ಹೋದರೂ ಆ ದೇಶದವರಿಗೆ ಏನಾದರೂ ಆಪತ್ತು ಬಂದಿದೇ ಕಣೇ. ಅವರ ಕಾಲ್ಗುಣವೇ ಹಾಗೇನೋ" ಎಂದ ನನ್ನ ಪುತ್ರ.

"ಮುಚ್ಕೋ ಬಾಯಿ" ಎಂದು ಗದರಿದೆ.

"ಅವನ ಬಾಯಿಯನ್ನು ಏಕೆ ಮುಚ್ಚಿಸ್ತೀರಿ? ೨೦೧೧ರಲ್ಲಿ ನಾವಿಬ್ಬರೂ ಈಜಿಪ್ಟ್ ದೇಶಕ್ಕೆ ಹೋಗಿ ವಾಪಸ್ ಬಂದ ಒಂದೇ ವಾರದ ನಂತರ ಆ ದೇಶದಲ್ಲಿ ಕ್ರಾಂತಿ ನಡೆದು ಹೊಸ ಸರ್ಕಾರ ಬಂದದ್ದು ನಿಜವಲ್ಲವೇನ್ರೀ?" ಎಂದಳು ಶ್ರೀಮತಿ.

ಈಗ ಬಾಯಿಮುಚ್ಚುವ ಸರದಿ ನನ್ನದೇ ಆಯಿತು. ತಕ್ಷಣ ನನಗೆ ನೆನಪಾಯಿತು. ನಾನು ಟರ್ಕಿ ದೇಶಕ್ಕೆ ಹೋದಾಗ ಇಸ್ತಾನ್‌ಬುಲ್‌ನಲ್ಲಿ ನನ್ನ ಹುಟ್ಟಿದ ಹಬ್ಬ ಆಚರಿಸುವ ಮನಸಾಗಿತ್ತು. ಬಾಸ್‌ಫರಸ್ ಜಲಸಂಧಿಯ ಎದುರುಗಡೆಯೇ ಇದ್ದ ಹೋಟೇಲ್‌ನಲ್ಲಿ ತಂಗಿದ್ದ ನನಗೆ ಎರಡು ಖಂಡಗಳಿಗೂ

ಸೇರುವ ಇಸ್ತಾನ್‌ಬುಲ್ ನಗರ ತೀರಾ ಇಷ್ಟವಾಗಿ ಬಿಟ್ಟಿತ್ತು. ಆದರೆ ನನ್ನ ಶ್ರೀಮತಿಗೆ ನಾನು ಪಕ್ಕದ ದೇಶವಾದ ಜೋರ್ಡಾನಿನ ಪೆಟ್ರಾ ನಗರದ ಪುರಾತನ ಅವಶೇಷಗಳ ನಡುವೆ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಬೇಕೆಂಬ ಆಸೆ. ಪೆಟ್ರಾ ಇಸ್ತಾನ್‌ಬುಲ್‌ಗಿಂತ ರೋಮ್ಯಾಂಟಿಕ್ ಎಂದು ಅವಳ ತರ್ಕ. ಅವಳ ಮಾತಿಗೆ ಒಪ್ಪಿ ನಾವು ಮಾರನೆಯ ದಿನವೇ ಟರ್ಕಿ ದೇಶದಿಂದ ಪೆಟ್ರಾಗೆ ಪ್ರಯಾಣ ಬೆಳೆಸಿದೆವು. ನಾವು ಟರ್ಕಿ ಬಿಟ್ಟ ಎರಡೇ ದಿನಗಳ ನಂತರ ಆ ದೇಶದಲ್ಲಿಯೂ ಸರ್ಕಾರ ಉರುಳಿಸುವ ಸಲುವಾಗಿ ಕ್ರಾಂತಿಯಾಯಿತು. ನಾವು ಖಾಲಿ ಮಾಡಿದ್ದ ಹೋಟೇಲ್ ಮುಂದೆಯೇ ಸಾವಿರಾರು ಪ್ರತಿಭಟನಾಕಾರರು ನೆರೆದು ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದ್ದನ್ನು ಟಿ.ವಿಯಲ್ಲಿ ಕಂಡ ನಾನು ನನ್ನ ಪತ್ನಿಗೆ ನೂರು ಥ್ಯಾಂಕ್ಸ್ ಹೇಳಿದ್ದೆ.

"ಅಪ್ಪಾ ಅಂದು ಟರ್ಕಿಯಲ್ಲಿ ನಡೆದ ಕ್ರಾಂತಿ ವಿಫಲವಾಯಿತು. ಅಂದಿನ ಸರ್ಕಾರ ಬಲಪ್ರಯೋಗವನ್ನು ಮಾಡಿ ಕ್ರಾಂತಿಕಾರರನ್ನು ಹತ್ತಿಕ್ಕಿತ್ತು. ಹೀಗಾಗಿ ನಿಮ್ಮ ಪ್ರವಾಸದ ಕಾರಣದಿಂದ ಸರ್ಕಾರವೇನೂ ಬದಲಾಗಲಿಲ್ಲವಲ್ಲ" ಎಂದು ನನ್ನ ರಕ್ಷಣೆಗೆ ನನ್ನ ಮಗಳು ಬಂದಳು.

"ಏನೇ ಆಗಲಿ, ಇವರು ಬಿಟ್ಟ ನಂತರ ಆ ಊರಿಗೆ ತೊಂದರೆ ಬಂದಿದ್ದು ನಿಜವೋ ಅಲ್ಲವೋ?" ಎಂದು ವಾದಿಸಿದ ನನ್ನ ಪುತ್ರ.

ಅವನ ಮಾತುಗಳನ್ನು ಕೇಳಿದ ನನ್ನ ಯೋಚನಾ ಲಹರಿ ನಾವು ಈ ಹಿಂದೆ ಮಾಡಿದ ಹಲವಾರು ವಿದೇಶ ಪ್ರವಾಸಗಳತ್ತ ಹರಿಯಿತು.

೨೦೧೧ರಲ್ಲಿ ನಾವು ಗ್ರೀಸ್ ದೇಶವನ್ನು ನೋಡಲು ಹೋಗಿದ್ದೆವು. ನಮ್ಮ ವಿಮಾನವು ಅಥೆನ್ಸ್‌ನಲ್ಲಿ ಇಳಿದ ಕೆಲವೇ ನಿಮಿಷಗಳಲ್ಲಿ ಆ ನಗರದಲ್ಲಿ ಸರ್ಕಾರದ ವಿರುದ್ಧ ವ್ಯಾಪಕ ಪ್ರತಿಭಟನೆಗಳು ಪ್ರಾರಂಭವಾದವು. ನಾವು ವಿಮಾನ ನಿಲ್ದಾಣದಿಂದ ಊರೊಳಗೆ ಹೋಗಲು ಸಾಧ್ಯವೇ ಆಗುವುದಿಲ್ಲ ಎಂದು ಗಾಭರಿಯಾಗಿದ್ದವು. ಆದರೆ ವಿಮಾನ ನಿಲ್ದಾಣದ ಹೊರಗಿದ್ದ ಟ್ಯಾಕ್ಸಿ ಚಾಲಕ, "ಸರ್, ಚಿಂತೆಮಾಡಬೇಡಿ, ನಿಮ್ಮಂತಹ ಪ್ರವಾಸಿಗರು ಬರುವುದರಿಂದಲೇ ನಾವು ಅಲ್ಪ ಸ್ವಲ್ಪ ಹಣವನ್ನು ಗಳಿಸುತ್ತಿದ್ದೇವೆ. ಸರ್ಕಾರಿ ಕಛೇರಿಗಳಲ್ಲಿ ಮಾತ್ರ ಕೆಲಸ ಮಾಡಲು ಬಿಡುವುದಿಲ್ಲ, ಆದರೆ ಪ್ರತಿಭಟನೆಗಳ ಕಾರಣ ನಿಮ್ಮ ಪ್ರವಾಸಕ್ಕೇನೂ ತೊಂದರೆಯಾಗುವುದಿಲ್ಲ" ಎಂದು ಸಮಾಧಾನ ಪಡಿಸಿದ್ದ.

ವಿಮಾನ ನಿಲ್ದಾಣದ ಏರ್ ಟ್ರಾಫಿಕ್ ಕಂಟ್ರೋಲರ್‌ಗಳು ಸರ್ಕಾರೀ ಅಧಿಕಾರಿಗಳೇ ಆಗಿದ್ದರಿಂದ ನಾವು ವಾಪಸ್ ಬರುವ ವೇಳೆ ವಿಮಾನ ನಿಲ್ದಾಣವನ್ನೇ ಪ್ರತಿಭಟನಾಕಾರರು ಬಂದ್ ಮಾಡಿಬಿಟ್ಟರೆ, ನಮ್ಮ ಗತಿಯೇನು ಎಂದು ಗಾಭರಿಯಾಗಿದ್ದೆ. ನನ್ನ ಊಹೆ ನಿಜವೇ ಆಯಿತು. ಆದರೆ ಅದಾದದ್ದು ನಾವು ಆ ದೇಶವನ್ನು ಬಿಟ್ಟ ಎರಡು ದಿನಗಳ ನಂತರವೇ!

ಮಾರ್ಚ್ ೨೦೧೬ರಲ್ಲಿ ನಾನು ಕೆಲಸದ ನಿಮಿತ್ತವಾಗಿ ಬೆಲ್ಜಿಯಂ ದೇಶಕ್ಕೆ ಹೋಗಿದ್ದೆ. ನಾನು ಬೆಂಗಳೂರಿಗೆ ವಾಪಸಾದ ದಿನವೇ ಆ ದೇಶದ ರಾಜಧಾನಿ ಬಸೆಲ್ಸ್ ವಿಮಾನ ನಿಲ್ದಾಣಕ್ಕೆ ದಾಳಿ ನಡೆಸಿದ ಆತಂಕವಾದಿಗಳು ಬಾಂಬ್‌ಗಳನ್ನು

ಸ್ಫೋಟಿಸಿ ಯದ್ವಾತದ್ವಾಗುಂಡು ಹಾರಿಸಿ ಎರಡು ಡಜನ್‌ಗೂ ಹೆಚ್ಚು ಜನರನ್ನು ಕೊಂದರು. ನಿಲ್ದಾಣದಲ್ಲಾದ ವ್ಯಾಪಕ ಹಾನಿಯನ್ನು ನೋಡಿದ ನನಗೆ ಮೈ ಜುಂ ಎನಿಸಿತು. ಏಕೆಂದರೆ ಬಾಂಬ್ ಒಂದು ಬಿದ್ದ ಜಾಗ ನಾನು ಪ್ರಯಾಣಿಸಿದ ಏರ್‌ಲೈನಿನ ಕೌಂಟರ್ ಆಗಿತ್ತು.

ಮಲೇಶಿಯಾ ದೇಶದಲ್ಲಿ ನನಗಾದ ಅನುಭವವನ್ನು ನೆನಪಿಸಿಕೊಂಡರೆ ಇಂದಿಗೂ ಮೈಕೂದಲು ನಿಮಿರುತ್ತದೆ. ಅದು ೭/೮ನೇ ಮಾರ್ಚ್ ೨೦೧೪ರ ರಾತ್ರಿ. ನಾನು ಕೌಲಾಲಂಪುರದಿಂದ ಬೆಂಗಳೂರಿಗೆ ವಾಪಸ್ ಆಗಲು ನಮ್ಮ ವಿಮಾನದ ಬೋರ್ಡಿಂಗ್ ಗೇಟ್ ಬಳಿ ವಿಮಾನ ಹೊರಡುವ ಘೋಷಣೆಗಾಗಿ ಕಾಯುತ್ತಿದ್ದೆ. ನಮ್ಮ ಎದುರಿನ ಬೋರ್ಡಿಂಗ್ ಗೇಟ್‌ನಲ್ಲಿ ಬೀಜಿಂಗ್‌ಗೆ ಹೋಗುವ ಎಂ.ಎಚ್370 ವಿಮಾನವನ್ನು ಪ್ರಯಾಣಿಕರು ಏರುತ್ತಿದ್ದರು. ಸರಿಸುಮಾರು ೧೫ ನಿಮಿಷಗಳ ಅಂತರದಲ್ಲಿಯೇ ನಮ್ಮೆರಡೂ ವಿಮಾನಗಳು ಕೌಲಾಲಂಪುರವನ್ನು ಬಿಟ್ಟವು. ನಾನು ಸುಖವಾಗಿ ಬೆಂಗಳೂರಿಗೆ ವಾಪಸ್ ಆದರೆ ಎಂ.ಎಚ್.೩೭೦ ವಿಮಾನವೇ ಆಗಸದಿಂದ ಮಾಯವಾಯಿತು. ವಿಮಾನಕ್ಕೇನಾಯತು? ಅದರಲ್ಲಿದ್ದ ಪ್ರಯಾಣಿಕರಿಗೇನಾಯಿತು ಎನ್ನುವುದು ಇಂದಿಗೂ ಯಾರಿಗೂ ತಿಳಿದಿಲ್ಲ.

ಅದೇ ಕೌಲಾಲಂಪುರ ವಿಮಾನ ನಿಲ್ದಾಣದಲ್ಲಿಯೇ ಇನ್ನೊಂದು ಅನುಭವವಾಗಿದೆ. ನಾನು ಆಗಲೂ ಬೆಂಗಳೂರಿಗೆ ವಾಪಸ್ಸಾಗಲು ನನ್ನ ವಿಮಾನವನ್ನು ಏರಲು ಕಾಯುತ್ತಿದ್ದೆ. ವಿಮಾನ ನಿಲ್ದಾಣದಲ್ಲಿ ಇದ್ದಕ್ಕಿದಂತೆ ಬಿಗುವಿನ ವಾತಾವರಣ ಉಂಟಾಯಿತು. ಶಸ್ತ್ರಧಾರೀ ಪೊಲೀಸರು, ತುರ್ತು ಪರಿಸ್ಥಿತಿ ನಿಯಂತ್ರಣಕಾರರು, ನರ್ಸ್‌ಗಳು ಮುಂತಾದವರು ನಾನಿದ್ದ ಸ್ಥಳದ ಅನತಿ ದೂರದಲ್ಲಿಯೇ ಗಾಬರಿಯಿಂದ ಓಡಾಡುತ್ತಿದ್ದನ್ನು ನಾನು ನೋಡಿದೆ. ಹೇಳಿ ಕೇಳಿ ನಾನು ಪೊಲೀಸ್ ಅಧಿಕಾರಿಯಾದ್ದರಿಂದ ಏನಾಗುತ್ತಿದೆ ಎಂದು ತಿಳಿಯುವ ಕುತೂಹಲ ನನಗಾಯಿತು. ಅಲ್ಲಿ ಹೋಗಿ ನೋಡಿದರೆ ಒಬ್ಬ ವಿ.ಐ.ಪಿಯ ಪರಿಸ್ಥಿತಿ ಬಿಗಡಾಯಿಸಿದೆ ಎಂದು ಗೊತ್ತಾಯಿತು. ಹೆಚ್ಚಿನ ಮಾಹಿತಿ ಬರಲಿಲ್ಲ. ಬೆಂಗಳೂರಿಗೆ ನಾನು ವಾಪಸ್ಸಾದ ನಂತರ ಟಿವಿ ನೋಡಿದಾಗ ಉತ್ತರ ಕೊರಿಯಾದ ಅರಸನ ಮಲ-ಸೋದರನ ಮುಖಕ್ಕೆ ವಿಷಪೂರಿತ ಪುಡಿಯೊಂದನ್ನು ಸವರಿ ಆತನ ಹತ್ಯೆ ಮಾಡಲಾಯಿತೆಂದು ತಿಳಿಯಿತು. ಈ ಘಟನೆಯ ಪರಿಣಾಮವಾಗಿ ಮಲೇಶಿಯಾ ಹಾಗೂ ಉತ್ತರ ಕೊರಿಯಾ ದೇಶಗಳ ನಡುವೆ ತೀವ್ರ ರಾಜತಾಂತ್ರಿಕ ಬಿಕ್ಕಟ್ಟು ಉಂಟಾಗಿದೆಯೆಂದು ತಿಳಿದುಬಂದಿತು.

"ನಿಮ್ಮ ಕಾಲ್ಗುಣವೇ ಸರಿಯಾಗಿಲ್ಲ ಎನಿಸುತ್ತದೆ ಅಪ್ಪಾ. ನಿಮ್ಮಿಂದ ಎಷ್ಟು ದೇಶಗಳಿಗೆ ತೊಂದರೆಯಾಯಿತು ನೋಡಿ. ಇನ್ನು ಮುಂದೆ ನೀವು ವಿದೇಶ ಪ್ರವಾಸ ನಿಲ್ಲಿಸುವುದೇ ಲೇಸು" ಎಂದ ನನ್ನ ಪುತ್ರ.

ಅಲ್ಲಿಯವರೆಗೆ ನಮ್ಮ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದ ನನ್ನ ಅಳಿಯ, "ಮಾವನವರೇ, ನಮ್ಮ ಸರ್ಕಾರ ಪಾಕಿಸ್ತಾನಕ್ಕೆ ಸರ್ಜಿಕಲ್ ಸ್ಟ್ರೈಕ್ ಮಾಡುವುದು ಬೇಡ. ಸೈನ್ಯವನ್ನು ಕಳಿಸಿ ದಾಳಿ ಮಾಡುವುದೂ ಬೇಡ. ನಿಮ್ಮನ್ನು ಅಲ್ಲಿಗೆ ಕಳುಹಿಸಿದರೆ ಸಾಕಾಗುತ್ತದೆಯಲ್ಲವೇ? ಎಂದಾಗ ಎಲ್ಲರೂ ಗೊಳ್ಳೆಂದು ನಕ್ಕರು. ■

# ಕಳೆದು ಹೋಗಿದೆ ಹುಡುಕಿ ಕೊಡಿ!

**● ಹೆಚ್. ಆರ್. ಪ್ರಭಾಕರ**

ಮೊನ್ನೆ ಭಾನುವಾರ, ಮಧ್ಯಾಹ್ನದ ನಿದ್ದೆಯ ನಂತರ ಪತ್ತೆದಾರಿ ಪಾಪಣ್ಣನವರು ಕೋಡುಬಳೆ ಮೆಲ್ಲುತ್ತ, ಕಾಫಿ ಹೀರುತ್ತ ಟಿವಿ ನೋಡುತ್ತ ವಿರಾಮವಾಗಿ ಕುಳಿತಿದ್ದರು. ಮಡದಿ ತನ್ನ ಪ್ರಾಥಮಿಕ ಶಾಲೆಯ ಹಳೆಯ ಸಹಪಾಠಿಗಳೊಂದಿಗೆ ಊಟಕ್ಕೆ ಹೋದವಳು ಇನ್ನೂ ಮನೆಗೆ ಬಂದಿರಲಿಲ್ಲ, ಕರೆಗಂಟೆ ಅವರನ್ನು ಎಬ್ಬಿಸಿತು. ಹೆಂಡತಿಯೇ ಬಂದಳೆಂದು ಎದ್ದು ಬಾಗಿಲು ತೆರೆದರು. ಸುಮಾರು ಎಪ್ಪತ್ತು ವಯಸ್ಸಿನ ವೃದ್ಧಾಪ್ಯದ ಅಂಚಿನಲ್ಲಿರುವ ವ್ಯಕ್ತಿಯೊಬ್ಬರು ಪ್ರತ್ಯಕ್ಷರಾದರು – ಗೋಧಿ ಬಣ್ಣ, ಸಾಧಾರಣ ಮೈಕಟ್ಟು, ಬಿಳಿಯ ಜುಬ್ಬ, ಒಂಟಿ ಪಂಚೆ, ಹೆಗಲ ಮೇಲೊಂದು ಅಂಗ ವಸ್ತ್ರ ಬೆಳೆಗ್ಗೆಯೇ ಚೌರಮಾಡಿಕೊಂಡ ಮುಖ, ಭೂಮಿ ದುಂಡಗಿದೆಯೆಂದು ಸಾರುವ ಬಕ್ಕ ತಲೆ, ಗಲಿಬಿಲಿಗೊಂಡ ದೇಶಾವರಿ ನಗೆ. ತಲೆಯ ಮೇಲೊಂದು ಟೋಪಿಯಿದ್ದಿದ್ದರೆ ಹಳೆಯ ಕಾಲದ ರಾಜಕಾರಣಿಯೆಂದು ಹೇಳಬಹುದಿತ್ತು.

ಪಪಾ : ನಮಸ್ಕಾರ?

ವ್ಯಕ್ತಿ : ನಮಸ್ಕಾರ, ನನ್ನ ಹೆಸರು ಅಶ್ವತ್ಥಾಮಾಚಾರ್ಯ. ಪತ್ತೆದಾರಿ ಪಾಪಣ್ಣನವರನ್ನು ಕಾಣಬೇಕಿತ್ತು.

ಪಪಾ : ಬನ್ನಿ, ನಾನೇ ಆ ಪಾಪಣ್ಣ.

ತಾವು ಸಿಕ್ಕಿದ್ದು ಬಹಳ ಸಂತೋಷ ಎಂದು ಹೇಳುತ್ತಾ ಅಶ್ವತ್ಥಾಮಾಚಾರ್ಯರು ಚಪ್ಪಲಿಯನ್ನು ಹೊರಗೇ ಬಿಟ್ಟು ಒಳಗೆ ಬಂದು ಸೋಫಾ ಮೇಲೆ ಆಸೀನರಾದರು. ಪಾಪಣ್ಣ ಅವರಿಗೊಂದು ಲೋಟ ನೀರು ಕೊಟ್ಟು ತಾವೂ ಕುಳಿತರು.

ಪಪಾ : ಹೇಳಿ ಸ್ವಾಮಿ, ನನ್ನಿಂದ ಏನಾಗಬೇಕು?

ಅಶ್ವ : ತಾವು ಬಹಳ ಪ್ರಖ್ಯಾತ ಪತ್ತೇದಾರರು ಎಂದು ಕೇಳಿದ್ದೇನೆ. ನಿಮ್ಮಿಂದ ಒಂದು ಸಹಾಯವಾಗಬೇಕು.

ಪಪಾ : ನಿಮ್ಮ ಮೊಬೈಲ್ ಕಳೆದು ಹೋಯಿತೇ? ನಂಬರ್ ಹೇಳಿ, ಐದು ನಿಮಿಷದಲ್ಲಿ ಪತ್ತೆ ಮಾಡ್ತೀನಿ.

ಅಶ್ವ : ಅದಲ್ಲ, ನನಗೆ ಮೊಬೈಲ್ ಉಪಯೋಗಿಸುವುದೇ ಗೊತ್ತಿಲ್ಲ.

ಪಪಾ : ಯೋಚನೆ ಮಾಡ್ಬೇಡಿ. ನನ್ನ ಮೊಮ್ಮಗನ್ನ ಕಳಿಸ್ತೀನಿ, ಅವನು ಫಟಾಫಟ್ ಅಂತ ಎಲ್ಲ ಹೇಳಿಕೊಡ್ತಾನೆ.

ಅಶ್ವ : ಹಾಗಲ್ಲಾ..

ಪಪಾ : ಹಾಗಾದರೆ ನಿಮ್ಮ ಕ್ರೆಡಿಟ್ ಕಾರ್ಡ್, ಆಧಾರ್ ಕಾರ್ಡ್, ವೋಟರ್ ಐಡೆಂಟಿಟಿ ಕಾರ್ಡ್, ಮೆಟ್ರೋ ಸ್ಮಾರ್ಟ್ ಕಾರ್ಡ್, ಸೀನಿಯರ್ ಸಿಟಿಜನ್ ಕಾರ್ಡ್, ಲೈಬ್ರರಿ ಕಾರ್ಡ್, ಕ್ಲಬ್ ಮೆಂಬರ್‌ಶಿಪ್ ಕಾರ್ಡ್, ಪ್ಯಾನ್ ಕಾರ್ಡ್... ಹೇಳಿ ಯಾವುದು ಕಳೆದು ಹೋಗಿದೆ? ಎಲ್ಲಾವುದಕ್ಕೂ ನಮ್ಮಲ್ಲಿ ಪರಿಹಾರ ಉಂಟು.

ಅಶ್ವ : ಅದಾವುದೂ ಅಲ್ಲ ಸ್ವಾಮಿ

ಪಪಾ : ಇಲ್ಲಾ ನಿಮ್ಮ ನಾಯಿ ಕಳೆದು ಹೋಗಿದೆಯೇ ಅಥವಾ ನಿಮ್ಮ ಧರ್ಮ ಪತ್ನಿಯವರು ಕಾಣೆಯಾಗಿದ್ದಾರೆಯೇ ಹೇಳಿ. ಕಳೆದುದನ್ನು ಪತ್ತೆ ಮಾಡಿ ಕೊಡುತ್ತೇವೆ ಇಲ್ಲವೇ ಹೊಸದನ್ನೇ ಕೊಡಿಸೋಣವಂತೆ, ಚಿಂತೆ ಮಾಡಬೇಡಿ.

ಅಶ್ವ : ಶಾಂತಂ ಪಾಪಂ! ಸ್ವಾಮೀ ನಾನು ಬ್ರಹ್ಮಚಾರಿ. ನಾಯಿಯ ಮಾತೆತ್ತಬೇಡಿ, ನನಗೂ ಅವುಗಳಿಗೂ ಬಹು ದೂರ. ನಾಯಿಯಿಂದಲೇ ನಮ್ಮಪ್ಪ ಪೇಚಿಗೆ ಸಿಕ್ಕಿದ್ದು.

ಪಪಾ : ಮತ್ತೇನು ಆಚಾರ್ಯರೆ ನಿಮ್ಮ ಸಮಸ್ಯೆ, ಏನನ್ನು ಕಳೆದುಕೊಂಡಿದ್ದೀರಿ ಹೇಳಿ,

ಅಶ್ವ : ಅದೇ ಸಮಸ್ಯೆ. ನಾನು ಕಳೆದುಕೊಂಡಿದುದರ ಬಗ್ಗೆ ನನಗೆ ಜ್ಞಾನವೇ ಇಲ್ಲ.

ಪಪಾ : ಅಂದರೆ ಅದು ನಿಮ್ಮ ಬಳಿ ಇರಲಿಲ್ಲವೇ?

ಅಶ್ವ : ಇದ್ದಿರಲೇಬೇಕು, ಆದರೆ ಗಮನವನ್ನೇ ಕೊಟ್ಟಿರಲಿಲ್ಲ ನೋಡಿ!

ಪಪಾ : ಅದಕ್ಕೇ ಹಿರಿಯರು ಹೇಳುವುದು – ಯಾವುದೇ ವಸ್ತುವಿನ ಬೆಲೆ ಅದು ಕಳೆದು ಹೋದಾಗಲೇ ತಿಳಿಯುವುದು ಎಂದು.

ಅಶ್ವ : ಸರಿಯಾಗಿ ಹೇಳಿದಿರಿ ಪಾಪಣ್ಣನವರೆ!

ಪಪಾ : ಹೋಗಲಿ ನೀವು ಕಳೆದುಕೊಂಡ ವಸ್ತುವಿನ ಬಗ್ಗೆ ನಿಮಗೆ ಏನು ತಿಳಿದಿದೆ ಹೇಳಿ.

ಅಶ್ವ : ನಿಜವಾಗಿ ಹೇಳಬೇಕೆಂದರೆ ನನಗೆ ಏನೂ ತಿಳಿಯದು. ಆದರೆ ಅವರಿವರು ಹೇಳುವುದನ್ನು ಸ್ವಲ್ಪ ಕೇಳಿದ್ದೇನೆ. ನೀವು ಪ್ರಶ್ನೆ ಕೇಳಿ, ತಿಳಿದಷ್ಟು ಉತ್ತರಿಸುತ್ತೇನೆ.

ಪಪಾ : ಸರಿ. ಆ ಪದಾರ್ಥ ಎಷ್ಟು ದೊಡ್ಡದು ?

ಅಶ್ವ : ಕಷ್ಟ ಕಷ್ಟ! ಅದು ದೊಡ್ಡದಕ್ಕಿಂತ ದೊಡ್ಡದು ಮತ್ತು ಚಿಕ್ಕದಕ್ಕಿಂತ ಚಿಕ್ಕದೆಂದು ಕೇಳಿದ್ದೇನೆ. ಅಣೋರಣೀಯಾನ್ ಮಹತೋಮಹೀಯಾನ್ ಅನ್ನುತ್ತಾರೆ ಸ್ವಾಮಿ.

ಪಪಾ : ಏನ್ರೀ ಹಾಗಂದ್ರೆ?

ಅಶ್ವ : ತಿಳೀದು, ಬಹುಶಃ ಅದು ಎಲೆಕ್ಟ್ರಾನ್ಗಿಂತಲೂ ಚಿಕ್ಕದು ಮತ್ತು ವಿಶ್ವಕ್ಕಿಂತಲೂ ದೊಡ್ಡದಿರಬಹುದು...

ಪಪಾ : ಅದು ಹೇಗ್ರೀ ಸಾಧ್ಯ? ಅಲ್ಲದೆ ವಿಶ್ವ ಹುಟ್ಟಿದಾರಭ್ಯ ವಿಸ್ತರಿಸುತ್ತಲೇ ಇದೆ ಎಂದು ಹೇಳುತ್ತಾರಲ್ವೆ? ಯಾರು ಹೇಳಿದ್ದು– ಎಡ್ವಿನ್ ಹಬಲ್ ಅಲ್ವೆ? ಹೋಗಲಿ, ಅದು ಎಲ್ಲಿರಬಹುದು ಹೇಳುಕ್ಕಾಗುತ್ತೇನ್ರಿ?

ಅಶ್ವ : ಅದೂ ಕಷ್ಟವೇ. ಅದು ಎಲ್ಲದರ ಒಳಗೂ ಇರುತ್ತದಂತೆ ಹೊರಗೂ ಇರುತ್ತದಂತೆ. ತದಂತರಸ್ಯ ಸರ್ವಸ್ಯ ಸರ್ವಸ್ಯಾಸ್ಯ ಬಾಹ್ಯತಃ....

ಪಪಾ : ಓಹೋ, ಕ್ವಾಂಟಂ ಮೆಕ್ಯಾನಿಕ್ಸೂ, ಅನ್ಸರ್ಟನಿಟಿ ಪ್ರಿನ್ಸಿಪಲ್ಲೂ, ವೇವ್ ಫಂಕ್ಷನ್ನೂ ಎಲ್ಲಾ ತರಬೇಡಿ ಸ್ವಾಮಿ, ನಂತಲೆಗೆ ಅವೆಲ್ಲಾ ಹೋಗುಲ್ಲ. ಅದಕ್ಕೇ ನಾನು ಫಿಸಿಕ್ಸ್‌ಗೆ ತಿಲಾಂಜಲಿ ಕೊಟ್ಟು ಈ ಪತ್ತೆದಾರಿ ಕೆಲಸ ಶುರುಮಾಡಿರೋದು ಹೊಟ್ಟೆಪಾಡಿಗಾಗಿ.

ಅಶ್ವ : ಅಯ್ಯೋ, ನಾನು ಹಳೇಕಾಲದೋನು ರಾಯ್ರೆ, ಅದೆಲ್ಲಾ ಕೇಳೇ ಇಲ್ಲ. ಆದರೆ ಯೋಚನೆ ಮಾಡ್ಬೇಡಿ, ನಿಮ್ಮ ಸಂಭಾವನೆಗೆ ಏನೂ ಕಡಿಮೆ ಮಾಡೋಲ್ಲ.

ಪಪಾ : ಈಗ ಏನ್ಮಾಡೋಣ, ಡೆಡ್ ಎಂಡ್ಗೆ ಬಂದ್ಬಿಟ್ವಲ್ಲಾ? ನಮ್ಮ ಪತ್ತೇದಾರಿ ಹೇಗೆ ಮುಂದುವರೆಸುವುದು?

ಅಶ್ವ : ಅಯ್ಯೋ, ನೀವೇ ಹೀಗಂದ್ರೆ ಹೇಗೆ? ಏನಾದರೂ ಮಾಡಿ ಸ್ವಾಮಿ.

ಪಪಾ : ಯಾರಾದರೂ ಸಾಕ್ಷಿಗಳಿದ್ದಾರೇನ್ರೀ?

ಅಶ್ವ : ನೋಡಿದ್ದೇವೆಂದು ಹೇಳಿ ಕೊಳ್ಳುವವರು ಕೆಲವರಿದ್ದರು. ನೋಡಿದವರಿಗಿಂತಲೂ ಚೆನ್ನಾಗಿ ವರ್ಣಿಸುವವರು ಬಹಳ ಮಂದಿ ಇದ್ದಾರೆ. ಮಾತಿನಿಂದಲೇ ಮನೆ ಕಟ್ಟುತ್ತಾರೆ, ನಂಬುವುದೇ ಕಷ್ಟ

ಪಪಾ : ಇರಲಿ, ಅವರು ಏನು ಹೇಳುತ್ತಾರೆ?

ಅಶ್ವ : ಬಹಳ ಹಿಂದೆ ಕೃಷ್ಣನೆಂಬ ರಾಜ ಇದ್ದ. ಬಹಳ ಬುದ್ಧಿವಂತ, ಚತುರ, ಮಾತಿನಿಂದಲೇ ಮೋಡಿಮಾಡುವವ. ತನ್ನ ಶಿಷ್ಯನಾದ ಅರ್ಜುನನಿಗೆ ಅದರ ರೂಪವನ್ನು ತೋರಿಸಿದ್ದನಂತೆ. ಅರ್ಜುನನಿಗೆ ಕಂಡಂತೆ ಅದರ ಕಾಲುಗಳು ನೆಲದ ಮೇಲಿದ್ದರೆ ತಲೆಯು ಆಕಾಶಕ್ಕಿಂತಲೂ ಎತ್ತರದಲ್ಲಿತ್ತಂತೆ. ಅದಕ್ಕೆ ಸಾವಿರಾರು ಕೈಗಳೂ, ಕಣ್ಗಳೂ, ಬಾಯಿಗಳೂ, ಹೊಟ್ಟೆಗಳೂ ಇದ್ದುವಂತೆ. ಲಕ್ಷಾಂತರ ಜನರು ಕೋರೆದಾಡೆಗಳಿದ್ದ ಕೆಂಪು ನಾಲಗೆಯನ್ನು ಚಾಚಿದ ಅದರ ಬಾಯೊಳಗೆ ನುಗ್ಗಿ ಅದೃಷ್ಯರಾಗುತ್ತಿದ್ದರಂತೆ. ಸಾವಿರಾರು ಕೈಗಳಲ್ಲಿ ಸಾವಿರಾರು ಮಾರಕ ಅಸ್ತ್ರಗಳಿದ್ದುವಂತೆ......

ಪಪಾ : ಸಾಕುಮಾಡಿ ಅಶ್ವತ್ಥಾಮಾಚಾರ್ಯರೆ, ಇದು ಯಾವುದೋ ಭಯಾನಕ ಸಿನಿಮಾದ ದೃಶ್ಯದಂತಿದೆ.

ಅಶ್ವ : ಹೆದರಬೇಡಿ, ಇದು ನಾನು ಕೇಳಿದ್ದೇ ಹೊರತು ನೋಡಿದ್ದಲ್ಲ.

ಪಪಾ : ಇನ್ನೇನು ಕೇಳಿದ್ದೀರಿ ಸ್ವಾಮಿ ಅದರ ವಿಷಯ?

ಅಶ್ವ : ಕರಿಯ ಕೋಣದ ಮೇಲೆ ಬರುವ ಆ ಯಮರಾಜ ಹೇಳಿದ್ದಾನೆ. ಅದು ಒಂದು ದೊಡ್ಡ ಅರಳೀ ಮರದಂತಿದೆಯಂತೆ. ಆದರೆ ಅದರ ಬೇರುಗಳು ಆಕಾಶದಲ್ಲಂತೆ ಮತ್ತು ಕೊಂಬೆ ರೆಂಬೆಗಳು ಕೆಳಗೆ ಹರಡಿವೆಯಂತೆ. ಈ ವಿಶಾಲವಾದ ಅಶ್ವತ್ಥ ಮರ ಎಂದೂ ಒಣಗುವುದೇ ಇಲ್ಲವಂತೆ.

ಪಪಾ : ಓ! ಅದನ್ನೇನಾ ನೀವು ಕಳೆದುಕೊಂಡಿದ್ದು. ನಮ್ಮ ಹಳ್ಳಿಗೆ ಬನ್ನಿ ತೋರಿಸ್ತೀನಿ. ಬಹಳ ದೊಡ್ಡದು, ಮೂರು ನಾಲ್ಕು ಎಕರೆಗಳಷ್ಟು ವಿಸ್ತಾರವಾಗಿದೆ. ನಮ್ಮ ತಾತ, ಮುತ್ತಾತ, ಮುತ್ತಾತರ ಮುತ್ತಾತರ ಕಾಲದಿಂದಲೂ ಹೀಗೆಯೇ ಇದೆ. ದಿನೇ ದಿನೇ ಬೆಳೆಯುತ್ತಲೇ ಇರುವ ಇದು ಒಣಗುವ ಲಕ್ಷಣಗಳೇನೂ ಕಾಣುವುದಿಲ್ಲ. ಯಮರಾಜನಿಗೆ ಕೊಂಚ ಗೊಂದಲವಾಗಿರಬೇಕು– ಆಲದ ಮರವನ್ನು ಅಶ್ವತ್ಥ ಮರವೆಂದು ತಪ್ಪಾಗಿ ಹೇಳಿರಬಹುದು. ಹಾಗೆಯೇ ಆಲದ ಮರದ ಬಿಳಿಲುಗಳನ್ನು ಆಕಾಶದಲ್ಲಿರುವ ಬೇರುಗಳೆಂದು ಭಾವಿಸಿದಂತಿದೆ. ಬನ್ನಿ, ನಿಮ್ಮ ಸಮಸ್ಯೆ ಪರಿಹಾರವಾಯಿತು. ನನಗೆ ಸಂಭಾವನೆ ಏನು ಕೊಡುತ್ತೀರಿ ಹೇಳಿ!

ಅಶ್ವ : ಅದು ಅಷ್ಟು ಸುಲಭವಲ್ಲ ಪಾಪಣ್ಣನವರೆ! ನಾನೂ ಅನೇಕಾನೇಕ ದೊಡ್ಡ ದೊಡ್ಡ ಅರಳೀಮರಗಳನ್ನೂ, ಆಲದ ಮರಗಳನ್ನೂ ನೋಡಿದ್ದೇನೆ. ಕಳೆದುಹೋಗಿರುವುದು ಅದಲ್ಲ, ಯಮ ಮುಂದುವರೆದು ಹೇಳುತ್ತಾನೆ.

ಅದು ಬಹಳ ಪ್ರಕಾಶಮಾನವಾಗಿರುವುದಂತೆ. ಸೂರ್ಯನ ಬೆಳಕಿನಲ್ಲಿ ಹೇಗೆ ನಕ್ಷತ್ರಗಳು ಕಾಣದಂತಾಗುತ್ತವೆಯೋ ಹಾಗೆ ಅದರ ಬೆಳಕಿನಲ್ಲಿ ಸೂರ್ಯನೇ ಕಾಣುವುದಿಲ್ಲ.

ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಂ

ನೇಮಾ ವಿದ್ಯುತೋ ಭಾಂತಿ ಕುತೋಯಮಗ್ನಿಃ

ತಮೇವ ಭಾಂತಮನುಭಾತಿ ಸರ್ವಂ

ತಸ್ಯ ಭಾಮಾ ಸರ್ವಮಿದಂ ವಿಭಾತಿ

ಪಪಾ : ನನಗೆ ಸಂಸ್ಕೃತ ಅಷ್ಟು ತಿಳಿಯದು. ನಮ್ಮ ಅರಳೀ ಮರಗಳಾಗಲೀ ಅಥವಾ ಆಲದ ಮರಗಳಾಗಲೀ ಮಟ ಮಟ ಮಧ್ಯಾನ್ನದ ಸೂರ್ಯನ ಬಿಸಿಲಿನಲ್ಲಿ ನೆರಳು ಕೊಡುತ್ತವೆಯೇ ಹೊರತು ಬೆಳಕನ್ನು ಕೊಡುವುದಿಲ್ಲ. ನಾವು ಚಿಕ್ಕವರಿದ್ದಾಗ ಆ ಮರಗಳ ಮೇಲೆ ಬ್ರಹ್ಮರಾಕ್ಷಸ ಇರುವುದೆಂದು ಹೆದರಿಸುತ್ತಿದ್ದರು. ಈಗಲೂ ರಾತ್ರಿಯ ಹೊತ್ತು ಆ ಮರಗಳ ಬಳಿ ಹೋಗುವಾಗ ಎದೆ ಡಬ ಡಬಾ ಎನ್ನುತ್ತೆ.

ಅಶ್ವ : ಹೋಗಲಿ ಬಿಡಿ, ಅದೊಂದು ಉಪಮೆ ಇರಬಹುದು ಅಷ್ಟೆ

ಅಷ್ಟರಲ್ಲಿ ಕರೆ ಗಂಟೆ ಸದ್ದು ಮಾಡಿತು. ಪತ್ತೆದಾರಿ ಪಾಪಣ್ಣನವರು ಎದ್ದು ಬಾಗಿಲು ತೆಗೆದರು. ಬಾಗಿಲಲ್ಲಿದ್ದ ಚಪ್ಪಲಿಯನ್ನು ನೋಡಿದ ಧರ್ಮ ಪತ್ನಿ ಪತಿರಾಯರ ಕಡೆ ಪ್ರಶ್ನಾರ್ಥಕವಾಗಿ ನೋಡಿದರು. ಪಾಪಣ್ಣನವರು ಮೌನವಾಗಿಯೇ ಆಕೆಯನ್ನು ಬರಲು ಸೂಚಿಸಿದರು. ಒಳಗೆ ಬಂದ ಆಕೆ ಸೆರಗಿನಲ್ಲಿ ಮುಚ್ಚಿಟ್ಟುಕೊಂಡು ತಂದಿದ್ದ ಎರಡು ದೊನ್ನೆಗಳನ್ನು ರಾಮ ಮಂದಿರದ ಪ್ರಸಾದ ಎಂದು ಹೇಳುತ್ತಾ ಅವರಿಬ್ಬರ ಮುಂದಿಟ್ಟರು. ಕೈಕಾಲು ತೊಳೆದುಕೊಂಡು ಎರಡು ಲೋಟ ನೀರನ್ನೂ ತಂದಿಟ್ಟರು. ಅವರನ್ನು ಒಂದು ಕ್ಷಣ ನೋಡಿದ ಅಶ್ವತ್ಥಾಮಾಚಾರ್ಯರು ನಮಸ್ಕಾರ, ನೀವು ಜನಕ ರಾವ್ ಅವರ ಮಗಳು ಸೀತಮ್ಮ ಅಲ್ವೇ? ಎಂದಾಗ ಸ್ವಲ್ಪ ಗಲಿಬಿಲಿಗೊಂಡ ಆಕೆ ಹೌದೆಂದು ಗೋಣು ಹಾಕಿ ಅಡುಗೆ ಮನೆ ಸೇರಿಕೊಂಡರು.

ಅಶ್ವ : ನಾನು ಪುರಾತನ ಕಾಲದವನು, ಅನೇಕ ವೇಳೆ ಜನಗಳನ್ನು ಹೀಗೆ ಗುರುತಿಸಬಲ್ಲೆ. ಆದರೂ ಕಳೆದುಕೊಂಡಿದ್ದು ಏನೆಂದು ಇನ್ನೂ ಸರಿಯಾಗಿ ತಿಳಿದೇ ಇಲ್ಲ.

ಪಪಾ : ನಿಮ್ಮ ಯಮ ಅದರ ಬಗ್ಗೆ ಇನ್ನೂ ಏನು ಹೇಳುತ್ತಾನೆ?

ಅಶ್ವ : ಈಗ ಜ್ಞಾಪಕ ಬರ್ತಾ ಇದೆ. ಹೆಬ್ಬೆಟ್ಟಿನ ಗಾತ್ರದಷ್ಟಿರುವ ಅದು ನಮ್ಮ ಹೃದಯದಲ್ಲಿದೆಯಂತೆ. ಆದರೂ ಅದು ನಮ್ಮ ದೇಹದ ಭಾಗವಲ್ಲವಂತೆ. ಆದಕ್ಕೆ ಸಾವಿಲ್ಲಂತೆ ಇತ್ಯಾದಿ ಇತ್ಯಾದಿ. ಅರ್ಥವೇ ಅಗೋಲ್ಲ ಸ್ವಾಮಿ.

ಸೀತಮ್ಮನವರು ಒಂದು ತಟ್ಟೆಯಲ್ಲಿ ಮೂರು ಲೋಟ ಘಮ ಘಮಿಸುತ್ತಿರುವ ಬಿಸಿ ಬಿಸಿ ಕಾಫಿ ತಂದರು. ಇಬ್ಬರಿಗೂ ಒಂದೊಂದು ಲೋಟ ಕೊಟ್ಟು ತಾವೂ ಒಂದು ಲೋಟವನ್ನು ತೆಗೆದುಕೊಂಡು ಇನ್ನೊಂದು ಸೋಫಾದಲ್ಲಿ ಆಸೀನರಾಗುತ್ತಾ

ಸೀ : ನಾನೂ ನಿಮ್ಮ ಮಾತನ್ನು ಕೇಳಿಸಿಕೊಳ್ಳಬಹುದೇ?

ಅಶ್ವ : ಬನ್ನೀಮ್ಮಾ, ಎಷ್ಟೇ ಆಗಲಿ ತಾವು ಜನಕರಾಯರ ಮಗಳಲ್ವೇ, ನನ್ನ ಸಮಸ್ಯೆಗೆ ತಮ್ಮಿಂದಲೇ ಪರಿಹಾರ ದೊರೆಯಬಹುದು.

ಸೀ : ಅಯ್ಯೋ ನಾನು ಹೆಣ್ಣು ಹೆಂಗಸು, ನನಗೇನು ತಿಳಿಯುತ್ತೆ? ಒಂದ್ ಸ್ಕೂಲಿಗೆ ಹೋಗಲಿಲ್ಲ, ಓದು ಬರಹ ಕಲೀಲಿಲ್ಲ. ಚಿಕ್ಕಂದಿನಲ್ಲಿ ಮಣ್ಣಲ್ಲಿ ಆಟ ಆಡ್ತಾ ಕಾಲ ಕಳೆದೆ. ಬೇಗ ಮದುವೆ ಮಾಡಿಬಿಟ್ಟರು. ನಾನಾಯ್ತು ಅಡುಗೆ ಮನೆ ಆಯ್ತು.

ಪಪಾ : ಸ್ವಲ್ಪ ಸುಮ್ನಿರು, ನಿನ್ನ ಹಳೇ ರೆಕಾರ್ಡ್ ಹಾಕ ಬೇಡ.

ಅಶ್ವ : ಹಾಗಲ್ಲ ಸೀತಮ್ಮನವರೆ. ಪುಸ್ತಕದ ಬದನೇಕಾಯಿ ಕಟ್ಕೊಂಡು ಏನ್ಮಾಡಬೇಕು ಹೇಳಿ, ಸಂಸ್ಕಾರ ಮುಖ್ಯವಲ್ಲವೆ?

ಪಪಾ : ಹಾ, ನೀವು ಏನು ಹೇಳುತ್ತಿದ್ದಿರಿ ಅದು ನಮ್ಮ ಹೃದಯದಲ್ಲಿ ಅಂದರೆ ಹಾರ್ಟ್ ನಲ್ಲಿ ಇದೆ ಎಂದಲ್ಲವೇ? ಹಾಗಾದರೆ ಯಾರಾದರೂ ನೋಡಿರಬೇಕಲ್ಲ?

ಅಶ್ವ : ನೋಡಿದ್ದಿರಬಹುದು. ಅವರು ಹೇಳುವುದನ್ನು ಕೇಳಿ. ಹೃದಯ ಹೊಕ್ಕಳಿನಿಂದ ಒಂದು ಗೇಣಿನಷ್ಟು ಮೇಲಿದೆ. ಕಮಲದ ಮೊಗ್ಗಿನಂತೆ ಅದೂ ಕೆಳಮುಖವಾಗಿದೆ. ಅದರಿಂದ ಹೊರಟ ರಶ್ಮಿಗಳು ದೇಹದಲ್ಲೆಲ್ಲಾ ತಲೆಯಿಂದ ಕಾಲಿನವರೆಗೂ ಹರಡಿರುತ್ತವೆ. ಅದರ ಮಧ್ಯದಲ್ಲಿರುವ ಬೆಂಕಿ ನಾವು ಸೇವಿಸಿದ ಆಹಾರವನ್ನೆಲ್ಲ ಜೀರ್ಣಿಸಿಕೊಳ್ಳುತ್ತದೆ. ಕರಿಯ ಮೋಡದಲ್ಲಿ ಮೂಡುವ ಚಿನ್ನದ ಮಿಂಚಿನಂತೆ ಹೊಳೆಯುತ್ತಿರುವ ಆ ಬೆಂಕಿಯಲ್ಲಿ ಚಿನ್ನದ ಭತ್ತದ ಕಣದಂತೆ ಅದು ಇದೆ. ಪದ್ಮಕೋಶಃ ಪ್ರತೀಕಾಶಗಂ ಹೃದಯಂ ಚಾಪ್ಯಧೋಮುಖಂ.....ತಸ್ಯಮಧ್ಯೇ ಮಹಾನಗ್ನಿಃ ವಿಶ್ವಾರ್ಚಿರ್ವಿಶ್ವತೋ ಮುಖಃ ಸೋಗ್ರಭುಗ್ವಿಭಜನ್ ತಿಷ್ಟನ್ ಆಹಾರಮಜರಃ ಕವಿಃ........ನೀಲತೋಯತ ಮಧ್ಯಸ್ಥಾತ್ ವಿದ್ಯುಲ್ಲೇಖೇವ ಭಾಸ್ವರಾ ನೀವಾರ ಶೂಕವತ್ತನ್ವೀ ಪೀತಾಭಾಸ್ವತ್ಯಣೂಪಮಾ....

ಪಪಾ : ಆಚಾರ್ರೇ ಸಂಸ್ಕೃತದಲ್ಲಿ ಏನನ್ನೋ ಹೇಳಿ ದಿಕ್ಕು ತಪ್ಪಿಸಬೇಡಿ. ನನಗೆ ತಿಳಿದಂತೆ ಆಹಾರ ಜೀರ್ಣವಾಗುವುದು ಹೊಟ್ಟೆಯಲ್ಲಿ, ಹೃದಯದಲ್ಲ. ಚೆನ್ನಾಗಿ ತಿಳಿದವರನ್ನೇ ಕೇಳಬೇಕು. ಪಕ್ಕದಲ್ಲೇ ಒಬ್ಬ ಖ್ಯಾತ ವೈದ್ಯರಿದ್ದಾರೆ ಡಾ. ಅಶ್ವಿನಿ ಸಹದೇವ್ ಅಂತ. ನಿಷ್ಣಾತ ಹಾರ್ಟ್ ಸರ್ಜನ್. ಅವರು ನೂರಾರು ಜನರ ಹೃದಯಗಳನ್ನು ಕತ್ತರಿಸಿ ತೆಗೆದು ನೋಡಿ ರಿಪೇರಿ ಮಾಡಿದ್ದಾರೆ. ಹೃದಯದಲ್ಲಿ ಏನಿದೆ ಏನಿಲ್ಲ ಅನ್ನುವುದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಅವರನ್ನು ಕರೆಯೋಣ, ಎಲ್ಲವನ್ನೂ ಸರಿಯಾಗಿ ಹೇಳುತ್ತಾರೆ. ಸೀತಾ, ಡಾ. ಅಶ್ವಿನಿಗೆ ಫೋನ್ ಮಾಡಿ ಕರಿ. ಇವತ್ತು ಭಾನುವಾರ, ಮನೆಯಲ್ಲೇ ಇರಬಹುದು.

ಸೀತಮ್ಮನವರು ಎರಡು ನಿಮಿಷ ಒಳಗೆ ಹೋಗಿ ಬಂದು

ಸೀ : ಇನ್ನು ಐದು ನಿಮಿಷದಲ್ಲಿ ಬರ್ತಾರಂತೆ. ಇನ್ನೊಂದು ರೌಂಡ್ ಕಾಫಿ ಬೆರೆಸಲೆ?

ಸೀತಮ್ಮನವರು ಎದ್ದು ಒಳಗೆ ಹೋದರು.

ಪಪಾ : ಜೊತೇಲಿ ಏನಾದರೂ ಕುರುಕುಲು ಇದ್ರೆ ಚೆನ್ನಾಗಿರುತ್ತೆ.

ಅಶ್ವ : ಏನೂ ಬೇಡೀಮ್ಮಾ ಸುಮ್ಮನೆ ತೊಂದರೆ ತಗೋಬೇಡಿ.

ಪಪಾ : ಇವೆಲ್ಲಾ ಇದ್ದರೇನೆ ಪತ್ತೆದಾರಿ ಕೆಲಸ ಚುರುಕಿನಿಂದ ಮುಂದುವರೆಯುವುದು. ನೀವೇನೂ ಸಂಕೋಚ ಮಾಡ್ಕೋಬೇಡಿ ಆಚಾರ್ಯರೆ.

ಅಷ್ಟರಲ್ಲಿ ನೀಲಿಬಣ್ಣದ ಸಲ್ವಾರ್ ಕಮೀಜ ತೊಟ್ಟ, ಕೈಯಲ್ಲೊಂದು ಸ್ಟೆತಾಸ್ಕೋಪ್ ಹಿಡಿದ ಡಾ.

ಅಶ್ವಿನಿ ತಾವೇ ಬಾಗಿಲನ್ನು ತಳ್ಳಿಕೊಂಡು ಗಡಿಬಿಡಿಯಿಂದ ಒಳಗೆ ಬರುತ್ತಾ

ಡಾ : ಏನ್‌ಸಾರ್ ಸಮಾಚಾರ, ಚೆನ್ನಾಗಿದ್ದೀರಾ?

ಪಪಾ : ಬಾಮ್ಮ, ಕೂತ್ಕೋ. ನನಗೇನಾಗಿದೆ, ಗುಂಡುಕಲ್ಲ್‌ತರಹ ಇದೀನಿ. ನೋಡಿ ಆಚಾರ್ಯರೇ ಇವರೇ ಡಾ. ಅಶ್ವಿನಿ. ಚಿಕ್ಕ ವಯಸ್ಸಿನಿಂದಲೂ ನೋಡಿದ್ದೇನೆ, ಮಗಳ ತರಹ. ಮೆಡಿಕಲ್‌ನಲ್ಲಿ ಫಸ್ಟ್. ಹೃದಯದ ರಿಪೇರಿ, ಜೋಡಣೆ, ಕಸಿ – ಇವೆಲ್ಲವುದನ್ನೂ ಲೀಲಾಜಾಲವಾಗಿ ಮಾಡುತ್ತಾರೆ. ನಮ್ಮ ಆರೋಗ್ಯದ ಜವಾಬ್ದಾರಿ ಇವರ ಮೇಲೆ ಹಾಕಿದ್ದೇವೆ. ನೋಡಮ್ಮಾ ಅಶ್ವಿನಿ ಇವರು ಅಶ್ವತ್ಥಾಮಾಚಾರ್ಯರು. ಏನನ್ನೋ ಕಳೆದುಕೊಂಡು ನನ್ನ ಸಹಾಯ ಕೇಳಿಕೊಂಡು ಬಂದಿದ್ದಾರೆ. ಇವರ ಪ್ರಕಾರ, ಪುಟಕ್ಕೆ ಹಾಕಿದ ಚಿನ್ನದಂತೆ ಹೊಳೆಯುತ್ತಿರುವ ಅದು ನಮ್ಮ ಎದೆಯಲ್ಲಿದೆಯಂತೆ. ನಾವು ತಿಂದ ಆಹಾರವನ್ನು ಜೀರ್ಣಿಸಿಕೊಂಡು ದೇಹದ ಎಲ್ಲಾ ಕಡೆಗೂ ತಲುಪಿಸುತ್ತದಂತೆ ಇತ್ಯಾದಿ. ನನಗೆ ಸ್ವಲ್ಪ ವಿಚಿತ್ರವಾಗಿ ತೋರುತ್ತಿದೆ. ನೀನು ನೂರಾರು ಹೃದಯಗಳನ್ನು ಕತ್ತರಿಸಿ ನೋಡಿದ್ದೀಯ. ಹೇಳಮ್ಮ ನಮ್ಮ ಹೃದಯದಲ್ಲಿ ಏನಿದೆ?

ಡಾ :(ನಗುತ್ತಾ) ನಾವೆಲ್ಲಾ ಪತ್ತೇದಾರಿ ಕೆಲಸ ಮಾಡುವವರಷ್ಟೇ ವಿನಃ ಹೃದಯವನ್ನು ಸೃಷ್ಟಿ ಮಾಡಿದವರಲ್ಲವಲ್ಲ! ನನಗೆ ತಿಳಿದಷ್ಟು ಹೇಳುತ್ತೇನೆ. ಹೃದಯ ಒಂದು ನೀರನ್ನು ಒತ್ತುವ ಪಂಪಿನಂತೆ ಶ್ವಾಸಕೋಶಗಳಿಂದ ಬರುವ ಶುದ್ಧ ರಕ್ತವನ್ನು ದೇಹದ ಎಲ್ಲಾ ಭಾಗಗಳಿಗೂ ಕಳುಹಿಸುತ್ತದೆ. ಹಾಗೆಯೇ ದೇಹದ ಎಲ್ಲಾ ಭಾಗಗಳಿಂದ ಬರುವ ಮಲಿನ ರಕ್ತವನ್ನು ಶ್ವಾಸಕೋಶಗಳಿಗೆ ತಳ್ಳುತ್ತದೆ. ಶ್ವಾಸಕೋಶಗಳಲ್ಲಿ ನಾವು ಉಸಿರಾಡುವ ಆಮ್ಲಜನಕ ರಕ್ತವನ್ನು ಶುದ್ಧಗೊಳಿಸುತ್ತದೆ. ಮತ್ತೆ ಹೃದಯ ಈ ಶುದ್ಧ ರಕ್ತವನ್ನು ದೇಹದ ಎಲ್ಲಾ ಭಾಗಗಳಿಗೂ ಕಳುಹಿಸುತ್ತದೆ. ರಕ್ತ ನಮ್ಮ ಜಠರದಲ್ಲಿ ಜೀರ್ಣವಾದ ಆಹಾರವನ್ನು ಹೀರಿಕೊಂಡು ದೇಹದ ಎಲ್ಲ ಅಂಗಾಂಗಗಳಿಗೂ ತಲುಪಿಸುತ್ತದೆ. ಈ ಜೀರ್ಣ ಕ್ರಿಯೆ ನಡೆಯುವುದು ಜಠರ ಮತ್ತು ಸಣ್ಣಕರುಳಿನಲ್ಲಿಯೇ ಹೊರತು ಹೃದಯದಲ್ಲಲ್ಲ. ಅಂದಹಾಗೇ ಹೃದಯದಲ್ಲಿ ಪ್ರಕಾಶ ಮಾನವಾದ ಯಾವುದೇ ವಸ್ತುವನ್ನು ನಾನು ಇಲ್ಲಿಯವರೆಗೂ ನೋಡಿಲ್ಲ. ಅಲ್ಲಿ ಬೆಳಕಿನ ಸುಳಿವೇ ಇಲ್ಲ. ಅದಕ್ಕೇ ನಾವು ಶಸ್ತ್ರಚಿಕಿತ್ಸೆ ಮಾಡುವಾಗ ಪ್ರಕಾರವಾದ ವಿದ್ಯುದ್ದೀಪಗಳನ್ನು ಉಪಯೋಗಿಸುತ್ತೇವೆ.

ಪಪಾ : ಕೇಳಿದಿರಾ ಆಚಾರ್‍ರೇ!

ಅಶ್ವ : ಹಾಗಾದರೆ ಪೂರ್ವಜರು ಹೇಳಿದ್ದೆಲ್ಲ ಸುಳ್ಳೆ?

ಸೀ : ಬರೀ ಮಾತೇ ಆಯ್ತು ಲ್ಲಮ್ಮ ಅಶ್ವಿನಿ, ಕುರುಕಲು ಬಾಯಿಗೆ ಹಾಕ್ಕೊಂಡು ಕಾಫಿ ಕುಡಿಯಮ್ಮ.

ಡಾ : ಹೂಂ ಆಂಟೀ, ಕಾಫಿ ತುಂಬಾ ಚೆನ್ನಾಗಿದೆ. ಎರಡು ಸಾವಿರ ವರ್ಷಗಳ ಹಿಂದೆ ವಿಜ್ಞಾನ ಇಷ್ಟು ಮುಂದುವರೆದಿರಲಿಲ್ಲ. ತಾವು ಪ್ರತ್ಯಕ್ಷವಾಗಿ ಕಂಡದ್ದು, ಕೇಳಿದ್ದು ಮತ್ತು ಬುದ್ಧಿಪೂರ್ವಕವಾಗಿ ಊಹಿಸಿದ್ದನ್ನು ಉಪಮಾನ ಮತ್ತು ಉತ್ಪ್ರೇಕ್ಷಾಲಂಕಾರಗಳೊಂದಿಗೆ ಕಾವ್ಯಾತ್ಮಕವಾಗಿ ನಮ್ಮ ಪೂರ್ವಜರು ಹೇಳಿದ್ದಾರೆ. ನಾವು ಅದನ್ನು ಸಹೃದತೆಯಿಂದ ಓದಿ ಆನಂದಿಸಬಹುದಷ್ಟೇ ವಿನಃ ಇಂದಿನ ವಿಜ್ಞಾನದ ಚೌಕಟ್ಟಿನಲ್ಲಿ ವಿಶ್ಲೇಶಿಸಲಾಗದು.

ಪಪಾ : ಕೇಳಿದಿರಾ ಆಚಾರ್‍ರೇ!

ಅಶ್ವ : ಕೇಳಿದೆ ಸ್ವಾಮಿ. ಆದರೆ ನನ್ನ ಸಮಸ್ಯೆಗೆ ಪರಿಹಾರ ದೊರೆಯಲಿಲ್ಲ, ಕಳೆದು ಹೋಗಿದ್ದು

ಇನ್ನೂ ಸಿಕ್ಕಿಲ್ಲ.

ಡಾ : ಆಚಾರ್ರೇ!, ಅದು ನಿಮಗೆ ಸಿಕ್ಕಿದಾಗ ನನಗೂ ಹೇಳಿ! ನನ್ನ ಮೊಬೈಲ್ ರಿಂಗಾಗ್ತಾ ಇದೆ. ಯಾರೊ ಪೇಷಂಟ್ ಅಂತ ಕಾಣಿಸುತ್ತೆ. ಸಾರ್, ನಾನು ಬರ್ತೀನಿ....

ಎನ್ನುತ್ತಾ ಡಾ. ಆಶ್ವಿನಿ ಮನೆಗೆ ಹೊರಟರು.

ಸೀ : ನೋಡಿದಿರಾ, ನಮ್ಮ ಅಶ್ವಿನಿ ಎಷ್ಟೊಂದು ತಿಳಿದುಕೊಂಡಿದ್ದಾಳೆ, ತುಂಬಾ ಜಾಣೆ.

ಪಪಾ : ಹೌದು, ಅದಕ್ಕೇ ಅವಳನ್ನು ನಾನು ಕರೆಸಿದ್ದು. ಆದರೆ ನಮ್ಮ ಅಶ್ವತ್ಥಾಮಾಚಾರ್ಯರ ಕಳೆದುಹೋದ ವಸ್ತುವನ್ನು ಎಲ್ಲಿ ಹುಡುಕೋಣ?

ಸೀ : ಅಯ್ಯೋ ನಿಮ್ಮಿಬ್ಬರಿಗೂ ಭ್ರಾಂತು. ಅವರೇ ಕಳೆದು ಹೋಗಿರುವಾಗ ಯಾವ ವಸ್ತುವನ್ನು ಹುಡುಕುತ್ತೀರ?

ಪಪಾ : ಏನೇ ಹಾಗೆಂದ್ರೆ, ಅವರು ಇಲ್ಲೇ ದೆವ್ವದ ಹಾಗೆ ಕೂತಿದ್ದಾರಲ್ಲಾ? ಕ್ಷಮಿಸಿ ಆಚಾರ್ರೇ!, ಏನೋ ಬಾಯಿ ತಪ್ಪಿ ಮಾತು ಬಂತು.

ಅಶ್ವ : ಇರಲಿ ಬಿಡಿ, ನೀವು ಹೇಳಿದ್ದೂ ಒಂದು ರೀತಿಯಲ್ಲಿ ಸರಿಯೆ.

ಸೀ : ಏನೇ ಆಗಲಿ, ನೀವು ಹಾಗೆ ಹೇಳಬಾರದಿತ್ತು. ಏನೋ ಹೇಳಲು ಹೊರಟಿದ್ದೆ. ಹೋಗಲಿ ಬಿಡಿ.

ಅಶ್ವ : ಹೇಳೀಮ್ಮ, ನಿಮ್ಮ ಸಂಸ್ಕಾರ ಬಹಳ ಉತ್ಕೃಷ್ಟವಾದದ್ದು. ನನ್ನ ಹುಡುಕಾಟಕ್ಕೆ ನಿಮ್ಮಲ್ಲೇ ಉತ್ತರ ಇರಬಹುದು.

ಸೀ : ನಮ್ಮ ತಂದೆ ಹೇಳುತ್ತಿದ್ದ ಕೆಲವುಮಾತುಗಳು ಜ್ಞಾಪಕಕ್ಕೆ ಬರುತ್ತಿದೆ. ನಮ್ಮ ಕಣ್ಣುಗಳ ಮುಂದಿರುವ ಚಿನ್ನದ ಪೊರೆಯನ್ನು ತೆಗೆದರೆ ಅದು ಕಾಣುತ್ತದೆ. ಅದೇ ನಾನು ಎಂದು.

ಅಶ್ವ : ಅಮ್ಮ, ಹಾಗೆ ಹೇಳಿದರೆ ನಿಮ್ಮ ಪತಿರಾಯರು ಯಾರಾದರೂ ಕಣ್ಣಿನ ವೈದ್ಯರನ್ನು ಕರೆಸಿಬಿಡುತ್ತಾರೆ!

ಪಪಾ : ಚಿನ್ನದ ಪೊರೆ ಸಿಗುವಂತಿದ್ದರೆ ಏಕೆ ಕರೆಸಬಾರದು ಆಚಾರ್ಯರೆ?

ಸೀ : ಅಯ್ಯೋ, ನಿಮ್ಮ ಬುದ್ಧಿಗೆ ಮಂಕು ಹಿಡಿದಿದೆ. ಮುಖ್ಯವಾದದ್ದು ಪೊರೆ ಅಲ್ಲ, ಪೊರೆ ತೆಗೆದ ಮೇಲೆ ಕಾಣುತ್ತದೆಯಲ್ಲ ಅದು.

ಆಶ್ವ : (ಆತುರದಿಂದ) ಅದೇ ಅದಾ? ನೀವು ನೋಡಿದ್ದೀರಾ. ಹೇಗಿದೆ ಹೇಳಿ.

ಸೀ : ಇಲ್ಲಪ್ಪ, ನಾನು ನೋಡಿಲ್ಲ. ನಮ್ಮ ತಂದೆಯವರು ಹೇಳಿದ್ದನ್ನು ಕೇಳಿದ್ದೆನಷ್ಟೆ.

ಪಪಾ : ಏನು ಹೇಳುತ್ತಿದ್ದರು ನಮ್ಮ ಮಾವನವರು?

ಸೀ : ಆಗ ಅಂದರೆ ಪೊರೆ ಕಳಚಿದ ಮೇಲೆ ನಮ್ಮನ್ನು ನಾವೇ ಕಾಣುತ್ತೇವಂತೆ. ಅವರು ಆಗಾಗ್ಗೆ ಹೇಳುತ್ತಿದ್ದರು ಅದೇ ನಾನು, ಸೋಹಮಸ್ಮಿ.

ಪಪಾ : ಇಷ್ಟಕ್ಕೆ ಏಕಿಷ್ಟು ಕಷ್ಟಪಡಬೇಕು, ಒಂದು ಕನ್ನಡಿಯ ಮುಂದೆ ನಿಂತರೆ ನಮ್ಮನ್ನು ನಾವೇ ನೋಡಬಹುದಲ್ಲಾ?

ಸೀ : ಕನ್ನಡಿಯಲ್ಲಿ ಕಾಣುವುದು ನಿಮ್ಮ ಪ್ರತಿಬಿಂಬವಷ್ಟೆ, ನೀವಲ್ಲ.

ಅಶ್ವ : ಪ್ರತಿಬಿಂಬವೂ ಹಾಗೆಯೇ ಹೇಳಬಹುದಲ್ಲವೆ? ಯಾವುದು ಸತ್ಯ- ಬಿಂಬವೋ, ಪ್ರತಿಬಿಂಬವೋ, ಎರಡೂ ನಿಜವೋ ಅಥವ ಇವೆರಡನ್ನೂ ಮೀರಿದ ಮತ್ತೊಂದೋ? ಇಲ್ಲ, ಕನ್ನಡಿಯಿಂದ ಏನೂ ಪ್ರಯೋಜನವಾಗದು.

ಪಪಾ : ಹಾಗಾದರೆ ನಮ್ಮ ಕಣ್ಣಿನ ಡಾಕ್ಟರು ಗೋಪಾಲ ರಾವ್ ಅವರನ್ನು ಕರೆಸೋಣವೆ?

ಸೀ : ಪ್ರಯೋಜನವಿಲ್ಲ, ಅವರು ಕ್ಯಾಟರಾಕ್ಟ್ ಪೊರೆಯನ್ನು ತೆಗೆಯ ಬಲ್ಲರು. ಆದರೆ ಚಿನ್ನದ ಪೊರೆ ಅವರ ಕಣ್ಣಿಗೆ ಕಾಣಿಸುವುಲ್ಲ, ಅವರ ಸೂಜಿಗೆ ಅದು ಸಿಗುವ ಪ್ರಶ್ನೆಯೇ ಇಲ್ಲ, ಯಾರಾದರೂ ಸರಿಯಾದ ಗುರುಗಳು ಈ ಕೆಲಸ ಮಾಡಬಲ್ಲರು.

ಪಪಾ : ಬಹಳ ಸುಲಭ ! ಯಾವ ಗುರುಗಳು ಬೇಕು – ಇಸ್ಲಾಂ, ಕ್ರೈಸ್ತ, ಹಿಂದು, ಪಾರ್ಸಿ, ಸಿಖ್, ಲಿಂಗಾಯತ, ವೀರಶೈವ, ಜೈನ, ಬೌದ್ಧ – ಯಾವುದೇ ಪಂಗಡದ ಅಥವ ಉಪಪಂಗಡದ ಗುರುಗಳು ಬೇಕು ಹೇಳು, ಕರೆಸುತ್ತೇನೆ. ಫ್ರೀ ಲಾನ್ಸ್ ಗುರುಗಳೂ ಸಿಗುತ್ತಾರೆ. ಸಾಕಷ್ಟು ಚಿನ್ನದ ಸೂಜಿಗಳು ಇರಬೇಕಷ್ಟೆ

ಅಶ್ವ : ಚಿನ್ನದ ಸೂಜಿಗಳ ವ್ಯವಸ್ಥೆಯನ್ನು ನನಗೆ ಬಿಡಿ, ನೋಡಿಕೊಳ್ಳುತ್ತೇನೆ.

(ಕರೆಗಂಟೆಯ ಸದ್ದಾಗುತ್ತದೆ. ಪತ್ತೇದಾರಿ ಪಾಪಣ್ಣನವರು ಎದ್ದು ಬಾಗಿಲು ತೆಗೆಯುತ್ತಾರೆ. ಶ್ರೀಮಾನ್ ಹುಚ್ಚೂರಾಯರು ಪ್ರತ್ಯಕ್ಷರಾಗುತ್ತಾರೆ. ಆಜಾನುಬಾಹು, ಹೆಚ್ಚು ವಯಸ್ಸಾಗಿದ್ದರೂ ಕಟ್ಟುಮಸ್ತಾದ ಶರೀರ, ಕಾವಿ ಬಣ್ಣದ ತುಂಡು ಪಂಚೆ, ಬಿಳಿಯ ಉತ್ತರೀಯ. ಹೊಕ್ಕಳಿನವರೆಗೂ ಬೆಳೆದ ನೀಳವಾದ ಮಿರಿ ಮಿರಿ ಮಿಂಚುವ ಬಿಳಿಯ ಗಡ್ಡ, ಹಾವಿನ ಹುತ್ತದಂತೆ ತಲೆಯ ಮೇಲೆ ಕಟ್ಟಿದ ಶಿಖೆ, ವಜ್ರದಂತೆ ಹೊಳೆಯುತ್ತಿರುವ ಬೊಗಸೆ ಕಣ್ಣುಗಳು, ಬರಿದಾದ ಕ್ರಿಕೆಟ್ ಪಿಚ್ ನಂತಿರುವ ವಿಶಾಲವಾದ ಹಣೆ – ಒಟ್ಟಿನಲ್ಲಿ ನೋಡಿದೊಡನೆಯೇ ಭಯಮಿಶ್ರಿತ ಗೌರವವನ್ನು ಹುಟ್ಟಿಸುವ ವ್ಯಕ್ತಿತ್ವ.)

ಹುರಾ : ಸೀತಮ್ಮನವರಿಗೆ ಪ್ರಣಾಮಗಳು.

ಸೀ : ಏನು ಅಭಾಸ ಗುರುಗಳೆ! ಕಿರಿಯಳಾದ ನನಗೆ ನೀವು ಆಶೀರ್ವಾದ ಮಾಡಬೇಕು.

(ಎಂದು ಹೇಳುತ್ತಾ ಸೀತಮ್ಮ ಹುಚ್ಚೂರಾಯರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಾರೆ)

ಅಶ್ವ : ಅಡ್ಡಬಿದ್ದೆ ಅಣ್ಣಾವರಿಗೆ

ಹುರಾ : ಓ ಅಶ್ವತ್ಥಾಮ! ಇಲ್ಲಿ ಏಕೆ ಬಂದೆಯೋ ನೀಚ?

ಅಶ್ವ : ಅದೇ ಗುರುಗಳೆ, ಅದನ್ನೇ ಅರಸಿಕೊಂಡು ಬಂದೆ.

ಹುರಾ : ನಿನ್ನಂತಹ ಪಾಪಿಗಳಿಗೆ ಅದು ದಕ್ಕುವುದಿಲ್ಲ.

ಅಶ್ವ : ನನಗೆ ಅಲೆದಲೆದು ಸಾಕಾಗಿದೆ, ದಾರಿ ತೋರಿಸಿ.

ಹುರಾ : ಹೋಗು, ಪಕ್ಕದ ರಸ್ತೆಯಲ್ಲಿರುವ ರಾಮಮಂದಿರದಲ್ಲಿ ಹರಿಕಥೆ ನಡೆಯುತ್ತಿದೆ. ಯಾರಿಗೂ ಕಾಣದಂತೆ ಮೂಲೆಯಲ್ಲಿ ಕುಳಿತುಕೊಂಡು ಕೇಳು. ನಿನಗೆ ಸ್ವಲ್ಪ ಶಾಂತಿ ದೊರೆಯಬಹುದು. ನಿನ್ನ ಪಾಪಿ ಮುಖವನ್ನು ಯಾರಿಗೂ ತೋರಿಸಬೇಡ.

ಅಶ್ವತ್ಥಾಮಾಚಾರ್ಯರು ಏಳುತ್ತಿದ್ದಂತೆ ಅವರ ರೂಪ ಬದಲಾಗುತ್ತದೆ. ಕೊಳಕಾದ ಉದ್ದ ಗಡ್ಡ, ಗಂಟು ಗಂಟಾದ ಸೊಂಟದವರೆಗೂ ಬೆಳೆದ ಕಗ್ಗಂಟಾದ ಜಟೆ, ಚಿಂದಿ ಚಿಂದಿಯಾದ ದುರ್ನಾತ ಹೊಡೆಯುತ್ತಿರುವ ದೊಗಲು ಬಟ್ಟೆ, ಹಣ್ಣಾದ ಸುಕ್ಕು ಸುಕ್ಕಾದ ಬಾಗಿದ ದೇಹದ ಅಶ್ವತ್ಥಾಮ ಎಲ್ಲರಿಗೂ ನಮಸ್ಕರಿಸುತ್ತ ಮೌನವಾಗಿ ಹೊರಗೆ ಹೋಗುತ್ತಾನೆ.

ಪಪಾ : ಇದೇನು, ಆಚಾರ್ಯರು ಕುಳಿತಿದ್ದ ಸೋಫಾ ಮೇಲೆ ಯಾವುದೋ ತಟ್ಟೆ ಫಳ ಫಳ ಹೊಳೆಯುತ್ತಿದೆ!

ಪಾಪಣ್ಣ ಎದ್ದು ಅದನ್ನು ಕೈಗೆತ್ತಿಕೊಳ್ಳುತ್ತಾ – ಸೀತಾ, ಈ ತಟ್ಟೆ ಎಲ್ಲಿಂದ ಬಂತು ?

ಸೀ : ತಟ್ಟೆಯನ್ನು ಗಂಡನಿಂದ ತೆಗೆದುಕೊಳ್ಳುತ್ತ– ರೀ, ಇದು ಚಿನ್ನದ ತಟ್ಟೆ, ನಮ್ಮದಲ್ಲ. ಆಚಾರ್ಯರು ಮರೆತು ಇಲ್ಲೇ ಬಿಟ್ಟು ಹೋಗಿರಬೇಕು. ಬೇಗ ಅವರನ್ನು ಕರೆಯಿರಿ, ಇಲ್ಲೇ ಹತ್ತಿರ ಇರಬೇಕು.

ಪಪಾ : ಸ್ವಲ್ಪ ತಡಿ. ತಟ್ಟೆಯಲ್ಲಿ ಏನೋ ಇದೆ. ಓ, ಚಿನ್ನದ ಸೂಜಿಗಳು! ಇದೇನು ಕಾಗದ?

ಸೀ : ಕೊಡಿ ಇಲ್ಲಿ.

ಸೀತಮ್ಮ ಕಾಗದವನ್ನು ತೆಗೆದುಕೊಂಡು ಓದುತ್ತಾರೆ.

ಪತ್ತೆದಾರಿ ಪಾಪಣ್ಣ, ಸೀತಮ್ಮ ಮತ್ತು ಹುಚ್ಚೂರಾಯರಿಗೆ ನಮಸ್ಕಾರಗಳು. ನಿಮ್ಮೊಂದಿಗೆ ಮಾತನಾಡಿದುದರಿಂದ ಮನಸ್ಸು ಸ್ವಲ್ಪ ಹಗುರವಾಯಿತು. ಈ ಪಾಪಿಯ ಅಲ್ಪ ಕಾಣಿಕೆಯನ್ನು ಸ್ವೀಕರಿಸ ಬೇಕು.

ಇಂತಿ

ಅಶ್ವತ್ಥಾಮ

ಸೀ : ಏನಿದೆಲ್ಲ ಗುರುಗಳೆ, ನನಗೇನೂ ಅರ್ಥವಾಗುತ್ತಿಲ್ಲ, ಹೆದರಿಕೆಯಾಗುತ್ತಿದೆ.

ಹುರಾ : ನಿಮಗೆ ಅರ್ಥವಾಗದ್ದೇನಿದೆ ಸೀತಮ್ಮನವರೆ? ಈತ ಶಿಶು ಹತ್ಯೆ ಮತ್ತು ಭ್ರೂಣ ಹತ್ಯೆ ದೋಷವನ್ನು ಹೊತ್ತ ಅಶ್ವತ್ಥಾಮ. ಸಾವಿರಾರು ವರ್ಷಗಳಿಂದ ಶಾಪಗ್ರಸ್ತನಾಗಿ ಅಂತರ ಪಿಶಾಚಿಯಂತೆ ಅಲೆಯುತ್ತಿದ್ದಾನೆ, ಪಾಪ.

ಪಪಾ : ಗುರುಗಳೆ, ಈ ಕಾಣಿಕೆ ನಿಮಗೆ ಸಲ್ಲಬೇಕಾದದ್ದು.

ಎಂದು ಹೇಳುತ್ತ ತಟ್ಟೆಯನ್ನು ಹುಚ್ಚೂರಾಯರ ಮುಂದಿಟ್ಟು ನಮಸ್ಕರಿಸುತ್ತಾರೆ.

ಹುರಾ : ಈ ವಯಸ್ಸಿನಲ್ಲಿ ಹಣ್ಣು ಹಂಪಲುಗಳನ್ನು ತಿಂದು ಜೀವಿಸುವ ನನಗೆ ಚಿನ್ನದ ತಟ್ಟೆಯ ಅವಶ್ಯಕತೆಯಾದರೂ ಏನು? ದ್ವಾಪರಯುಗದ ಈ ತಟ್ಟೆ ನಿಮಗೆ ಉಪಯೋಗಕ್ಕೆ ಬಂದೀತು. ನಿಮ್ಮಲ್ಲೇ ಇರಲಿ. ಬನ್ನಿ, ನಾವೂ ಹರಿಕಥೆ ಕೇಳಲು ಹೋಗೋಣ.

(ಮೂವರೂ ಹೊರಗೆ ಹೋಗುತ್ತಾರೆ)

■

# ರಬ್ಬರ್ ಬ್ಯಾಂಡಿನಂತೆ ರ ಎಳೆದಾಗ..

**● ಆರತಿ ಘಟಿಕಾರ್**

ಹೈಟೆಕ್ ನಗರ, ಚಿನ್ನದ ನಾಡು ದುಬೈಗೆ ಬಂದು ಒಂದು ವಾರಕ್ಕೇ ಗಡಿಬಿಡಿ ಧಾವಂತದಲ್ಲಿ ಹಿರಿ ಮಗನನ್ನು ಶಾಲೆಗೆ ಸೇರಿಸಿ ಉಸ್ಸಪ್ಪ ಎಂದು ನಿಟ್ಟುಸಿರು ಬಿಡುವಾಗಲೇ, ಅಲ್ಲಿನ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದ ಅವನಿಗೆ ದುಬೈನ ಅಧಿಕೃತ ಭಾಷೆಯಾದ ಅರಾಬಿಕ್ ಸಹ ಕಡ್ಡಾಯವಾಗಿ ಕಲಿಯಲೇಬೇಕೆಂದು ಅರಿತಾಗ ಹೌಹಾರಿ ಕುಳಿತಿದ್ದ. ಹಾಗಾಗಿ ಪತಿಯ ಕಚೇರಿಯಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತಿದ್ದ ಈಜಿಪ್ಟ್ ದೇಶದವನಾದ ಅಬ್ದುಲ್ ಬಾಸಿತ್ ನನ್ನ ಮಗನಿಗೆ ಅರಾಬಿಕ್ ಕಲಿಸುವ ಮೇಷ್ಟ್ರಾದ. ಅರಾಬಿಕ್ ಮನೆ ಪಾಠ ಶುರು ಮಾಡಿದಾಗ ಆಗಾಗ ಅಲ್ಲಿ ನನ್ನ ಠಿಕಾಣಿಯೂ ಇರುತ್ತಿತ್ತು.

ಪುಸ್ತಕದ ಕೊನೆಯ ಪುಟದಿಂದ ಬರೆಯಲು ಶುರು ಮಾಡಿ ತಾರೀಕನ್ನು ಕೂಡ ಬಲದಿಂದ ಎಡಕ್ಕೆ ಆರಂಭಿಸಿದ ಮಗನನ್ನು ಕಂಡು ನನಗೋ ಅಪಾರವಾದ ಅಚ್ಚರಿ. ಇದು ಸಾಲದು ಎಂಬಂತೆ ಮಾಸ್ತರು ಅವನು ಬರೆದ ಟಿಪ್ಪಣಿಗಳನ್ನು ಪರೀಕ್ಷಿಸುತ್ತಾ ಸರಿ ಚಿನ್ಹೆಗಳನ್ನು ಹಾಗೂ ಕೆಲವು ಕಡೆ ಪ್ರಶ್ನಾರ್ಥಕ ಚಿನ್ಹೆಗಳನ್ನು ಕೂಡಾ ಉಲ್ಟಾ ಹಾಕಿದ್ದು ಕಂಡಾಗ ನನಗೆ ನಗು ತಡೆಯಲಾಗಲಿಲ್ಲ.

"ಇದೇನು ಮೇಷ್ಟ್ರೇ, ನಿಮ್ಮ ಅರಾಬಿಕ್ ಭಾಷೆಯಲ್ಲಿ ಈ ಚಿನ್ಹೆಗಳನ್ನೂ ಕೂಡ ಉಲ್ಟಾ ಬರೀತೀರಲ್ಲ! ನನ್ನ ಮಗನನ್ನು ಕೂಡಾ ಉಲ್ಟಾ ಕೂಡಿಸಿ ಬರೆಸುತ್ತಿಲ್ಲ ಸದ್ಯ" ಎಂದು ಮೇಷ್ಟ್ರನ್ನು ಕಿಚಾಯಿಸಿದಾಗ ಅವರು ತಮ್ಮ ಪದ್ಧತಿಯೆ ಶ್ರೇಷ್ಟವೆಂದು ಸಮರ್ಥಿಸಿಕೊಳ್ಳುತ್ತಾ "ಮೇದಾಂ ! ನಮ್ಮದು ಅತಿ ಪ್ರಾಚೀನ ಭಾಷೆ, ನಾವು ಬರೆಯುವ ಪದ್ಧತಿಯೇ ಸರಿಯಿದೆ. ಹಾಗೆ ನೋಡಿದರೆ ನಿಮ್ಮ ಬರೆಯುವ ವಿಧಾನವೇ ಉಲ್ಟಾ!" ಎಂದು ಕೊರೆಯಲು ಶುರು ಮಾಡಿದ್ದ. ಇತರ ಭಾಷೆಗಳಲ್ಲಿ ಎಡದಿಂದಲೇ ಬರವಣಿಗೆಯನ್ನು ಶುರು ಮಾಡುವ ರೂಢಿಯಿದೆ. ಈ ವಿಷಯದಲ್ಲಿ ನಾವು ಬಹುಸಂಖ್ಯಾತರು ಎಂದು ನಾನು ಅವನಿಗೆ ನಗುತ್ತಲೇ ತಿರುಗುಬಾಣ ಬಿಟ್ಟಿದ್ದು ಆಯಿತು! ಅಂತೂ ಮಗನ ಜೊತೆ ನಾನು ಸಹ (ಹಣಕೊಡದೆ) ಅಕ್ಷರಗಳನ್ನು ತಿದ್ದುವ ಮಟ್ಟಕಷ್ಟೇ ಕೊಂಚ ಅರಾಬಿಕ್ ಕಲಿತುಕೊಂಡೆ !

ನಾನು ಕ್ರಮೇಣ ದುಬೈ ವಾತಾವರಣಕ್ಕೆ ಅಡ್ಜಸ್ಟ್ ಆಗಿ ಅಲ್ಲಿ ಉದ್ಯೋಗಕ್ಕೆ ಸೇರಿದೆ . ನನ್ನ ಕಚೇರಿಯಲ್ಲಿ ಅರಬ್ ದೇಶದ ಸ್ಥಳೀಯರೆ ಹೆಚ್ಚಿನ ಸಂಖ್ಯೆಯಲ್ಲಿದ್ದರು . ಭಾರತೀಯ ಹೆಸರುಗಳನ್ನು ಅವರು ಉಚ್ಚರಿಸುವುದನ್ನು ಕಂಡಾಗಲ್ಲೆಲ್ಲಾ ನಗೆ ಉಕ್ಕಿ ಬರುತ್ತಿತ್ತು! ನನ್ನನ್ನು ಸಂಬೋಧಿಸುವಾಗ ಆರಾ....ತಿ ಎಂದು ರ ಅಕ್ಷರವನ್ನು ರಬ್ಬರ್ ಬ್ಯಾಂಡಿನಂತೆ ಎಳೆದು ಹೇಳುವಾಗ ಅವರ ಬಾಯಿಗೆ ಒಂದು ಲಾಡು ಹಾಕಬಹುದಿತ್ತೇನೋ ಅನಿಸುತಿತ್ತು. ಚಿಕ್ಕದಾದ ಅರಬ್ ಸಹೋದ್ಯೋಗಿಗಳ ಹೆಸರನ್ನು ನಾನು ಸಲೀಸಾಗಿ ಹೇಳಿ ಅವರನ್ನು ಬೆರಗು ಗೊಳಿಸಿದರೂ, ಲೆಬನಾನ್ ದೇಶದ ನಮ್ಮ ಮ್ಯಾನೇಜರ್ ಸಾಮೆರ್ ಅಚಾಕರ್ ನನ್ನ ಬಾಯಲ್ಲಿ ಒಮ್ಮೆ ಸಮೀರ್ ಆಚಾರ್ ಆದಾಗ ನನ್ನ ಸಹದ್ಯೋಗಿಗಳು ನನ್ನನ್ನು ಕಿಚಾಯಿಸಿ ಮೂರ್ನಾಲ್ಕು ಕಷ್ಟಕರ ಅರಬ್ ಹೆಸರುಗಳನ್ನು ನನ್ನಿಂದ ಹೇಳಿಸಿ ಮಜಾ ತೆಗೆದುಕೊಂಡಿದ್ದು ಇನ್ನೂ ನೆನಪಿದೆ! ಉದ್ದನೆಯ ರೈಲ್ವೆ ಬೋಗಿಯಂತಿದ್ದ ನಮ್ಮ ಅರಬ್ ಬಾಸಿನ ಹೆಸರಂತೂ ಒಂದಿಷ್ಟೂ ನೆನಪಲ್ಲಿ ಉಳಿಯದೆ ಕೊನೆ ಬೋಗಿ ಅರ್ಥಾತ್ ಅವರ ಕೊನೆ ಹೆಸರಿನಷ್ಟೇ ನೆನಪಿಟ್ಟುಕೊಂಡಿದ್ದೆ.

ಅರಾಬಿಕ್ ವರ್ಣಮಾಲೆಯಲ್ಲಿ ಪ, ಚ, ಟ ವ ಹೀಗೆ ಕೆಲ ಅಕ್ಷರಗಳು ಇಲ್ಲವಾದ್ದರಿಂದ ಅವುಗಳ ಬದಲಿಗೆ ಬೇರೆ ಸೂಕ್ತ ವ್ಯಂಜನಗಳನ್ನು ಬಳಸಿದಾಗ ಅರಬ್ಬರ ಬಾಯಲ್ಲಿ ಕೆಲವು ಹೆಸರುಗಳು ಸ್ಪ್ರಿಂಗಿನಂತೆ ತಿರುಚಿಕೊಂಡು ಮರು ಹುಟ್ಟು ಪಡೆಯುತ್ತಾ ಹಾಸ್ಯ ಉಕ್ಕಿಸುತ್ತಿದ್ದವು. ಸಾಮಾನ್ಯವಾಗಿ ಪ ಅಕ್ಷರದ ಬದಲು ಬ, ಚ ಬದಲಿಗೆ ಶ ಅಕ್ಷರ ಬಳಸುವ ರೂಢಿ ಇದೆ.

ನನ್ನ ಪತಿ ರವಿಯವರ ಹೆಸರನ್ನು ಮೊಹಂದಿಸ್ ರಾ ...ಬಿ ಎಂದು ರ ಅಕ್ಷರವನ್ನು ಆಳವಾದ ಭಾವಿಗೆ ಹಗ್ಗ ಹಾಕಿ ಎಳೆದಂತೆ ಕರೆಯುತ್ತಿದ್ದರು. (ಅರಾಬಿಕ್ ಭಾಷೆಯಲ್ಲಿ ಇಂಜಿನಿಯರ್‌ಗೆ ಮೊಹಂದಿಸ್ ಎನ್ನುತ್ತಾರೆ). ಒಮ್ಮೆ ಒಂದು ಕಾಮಗಾರಿ ಕಂಪನಿಗೆ ಒಬ್ಬ ಅರಬ್ ಕರೆ ಮಾಡಿ ಮೊಹಂದಿಸ್ ಬೇಕಿತ್ತು ಎಂದಾಗ ಅಲ್ಲಿದ್ದ ಆಫೀಸ್ ಬಾಯ್ ನಾನೇ ಮೋಹನ್‌ದಾಸ್ ಎಂದಿದ್ದನಂತೆ!

ಶಾಲೆಯಲ್ಲೂ ಕೆಲವು ಭಾರತೀಯ ಹೆಸರುಗಳು ಇವರ ಬಾಯಿಗೆ ಸಿಕ್ಕು ಚಿಂದಿ ಚಿತ್ರಾನ್ನವಾಗುತಿತ್ತು !

ನನ್ನ ಮಗ ತೇಜಸ್ ಅವನ ಅರಾಬಿಕ್ ಶಿಕ್ಷಕರ ಬಾಯಲ್ಲಿ ತೀಜಾಸ್ ಆದರೆ ಅವನ ಗೆಳೆಯ ಪ್ರತೀಕ್ ಕುಟ್ಟಿ, ಬರ್ತಿಗ್ ಕೂತಿ ಆಗಿ ಕೊನೆಗೆ ಉಚ್ಚರಿಸುವಾಗ ಕೋತಿಯೇ ಆಗಿಹೋಗಿದ್ದ ! ಮಗನ ಜೊತೆಯಲ್ಲಿ ಕೂಡುತಿದ್ದ ಸಬಾಸ್ಟಿನ್ ಸಬಾ ಸತೀನಿ ಆಗಿ ಹೊಸ ನಾಮಧೇಯ ಪಡೆದರೆ ಮತ್ತೊಬ್ಬ ವಿದ್ಯಾರ್ಥಿನಿ ಕೃಪಾಳ ಹೆಸರು ಕುರುಬ ಎಂದು ನಾಮಕರಣಗೊಂಡಿತ್ತು ! ಒಟ್ಟಿನಲ್ಲಿ ಅರಾಬಿಕ್ ಕ್ಲಾಸ್ ಎಂದರೆ ಸಾಕು ಕೆಲವು ಹೆಸರುಗಳು ಕಚಗುಳಿ ಕೊಟ್ಟು ನಗೆ ಉಕ್ಕಿಸುವ ಹೊಸ ಅವತಾರ ತಾಳುತ್ತಿದ್ದವು .

ನಾವು ಸಾಮಾನ್ಯವಾಗಿ ಬಿಳಿ ಸುಣ್ಣ ಕೇಳಿರುತ್ತೇವೆ ಆದರೆ ಕರಿ ಸುಣ್ಣ ಎಂದಾಗ ಅಚ್ಚರಿ ಆಗುತ್ತದೆ ಅಲ್ಲವೇ ! ಈ ಕರಿ ಸುಣ್ಣ ಅಲ್ಲಲ್ಲ ಕರಿಶುಣ ಬೈಲೇ ಮತ್ತಾರು ಅಲ್ಲ ನನ್ನ ಪತಿಯ ಕಚೇರಿ ಕೃಷ್ಣ ಪಿಳ್ಳೈ ಎಂಬುವವರು . ಕಚೇರಿಗೆ ಸೇರಿದ ಹೊಸತರಲ್ಲಿ ರೆಕಾರ್ಡಿನಲ್ಲಿದ್ದ ಅವರ ಹೆಸರನ್ನು ಓದಿಕೊಂಡ ಅರಬ್ ಸಹದ್ಯೋಗಿಗಳು ಅವರನ್ನು ಹಾಗೆ ಸಂಬೋಧಿಸುತ್ತಿದ್ದರಂತೆ. ಭಾರತೀಯ ಮೂಲದವರನ್ನು ಇಲ್ಲಿಯ ಜನ ಅಲ್ ಹಿಂದ್ ಎನ್ನುತ್ತಾರೆ . ಶುರುವಿನಲ್ಲಿ ಅದನ್ನು ನಾನು ಕನ್ನಡೀಕರಿಸಿ ನಾನು ಕೊಂಚ ಗಲಿಬಿಲಿಗೊಂಡಿದ್ದೆ.

ನಮ್ಮ ಸ್ನೇಹಿತರ ದೂರದ ಸಂಬಂಧಿಯೊಬ್ಬರು ಕೆಲಸಕ್ಕಾಗಿ ಕರ್ನಾಟಕದ ಸಣ್ಣ ಊರಿನಿಂದ ಮೊದಲ ಬಾರಿ ದೂರದ ದುಬೈ ವಿಮಾನ ನಿಲ್ದಾಣಕ್ಕೆ ಬಂದಿಳಿದು, ವೀಸಾ ಸ್ಟ್ಯಾಂಪ್ ಗಾಗಿ ಇಮ್ಮಿಗ್ರೇಶನ್ ಸರದಿ ಸಾಲಿನಲ್ಲಿ ನಿಂತಾಗ ಅಲ್ಲಿನ ಅರಬ್ ಪಾಸ್‌ಪೋರ್ಟ್ ಅಧಿಕಾರಿ ಇವರ ವೀಸಾ ಕಾಗದಗಳನ್ನು ಪರಿಶೀಲಿಸುತ್ತ " ವಿಸ್ಕಿ ಪೀತಾ?" ಎಂದು ಗಂಭೀರವಾಗಿ ಪ್ರಶ್ನಿದಾಗ ಇವರಿಗೆ ಗಾಬರಿ ಗಲಿಬಿಲಿ ಭಯ ಎಲ್ಲವೂ ಒಮ್ಮೆಲೆ ಮುತ್ತಿಗೆ ಹಾಕಿ " ಮೈ ನಹಿ ಪೀತಾ " ಎಂದು ಮುಂದೇನು ಗತಿಯೋ ಎಂಬಂತೆ ಎಂದು ತಡವರಿಸುತ್ತಾ ಉತ್ತರಿಸಿದರು. ಆಗ ಆ ಅರಬಿಯನು ಜೋರಾಗಿ ನಕ್ಕು ಇವರನ್ನು ಮುಂದೆ ಕಳುಹಿಸಿದ ನಂತರ ತಿಳಿದಿದ್ದು "ವಿಶ್ವಪತಿ ಮೊಳೆಯಾರ್" ಎಂಬ ತಮ್ಮ ಚೆಂದದ ಹೆಸರಿನ "ವಿಶ್ವಪತಿ" ವಿಸ್ಕಿ ಪೀತಾ ಆಗಿತ್ತು.

ಒಮ್ಮೆ ಆಸ್ಪತ್ರೆಯಲ್ಲಿ ಮಡದಿಯ ಹೆರಿಗೆ ಸಮಾಚಾರಕ್ಕಾಗಿ ಕಾತುರರಾಗಿ ಮಂಜು ಪಾಲ್ ಕಾಯುತ್ತಾ ಕುಳಿತಿದ್ದಾಗ ಅರಬ್ ನರ್ಸು ಹೊರಬಂದು "ಮಾಂಗೋ

ಬಾಲ್‌ಗೆ ಗಂಡು ಮಗು ಆಯಿತು" ಎಂದು ಅನೌನ್ಸಿದಳಂತೆ! ಆ ಪತಿರಾಯನಿಗಂತೂ ಅರೆಕ್ಷಣ ಗಾಬರಿಯಿಂದ ಸ್ವತಃ ತಾವೇ ಮಂಗ ಆಗುವ ಪರಿಸ್ಥಿತಿ !

ಮತ್ತೊಂದು ಸಂದರ್ಭ. ವಿಮಾನ ಹೊರಡುವ ಸಮಯವಾದರೂ ಒಬ್ಬ ಪ್ರಯಾಣಿಕರು ಬಂದಿರಲಿಲ್ಲ. "ಅನದರ್ ಮ್ಯಾನ್ ಸೂಬರ್ ಮ್ಯಾನ್ ಅವರು 24 ನೇ ಗೇಟಿನ ಬಳಿ ಶೀಘ್ರದಲ್ಲಿ ಹಾಜರಾಗಲು ವಿನಂತಿ " ಎಂಬ ಘೋಷಣೆ ಸ್ಪೀಕರಿನಲ್ಲಿ ಕೇಳಿ ಬಂದಿತು . ತಡವಾಯಿತೆಂದು ಲಗುಬಗನೆ ಹೆಜ್ಜೆ ಹಾಕುತ್ತಿದ್ದ ಅನಂತರಾಮನ್ ಸುಬ್ಬರಾಮನ್ ಅವರಿಗೆ ಈ ಸಂದೇಶ ತಮಗೇ ಎಂದು ತಿಳಿದಾಗ ತಮ್ಮ ಹೆಸರಿನ ಹೊಸ ಅವತಾರಕಂಡು ನಗು ಉಕ್ಕಿ ಬಂದರೂ ತಡಮಾಡದೆ ಸೂಪರ್ ಮ್ಯಾನ್‌ನಂತೆ ಸೂಪರ್‌ಸ್ಪೀಡಿನಲ್ಲಿ ಗೇಟ್ 24 ತಲುಪಿ ನಿಟ್ಟುಸಿರು ಬಿಟ್ಟಿದ್ದರಂತೆ !. ■

## ಕೀಚಕ ವಧಾ ವಿಧಾನ

'ಭೀಮನು ಕೀಚಕನನ್ನು ಹೇಗೆ ಕೊಂದ' ಮೂರು ಪುಟಗಳಿಗೆ ಕಡಿಮೆ ಇಲ್ಲದಂತೆ ಒಂದು ಪ್ರಬಂಧ ಬರೆಯಿರಿ ಎಂಬ ಪ್ರಶ್ನೆಗೆ ವಿದ್ಯಾರ್ಥಿಯೊಬ್ಬ ಭೀಮನು ಕೀಚಕನನ್ನು ಗುದ್ದಿ ಗುದ್ದಿ ಎಂದು ಮೂರು ಪುಟಗಳ ತುಂಬಾ ಬರೆದು ಕಡೆಯಲ್ಲಿ ಕೊಂದ ಎಂದು ಬರೆದ. ಇದು ಬಹಳಷ್ಟು ಜನಗಳಿಗೆ ಗೊತ್ತು. ಆನಂತರ ?

ಅದನ್ನು ಮೌಲ್ಯಮಾಪನ ಮಾಡುತ್ತಿದ್ದ ಆಧ್ಯಾಪಕರಿಗೆ ಅದೇ ಕಡೇ ಪೇಪರ್. ಇನ್ನೂ ಸಮಯವಿದ್ದುದರಿಂದ ಆ ಗುದ್ದಿಗಳನ್ನು ಎಣಿಸುತ್ತಾ ಹೋದರು. ಸರಿಯಾಗಿ ಸಾವಿರದ ಎಂಟು ನೂರು. ಅರೆರೆ ಹದಿನೆಂಟು ಅಕ್ಷೌಹಿಣಿ ಸೈನ್ಯ, ಹದಿನೆಂಟು ದಿನದ ಯುದ್ಧ, ಇದು ನೋಡಿದರೆ ಹದಿನೆಂಟು ನೂರು. ಇದರಲ್ಲೇನೊ ಅರ್ಥವಿರಬಹುದು, ಎಷ್ಟೋ ಜನ ರಾಮಾಯಣ ಮಹಾಭಾರತಗಳನ್ನು ಬರೆದಿದ್ದಾರೆ. ಅದರಲ್ಲಿ ಯಾವುದರಲ್ಲಾದರೂ ಈ ಹುಡುಗನಿಗೆ ಈ ಹದಿನೆಂಟು ನೂರು ಗುದ್ದುಗಳ ಬಗ್ಗೆ ತಿಳಿದಿತ್ತೆ, ಹಾಗೇನಾದರೂ ಇದ್ದರೆ ತಾನು ಅಂಕಗಳನ್ನು ಕೊಡದಿದ್ದರೆ ತಪ್ಪಾಗುತ್ತದೆ ಎನಿಸಿ ಹುಡುಗನಿಗೆ ಪೂರ್ತಿ ಅಂಕಗಳನ್ನು ಕೊಟ್ಟರು.

ಅಷ್ಟಕ್ಕೇ ಮುಗಿಯಲಿಲ್ಲ ಕತೆ. ರಾತ್ರಿ ಮಲಗಿದಾಗಲೂ ಅಧ್ಯಾಪಕರಿಗೆ ಅದೇ ಗುದ್ದುಗಳು ಕನಸಲ್ಲಿ ಬಂದು ಗುದ್ದು ಕೊಡ ತೊಡಗಿತು. ಏನೋ ಹೊಳೆದಂತಾಗಿ ಎದ್ದು ಪುಸ್ತಕ ಹಿಡಿದು ಕುಳಿತರು. ಕೀಚಕನ ಹದಿನೆಂಟು ಅಂಗಗಳ ಪಟ್ಟಿ ಮಾಡಿದರು. 1) ನೆತ್ತಿ 2)ಹಣೆ 3)ಕಣ್ಣು 4)ಮೂಗು 5)ಬಾಯಿ 6)ಕಿವಿ 7)ಕುತ್ತಿಗೆ 8)ಎದೆ 9)ಭುಜ 10)ಮೊಣಕೈ 11) ಮುಂಗೈ 12)ಹೊಟ್ಟೆ 13)ಸೊಂಟ 14) ಪೃಷ್ಟ 15)ತೊಡೆ 16)ಮೊಣಕಾಲು 17)ಮೀನಖಂಡ 18)ಬೆನ್ನು ಈ ಹದಿನೆಂಟು ಜಾಗಗಳಿಗೆ ಒಂದೊಂದಕ್ಕೆ ನೂರು ನೂರು ಗುದ್ದುಗಳು. ಒಂದೊಂದು ಗುದ್ದಿನ ವಿವರಣೆ ಒಂದೊಂದು ಪುಟ. ಒಟ್ಟು ಸಾವಿರದೆಂಟು ಪುಟಗಳ " ಕೀಚಕನ ವಧಾ ವಿಧಾನ" ಎಂಬ ಗ್ರಂಥದ ಸೃಷ್ಟಿಯಾಗೇ ಹೋಯ್ತು. ಅಧ್ಯಾಪಕರಿಗೆ ಅದಕ್ಕೆ ಡಾಕ್ಟರೇಟ್ ಸಿಕ್ಕಿದ್ದರ ಜೊತೆಗೆ ಮಹಾ ಗ್ರಂಥಕ್ಕೆ ನಾನಾ ಬಹುಮಾನಗಳು ಸಿಕ್ಕಿತು. ಎಲ್ಲವನ್ನು ಪಡೆದ ಅಧ್ಯಾಪಕರು ಮನದಲ್ಲೆ ಆ ಹುಡುಗನಿಗೆ ಧನ್ಯವಾದ ಹೇಳಿದರು.

**ಕೆ.ಆರ್.ಮಧುಸೂದನ್.**

# ಕಾವೇರಿಗೆ ಫೇಸ್‌ಲಿಫ್ಟ್

● ಇ.ಆರ್. ರಾಮಚಂದ್ರನ್

ಮುಂಚೆ ಸಂಜೆಯಾದರೆ ದೀಪಕ್ಕೆ ಬೇಕಾದ ಹತ್ತಿ ಹೊಸೆಯುತ್ತಾ ಅಜ್ಜಿ 'ಕೃಷ್ಣಾ ನೀ ಬೇಗನೆ ಬಾರೋ' ಅಂತ ಹಾಡುತ್ತಾ ಕೂತಿರುವರು. ಈಗೀಗ ಕೈಲಿ ಸ್ಮಾರ್ಟ್ ಫೋನ್ ಹಿಡಿದು ಅವರ ವಾಟ್ಸಪ್ ಗ್ರೂಪಿಗೆ ಯಾವುದಾದರೂ ಮೆನುವಿನ ಹೊಸ ರಿಸಿಪಿನೋ ಅಥವ ಕೈ /ಕಾಲಿನ ಕೀಲಿನಲ್ಲಿ ನೋವಾದ್ರೆ ರಾಮ್ದೇವ್ರ ಯಾವ ಆಸನ ಸರಿಯಾಗಿರುತ್ತೆ ಅಂತ ಕಳಿಸುತ್ತಾ ಕೂತಿರ್ತಾರೆ.

ಇವತ್ತು ಯಾಕೋ ಸುಮ್ಮನೆ ಕೂತಿದ್ರು. ಪಕ್ಕದಲ್ಲೇ ಆಂದೋಲನ ಪತ್ರಿಕೆ ಬಿದ್ದಿತ್ತು.

'ಅಜ್ಜಿ, ಯಾಕೆ ಮೂಡ್ ಆಫ್ ಆಗಿರೋವ್ರ ಹಾಗೆ ಕೂತಿದ್ದೀಯಾ? ನೆಟ್ವರ್ಕ್ ಸಿಗ್ಲಿಲ್ವಾ?'

'ಇಲ್ವೋ, ಅದ್ಯಾವುದೂ ಆಲ್ಲ. ಕೆ ಆರ್ ಎಸ್ ಡ್ಯಾಮ್ ಹತ್ರ ನೂರೈವತ್ತು ಅಡಿ ಇರೋ ಕಾವೇರಿ ಸ್ಟಾಚ್ಯೂ ಕಟ್ತಾರಂತಲ್ಲೊ?'

'ಸ್ಟಾಚ್ಯೂ ಒಂದೇ ಅಲ್ಲ.. ಅಲ್ಲಿ ಡಿಸ್ನಿ ಲ್ಯಾಂಡ್ ಕೂಡ ಮಾಡ್ತಾರಂತೆ ಅಜ್ಜಿ. ಅದಕ್ಕೆ 1200–1500 ಕೋಟಿ ದುಡ್ಡು ಮತ್ತು ಜಾಗ ರೆಡಿ ಮಾಡ್ಕೊಳ್ತಿದಾರೆ'.

'ಡಿಸ್ನಿ ಲ್ಯಾಂಡ್ ಅಂದ್ರೆ ಅಮೆರಿಕಾದಲ್ಲಿ ಇದೆಯಲ್ಲಾ ಅದೇನಾ?'

'ಅದೇ! ನೀನು ಸೂರಿ ಅಣ್ಣನ ಮನೆಗೆ ಹೋದಾಗ ಅಲ್ಲಿ ದಿನವೆಲ್ಲಾ ಓಡಾಡಿ ಸುಸ್ತಾದೆ ಅಂತ ಬರೆದಿದ್ದೆಯೆಲ್ಲಾ.. ಅದೇ.'

'ಅದನ್ನ ಕನ್ನಂಬಾಡಿ ಅಣೆಕಟ್ಟಿನ ಹತ್ರ ಯಾಕೆ ಕಟ್ತಿದಾರೋ?'

'ಅದು ಒಂದೇ ಅಲ್ಲ ಅಜ್ಜಿ! ಅಲ್ಲಿ ಮೇಡಮ್ ಟುಸ್ಸಾರ್ಡ್ಸ್‌ನ ಮೊಂಬತ್ತಿಲಿ ಮಾಡಿರೋ ಸ್ಟಾಚ್ಯುಗಳು, ಅದರ ಜೊತೆಗೆ ಪೆಂಗ್ವಿನ್ ಪಾರ್ಕ್, ಅರೋಮ ಥೆರಪಿ ಮತ್ತು ರಸ್ತೆ ಪೂರ್ತಿ ಕರ್ನಾಟಕದಲ್ಲಿರೋ ಬೇಲೂರು, ಹಳೇಬೀಡು, ಹಂಪಿಯಲ್ಲಿರುವ ದೇವಸ್ಥಾನದ ಮೂರ್ತಿಗಳ ಪ್ರತಿಮೆಗಳನ್ನ ಇಲ್ಲಿ ಮಾಡ್ತಾರೆ'.

'ಅಲ್ವೋ! ಆ ಜಾಗದ ಹತ್ತಿರ ಒಂದೆರೆಡು ತಿಂಗಳ ಹಿಂದೆ ಭೂಕಂಪ ಆಗಿತ್ತಲ್ವಾ? ಮಂಡ್ಯದ ಬೇಬಿ ಮಠದಲ್ಲಿರೋ ಬೆಟ್ಟನ ಕೊರೆದಾಗ, ಭೂಮಿ ಅದರಿತು ಅಂತ ಜನಗಳು ಹೊರಗಡೆ ಓಡಿಬಂದ್ರು. ಆ ಜಾಗದಲ್ಲೇ ಇಷ್ಟು ದೊಡ್ಡ ಸ್ಟಾಚ್ಯು ಮಾಡ್ತಾರಾ? ಭೂಮಿ ಕೆಳಗಡೆ ಎಷ್ಟು ಕೊರೀಬೇಕೊ ಏನು ಕಥೆಯೋ? ಅದಿರ್ಲಿ... ಕಾವೇರಿ ನಿರ್ಮಾಣದ ಕಥೆ ಎಷ್ಟು ಜನಕ್ಕೆ ಗೊತ್ತಿದೆ? ಹೊರಗಡೆಯಿಂದ ಬರುವ ಪ್ರವಾಸಿಗರು ಬಿಡು, ನಮ್ಮ ಇಂಡಿಯಾ ದೇಶದಲ್ಲೇ ಗೊತ್ತಿರಲ್ಲ. ಕರ್ನಾಟಕದಲ್ಲಿ ಕೂಡ ಬಹಳ ಜನಕ್ಕೆ ಗೊತ್ತಿರಲ್ಲ.. ಬಿಡು'.

'ಅದು ಏನಜ್ಜಿ?'

'ಅಣೆಕಟ್ಟು ಕಟ್ಟುವಾಗ ದುಡ್ಡು ಸಾಲದೆ ಬಂತು. ಅರ್ಧಕ್ಕೆ ಬಿಡಬೇಕೇನೊ ಅನ್ನುವ ಸ್ಥಿತಿಗೆ ಬಂದಿತ್ತು. ಆವಾಗ ಮೈಸೂರಿನ ರಾಣಿ ಸನ್ನಿಧಾನ ಕೆಂಪನಂಜಮಣ್ಣಿಯವರು ಮತ್ತು ಎಲ್ಲಾ ರಾಣಿಯವರು ಸೇರಿ ತಮ್ಮ ಆಭರಣಗಳನ್ನು ಬಿಚ್ಚಿ, ಇದನ್ನು ಮಾರಿ ಅಣೆಕಟ್ಟು ಕಟ್ಟಿ, ನಮ್ಮ ಆಭರಣಕ್ಕಿಂತ ಜನಗಳಿಗೆ ನೀರು ಮುಖ್ಯ ಎಂದು ಅವರ

ಮಗ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಮಹಾರಾಜರಿಗೆ ಕೊಟ್ರು. ಆ ಹಣದಿಂದಲೇ ಕನ್ನಂಬಾಡಿ ಕಟ್ಟಿದರು ವಿಶ್ವೇಶ್ವರಯ್ಯನವರು.'

'ಹೌದಾ ಅಜ್ಜಿ! ಎಂತಹ ತ್ಯಾಗ!'

'ಇದನ್ನು ಸುವರ್ಣಾಕ್ಷರದಲ್ಲಿ ಅಣೆಕಟ್ಟಿನ ಹತ್ತಿರ ಬರಸ್ಬೇಕು. ಪ್ರಪಂಚದಲ್ಲಿ ಯಾವ ದೇಶದ ರಾಜಮನೆತನದವರಾಗಲಿ ತಮ್ಮ ಜನಗಳಿಗೋಸ್ಕರ ಇಂತಹ ಕೆಲಸ ಮಾಡಿಲ್ಲ.. ಇದು ನಮ್ಮ ಮೈಸೂರಿನ ರಾಣಿವಾಸದವರು ಮಾಡಿದರು ಎಂದು ಸಾರ ಬೇಕು. ಇಲ್ಲಿಗೆ ಬರುವ ಅಂತರ ರಾಷ್ಟ್ರೀಯ ಜನಗಳು ನಿಜವಾಗಿಯೂ ಮೆಚ್ಚುವ ಕೆಲಸ ಅದು ನೋಡು'.

'ಹೌದಜ್ಜಿ! ಖಂಡಿತ ಇಂತಹ ತ್ಯಾಗವನ್ನು ಎಲ್ಲಾ ಕಡೆ ಸಾರಬೇಕು. ಆಗಲೇ ಇನ್ನೂ ಹೆಚ್ಚು ಜನ ಇಲ್ಲಿಗೆ ಬರ್ತಾರೆ'.

'ನಮ್ಮ ಕಾವೇರಿ ಅಂತರ ರಾಷ್ಟ್ರೀಯ ನದಿಯೆಂದು ಹೆಸರು ಈವಾಗಲೇ ಇದೆ. ಹೀಗಿರುವಾಗ ಡಿಸ್ನಿ ಲ್ಯಾಂಡ್ ಇಲ್ಲಿ ಮಾಡಿ ನಮ್ಮ ಸಂಸ್ಕೃತಿಯ ಕಲಬೆರೆಕೆ ಯಾಕೆ ಮಾಡಬೇಕು? ಅದನ್ನು ಇನ್ನು ಉತ್ತರ ಕರ್ನಾಟಕದಲ್ಲಿ ಮಾಡಲಿ. ಪಾಪ ಅವರನ್ನು ಕೇಳುವವರೇ ಇಲ್ಲ ಅನ್ನುವ ಮಟ್ಟಕ್ಕೆ ಆಗಿದೆ ಅವರ ಪರಿಸ್ಥಿತಿ. ನಮ್ಮ ಮೇಲೆ ಸರ್ಕಾರಕ್ಕೆ ಮಲತಾಯಿ ಧೋರಣೆ ಇದೆ ಅಂತ ಆಗಾಗ್ಗೆ ಹೇಳಿಕೊಳ್ತಾರೆ. ನೀನು ಹೇಳಿದ್ದ ಪೆಂಗ್ವಿನ್ ಪಾರ್ಕು, ಅರೋಮ ಥೆರಪಿ ಪಾರ್ಕು ಇತ್ಯಾದಿ ಅಲ್ಲಿ ಮಾಡ್ಲಿ. ಅಲ್ಲಿಗೂ ಪ್ರವಾಸಿಗರು ಹೋಗ್ತಾರೆ. ಅಲ್ಲೂ ವರಮಾನ ಹೆಚ್ಚುತ್ತೆ.'

'ಇಲ್ಲೇ ಅಂತರ ರಾಷ್ಟ್ರದ ಮಟ್ಟದಲ್ಲಿ ಏನಾದ್ರೂ ಮಾಡಬೇಕೆಂದು ನಮ್ಮ ಪುಢಾರಿಗಳು ಹಠ ಹಿಡಿದ ಹಾಗೆ ಇದೆ'.

'ಮಡಕೇರಿಗೆ ಆದ ನಷ್ಟ ತುಂಬುವುದಕ್ಕೆ ಒಂದೆರೆಡು ಜೀವಮಾನ ಸಾಲದು. ಅದು ಕಾವೇರಿ ಹುಟ್ಟುವ ಜಾಗ. ನನ್ನ ಕೇಳಿದರೆ ಇರುವ ದುಡ್ಡು ಮುಂಚೆ ಅದಕ್ಕೆ ಹಾಕಬೇಕು ಕಣೋ. ಬಹಳ ನೊಂದ ಜೀವಗಳು ಅವರದು. ಮನೆಯವರನ್ನು ಕಳೆದುಕೊಂಡು, ಅದರ ಜೊತೆ ಕಾಫಿ ತೋಟ, ಮನೆ ಎಲ್ಲಾ ಕಳೆದುಕೊಂಡ ಜನ ಮಡಕೇರಿಯವರು. ಅಂತಹ ಪ್ರಕೃತಿಯ ಪ್ರಕೋಪ ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ ಯಾರೂ ನೋಡದಿದ್ದದ್ದು. ಯಾರೂ ಈ ತರಹ ಅನುಭವಿಸಿಲ್ಲ'.

'ನಿಜ'.

'ಇಂತಹ ಮೈ ಜುಮ್ಮೆನ್ನುವ ದುರಂತ ಈಗಲೂ ಕಣ್ಣಿಗೆ ಕಾಣಿಸದಿದ್ದರೆ, ಅಷ್ಟರ ಮೇಲೆ ಹಣ ಕೊಳೆತುಬಿದ್ದಿದ್ದರೆ, ಇನ್ನೂ ಮೈಸೂರು ಅಂತರ ರಾಷ್ಟ್ರಮಟ್ಟದಲ್ಲಿ ಸೂಜಿಕಲ್ಲಾಗಬೇಕೇ ಬೇಕು ಅನ್ನುವ ಹಾಗಿದ್ದರೆ.. ಆ ತರಹ ಆಗಬೇಕೆಂದರೆ...'

'ರಾಗ ಎಳಿತಿದೆಯೆಲ್ಲಾ ಅಜ್ಜಿ.. ಮುಂದೆ ಹೇಳು...'

'ಇಲ್ಲಿ ವಿಂಬಲ್ಡನ್, ಟೆನಿಸ್, ಹಾಲಿವುಡ್, ಆಸ್ಕರ್, ಫಾರ್ಮುಲ 1 ರೇಸು, ಮೇಡಮ್ ಟುಸ್ಸಾಡ್ನ ಮೊಂಬತ್ತಿ ಪ್ರತಿಮೆ ಇಡುವ ಮ್ಯೂಸಿಯಮ್ ಅವುಗಳನೆಲ್ಲಾ ಇಲ್ಲೇ ತರಿಸ್ಲಿ, ಇಲ್ಲೇ ಮಾಡಿಸ್ಲಿ. ವನ್ ಡೇ, ಟಿ 20, ವರ್ಲ್ಡ್ ಕಪ್ ಕೂಡ ಕಾವೇರಿ ಪಕ್ಕದಲ್ಲೇ ಮಾಡ್ಸಿದ್ರೆ ಇನ್ನೂ ಹೆಸರು ಬರುತ್ತೆ. ದುಡ್ಡೂ ಎರಡು ಕೈಲಿ ಬಾಚ್ಕೊಳ್ಳೋ ಅಷ್ಟು ಬಂದು ಬೀಳುತ್ತೆ'.

'ಅಜ್ಜಿ!'

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ನಾವು ದೇವರನ್ನು ನಂಬುವುದು ಮುಖ್ಯವಲ್ಲ. ದೇವರು ನಮ್ಮನ್ನು ನಂಬುವಂತೆ ಬದುಕುವುದು ಮುಖ್ಯ. ದೇವರು ಇರುವುದೇ ಆದಲ್ಲಿ, ಈ ಭೂಮಿ ಆತನ ಸೃಷ್ಟಿಯೇ ಆಗಿದ್ದಲ್ಲಿ ಈ ಭೂಮಿಗೆ ನಮ್ಮನ್ನು ಅವನು ತಂದು ಬಿಡುವ ಮೊದಲು ಅವನಿಗೆ ನಮ್ಮ ಮೇಲೆ ನಂಬಿಕೆ ಇರಬೇಕಾಗುತ್ತದೆ.
- ✓ ನಾಲಿಗೆಯೇ ಮನಸ್ಸಿನ ಲೇಖನಿ.
- ✓ ದಿ ಓನ್ಲಿ ಪ್ರಷರ್ ಟು ಪ್ರೊಡ್ಯೂಸ್ ಗುಡ್ ವರ್ಕ್ ಈಸ್ ಫ್ರಂ ಯುವರ್ ಓನ್ ಮೈಂಡ್.
- ✓ ನಿನ್ನ ಬದುಕನ್ನು ನೀನು ಮಾತ್ರ ಬದಲಾಯಿಸಬಲ್ಲೆ. ಇನ್ನೊಬ್ಬರಿಂದ ಅದು ಸಾಧ್ಯವಿಲ್ಲ.
- ✓ ಕೊಳಲು ಚೌರಾಸಿಯ ಅವರನ್ನು ಅರ್ಥಮಾಡಿಕೊಳ್ಳುವುದೆ?
- ✓ ಟ್ರಬಲ್ಸ್ ಆಫ್ ದಿ ಪಾಸ್ಟ್ ಅಂಡ್ ಆ್ಯಂಕ್ಸೈಟೀಸ್ ಆಫ್ ದಿ ಫ್ಯೂಚರ್ ಆರ್ ದಿ ಥೀವ್ಸ್ ಆಫ್ ದಿ ಪ್ರಸೆಂಟ್ ಡೆ ಹ್ಯಾಪಿನೆಸ್.
- ✓ ಕೊನೆಯ ಘಳಿಗೆಯಲ್ಲಿ ನಾನು ಎಂತಹ ಅಪರಿಚಿತ ಲೋಕಕ್ಕೆ ಪಯಣಿಸುತ್ತಿದ್ದೇನೆ ಎಂಬ ಭಯಕ್ಕಿಂತ ನಾನು ಹಿಂದೆ ಬಿಟ್ಟು ಹೋಗುವವರನ್ನು ಕುರಿತು ಉಂಟಾಗುವ ವೇದನೆ ಆತಂಕಗಳೇ ಹೆಚ್ಚು ತೀವ್ರವಾಗಿರುತ್ತಲ್ಲವೆ?
- ✓ ಈ ಎರಡು ದಿನಗಳ ಬಗ್ಗೆ ನಾವು ಚಿಂತಿಸಬೇಕಾಗಿಯೇ ಇಲ್ಲ – ನಿನ್ನೆ ಮತ್ತು ನಾಳೆ.
- ✓ ವಿ ಹ್ಯಾವ್ ಟು ಹ್ಯಾವ್ ದಿ ವಿಲ್ ಟು ಬಿ ಸರ್‌ಪ್ರೈಸಡ್ ಬೈ ಲೈಫ್.
- ✓ ಯುದ್ಧ ಅಂದರೆ ನಾವೆಲ್ಲ ಉತ್ಪ್ರೇಕ್ಷೆ ಮಾಡೋ ದೇಶಭಕ್ತಿ ಅಲ್ಲ. ಕಾದಾಡುತ್ತಾ ವೀರ ಮರಣ ಹೊಂದೋದು ಅಲ್ಲ.
- ✓ ನಾವೇನು ಬುದ್ಧರಲ್ಲ. ಆದರೆ ಬುದ್ಧತನ ನಮ್ಮರಲ್ಲಿ ಸ್ವಲ್ಪ ಇರಬೇಕು. ನಾವ್ಯಾರು ಅಶೋಕರಲ್ಲ. ಆದರೆ ಅಶೋಕತನ ಇರಬೇಕು. ಅದೇ ನಮ್ಮನ್ನು ಮನುಷ್ಯರನ್ನಾಗಿ ಮಾಡುವುದು.
- ✓ ಮಕ್ಕಳೇ ತಂದೆ ತಾಯಿಯ ಪ್ರೊಗ್ರೆಸ್ ಕಾರ್ಡ್.
- ✓ ಕೆಲಸ ಮಾಡದ ಮೈಗಳ್ಳರಿಗೆ ಹತ್ತಾರು ಆಳುಗಳಿರುತ್ತಾರೆ.
- ✓ ಎ ಬ್ಯಾಲೆನ್ಸಡ್ ಮೈಂಡ್ ಈಸ್ ನೆಸಸರಿ ಟು ಬ್ಯಾಲೆನ್ಸ್ ದಿ ಅನ್‌ಬ್ಯಾಲೆನ್ಸಡ್ ಮೈಂಡ್ ಆಫ್ ಅದರ್ಸ್.
- ✓ ಪಶುಪಕ್ಷಿಗಳಿಗೆ ಮನುಷ್ಯನಿಗಿರುವ ಬುದ್ಧಿಶಕ್ತಿ ಇಲ್ಲ. ಹೀಗಾಗಿ ಅವು ಸಹಜವಾಗಿ ಬದುಕುತ್ತವೆ.

# ಶೈಲೂ ಗಂಡ ಐಲೂ

● ನಳಿನಿ ಸೂರ್ಯಪ್ರಕಾಶ್

ಗಣ್ಯವ್ಯಕ್ತಿ ಪ್ರೊ. ವೆಂಕೋಬರಾಯರು ಏನೂ ತೋಚದೆ ಮಂಕೋಬರಾಯರಂತೆ ಗಲ್ಲಕ್ಕೆ ಕೈಯೂರಿ ಕೂತಿದ್ರು ಬೆಳಿಗ್ಗೆ ಸುಮಾರು ಹನ್ನೊಂದರಿಂದ ಹನ್ನೊಂದೂವರೆ ಒಳಗೆ ನಡೆದಿರಬಹುದಾಗಿದ್ದ ಆ ಘಟನೆಯಿಂದ ರಾಯರು ಗಾಬರಿಯಾಗಿದ್ರು. ಹಾಗಾಗಿ ಕೆಲಸದ ರತ್ನಳೇ ಪರಿಸ್ಥಿತಿಯ ಚಾರ್ಜ್ ತೆಗೆದುಕೊಂಡಿದ್ಲು. ರಾಯರ ಅಣ್ಣನ ಮನೆಯ ಡ್ರೈವರ್ ರಮೇಶನಿಗೆ ಫೋನಾಯಿಸಿ ವಿಷಯ ತಿಳಿಸಿಯಾಗಿತ್ತು. ಇಂಥಾ ಸಮಯದಲ್ಲಿ ಪಕ್ಕದ್ಮನೆಯ ಕಂಪ್ಯೂಟರ್ ಜಾಣ, ಶ್ರೀವತ್ಸನ ಸಹಾಯವಂತೂ ಬೇಕೇ ಬೇಕು. ಅವನು ಮನೆಯಲ್ಲೇ ಇರೋದು ತಿಳಿದಿದ್ದ ರತ್ನ, ಓಣಿಯಿಂದ್ಲೇ ಶ್ರೀವತ್ಸನನ್ನ ಕೂಗಿ ಕರೆದಳು... ''ಶ್ರೀವಸ್ತಾ....! ಶ್ರೀವಸ್ತಾ...!!''

ರಾಯರ ಮನೆಗೆ ರತ್ನಾ ನಂಬಿಕಸ್ಥ ಕೆಲಸದಾಕೆಗಿಂತ ತೀರಾ ಹೆಚ್ಚು, ಹತ್ತಿರದ ಸಂಬಂಧಿಗಿಂತ ಸ್ವಲ್ಪವೇ ಕಮ್ಮಿ. ಒಟ್ನಲ್ಲಿ 'ಶಿ ಈಸ್ ಮೇಡ್ ಟು ಬಿ ಹಿಸ್ ಮೈಡ್ - ಕಂಪಾನಿಯನ್'. ರಾಯರ ಪತ್ನಿ ಶೈಲಜಾ ಹೋದ ಮೇಲಂತೂ ಅಡುಗೆ ಕೆಲಸವೂ ರತ್ನಳದ್ದೇ. ರಾಯರು ಮಂಕಾಗಿ ಮೇಜಿನ ಮೇಲಿನ ತಮ್ಮ ಶೈಲು ಫೋಟೋ ದಿಟ್ಟಿಸ್ತಾ ಕೂತಿದ್ರು. ಶೈಲಳ ನಗು, ಇವರನ್ನು ''ಶೈಲು ಗಂಡ ಐಲು...'' ಅಂತ ಛೇಡಿಸಿತು. ತಮ್ಮಿಬ್ಬರ ನಲ್ವತ್ತೈದು ವರ್ಷಗಳ ಸುಖೀ ದಾಂಪತ್ಯದಲ್ಲಿ ಅವಕಾಶ ಸಿಕ್ಕಾಗ್ಲೆಲ್ಲಾ ಶೈಲು ಗಂಡನನ್ನ ಛೇಡಿಸ್ತಿದ್ದದ್ದು ಹೀಗೇ. ಈಗ ರಾಯರದ್ದೇನಿದ್ರೂ ಫೋಟೋ ದಾಂಪತ್ಯ!

ಎರಡು ತಿಂಗಳಿಂದೀಚೆಗೆ ನಡೆದ ಘಟನೆಗಳ್ನ ಮೆಲುಕು ಹಾಕ್ತಾ ಹಾಗೇ ಕೂತಿದ್ರು. ಶೈಲು ಹೇಳ್ತಿದ್ದಿದ್ದು ನಿಜ. ಪಾರ್ಕಿನಲ್ಲಿ ಬೆಳಗಿನ ವಾಕಿಂಗ್ ಮಾಡುವಾಗ ಅವರಿವರ ಜೊತೆ ಅನಗತ್ಯ (ಮಾತಿನ) ವಾಕ್ ಸಂಬಂಧ ಇಟ್ಕೋಬಾರ್ದು ಅಂತ. ಆದರೆ ತಾವಂತೂ ಬೇಸ್ತು ಬಿದ್ದಾಗಿತ್ತು.

ಮಿಸ್ ಮಾಲಾ ಗ್ರೀನ್ ಟೀ, ಭಗವದ್ಗೀತೆ, ಪರಿಸರ ಮಾಲಿನ್ಯ, ಚಾಕಲೇಟು, ವಿದೇಶ ವಿನಿಮಯ, ಆರ್ಗ್ಯಾನಿಕ್ ಪುಡ್ಸು, ದೀಪಿಕಾ ಪಡುಕೋಣೆ ಮದುವೆ ಅಂತೆಲ್ಲಾ ಸೀಮೆಮೇಲಿರೋ ಮಾತೆಲ್ಲಾ ಆಡಿ, ಕೊನೆಗೆ ರಾಯರ ಮೇಲೆ ಬ್ರಹ್ಮಾಸ್ತ್ರದ ಪ್ರಯೋಗ ಮಾಡಿದ್ಲು. ''ಸರ್... ನೀವು ಮಂಕಿ ಕ್ಯಾಪಲ್ಲೂ ತುಂಬಾ ಸ್ಮಾರ್ಟ್ ಆಗಿ ಕಾಣ್ತೀರ...''

ಇದಾಗಿ ಕೆಲವೇ ದಿನಗಳಲ್ಲಿ ಮಾಲಾ ರಾಯರ ಮನೆಗೆ ಬಂದೂ ಹೋಗೀ ಮಾಡೋದೂ, ಅವರಿಗಿಷ್ಟವಾದ ಕಿತ್ತಳೆಹಣ್ಣು ಕೊಡೋದೂ ನಡೀತು. ಕಡೇಗೊಂದಿನ ರಾಯರ ಮನೆಯಿಂದ ಕಳ್ಳ ಕೃಷ್ಣನ ಬೆಳ್ಳಿ ವಿಗ್ರಹ ಕದ್ದಳು, ರಾಯರು ಹೆಚ್ಚು ಉಪಯೋಗಿಸದ ಲ್ಯಾಪ್‌ಟಾಪನ್ನ ಲಪಟಾಯಿಸಿದಳು. ಇವೆಲ್ಲಾ ಕಾಣೆಯಾಗಿದ್ದು ಮೊದಲು ಕಂಡಿದ್ದು ರತ್ನಳಿಗೆ. ರಾಯರು ಹೌಹಾರಿದರು, ಹೋ... ಹೋ... ಅಂತ ಹಾರಾಡಿದರು.... ಕೊನೆಗೆ ತಣ್ಣಗಾದ್ರು. ''ಈ ಮಹಾನಗರದ ಹಲವು ಬಹುಮಹಡಿ ಕಟ್ಟಡಗಳ, ಟವರುಗಳ ಇಂಜಿನಿಯರ್, ಪ್ರತಿಷ್ಠಿತ ಕಾಲೇಜೊಂದರ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾದ ಪ್ರೊಫೆಸರ್ ವೆಂಕೋಬರಾವ್... ಇಂದು ಹೀಗೆ....'' ಅಂದ್ಕೊಳ್ತಾ, ಶೈಲು ಕಡೆ ನೋಡಿ ದೀರ್ಘವಾದ ನಿಟ್ಟುಸಿರು ಬಿಟ್ರು.

ಅಂತೂ ರಾಯರಿಗೆ ಕೆಟ್ಮೇಲೆ ಬುದ್ಧಿ ಬಂತು. ಮನೆಯ ಸುತ್ತ ಮೂರು ಕಡೆ ಸಿಸಿ ಕ್ಯಾಮರಾ ಹಾಕಿಸ್ಕೊಂಡ್ರು. ದೊಡ್ಡ ಮನೆಯ ಮೇಲೆ ಸದಾ ಈ 'ಮುಕ್ಕಣ್ಣ'ನ ಕಣ್ಣಾಗ್ಗವಲಾದ್ರೆ, 'ಮುಕ್ಕಣ್ಣ'ನ ಮೇಲೆ ರತ್ನಳ ಕಣ್ಣಾಗ್ಗವಲು! ಹಾಗಾಗಿ ಕ್ಯಾಮರಾ ಫುಟೇಜು ನೋಡದೆಯೇ ಘಟನೆ ನಡೆದಿರೋದು ಬೆಳಿಗ್ಗೆ ಹನ್ನೊಂದ್ರಿಂದ ಹನ್ನೊಂದೂವರೆ ಒಳಗೆ ಅಂತ ರತ್ನ ಖಚಿತವಾಗಿ ಹೇಳಿ ಬಿಟ್ಟು.

ಓಣಿಯಲ್ಲಿ ನಿಂತು ರತ್ನ ಮತ್ತೆ ಗಂಟಲು ಹರ್ಕೊಂಡ್ಳು... ''ಶ್ರೀವಸ್ತಾ....! ಶ್ರೀವಸ್ತಾ....!!''. ಶ್ರೀವತ್ಸನೆಂಬ ಚಿನಕುರುಳಿ ಕಳೆದವಾರವಷ್ಟೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಸಿ, ಈಗ ಅಯ್ಯಪ್ಪ ಸ್ವಾಮಿ ಭಂಗಿಯಲ್ಲಿ ಕೂತು ಐಪಿಎಲ್ ನೋಡ್ತಿತ್ತು... ಒಲ್ಲದ ಮನಸ್ಸಿಂದ, ''ವಸ್ತಾ... ವಸ್ತಾ... ಶ್ರೀವತ್ಸ..' ಅಂತೆದ್ದು ರಾಯರ ಮನೆಗೆ ಹೊರಟಿತು.

ಡ್ರೈವರ್ ರಮೇಶ್ ಆಗಲೇ ಪೊಲೀಸರಿಗೆ ವಿಷಯ ತಿಳಿಸಿದ್ದ. ರಾಯರ ಮನೆ ಮುಂದೆ ಪೊಲೀಸ್ ಜೀಪು ಬಂದು ನಿಂತಿತು. ಹೆಡ್‌ಕಾನ್ಸ್ಟೆಬಲ್ ಜೊತೆ ಇಬ್ರು ಪೇದೆಗಳು ಒಳ ಬಂದ್ರು, ರಮೇಶ್, ಹೂದೋಟದ ಮಾಲಿ ರಾಮಣ್ಣ ಎಲ್ರೂ ಹಾಲಿನಲ್ಲಿ ಜಮಾಯಿಸಿದ್ರು. ವಾತಾವರಣ ಬಿಗಿಯಾಯ್ತು. ಹೆಡ್.ಕಾ. ಸಿ.ಸಿ. ಫುಟೇಜು ನೋಡಲು ಕೀಬೋರ್ಡಿನ ಮುಂದೆ ತಡಕಾಡಿದ. ರಾಯರು ಸನ್ನೆ ಮಾಡ್ತಲೇ ಚಿನಕುರುಳಿ ಕೀಬೋರ್ಡಿನ ಚಾರ್ಜ್ ತೊಗೊಳ್ತು.

'ಮುಕ್ಕಣ್ಣ'ನ ಫುಟೇಜಿನ ಸುರುಳಿ ಬಿಚ್ಚಿಕ್ಕೊಳ್ತಾಹೋಯ್ತು, ರಸ್ತೆಯಲ್ಲಿ ಓಡಾಡಿದ ಕಾರುಗಳು... ಆಟೋಗಳು..., ಜಾಡಮಾಲಿ, ತರಕಾರಿಯವ ಅವರೂ.. ಇವರೂ... ಎವರೆವರೋ!, ಕಾಂಪೌಂಡು ಹಾರಿದ ಬೆಕ್ಕು, ಅತ್ತಿಂದಿತ್ತ ಓಡಾಡಿದ ಬೀದಿನಾಯಿಗಳು, ಉದುರಿದ ತರಗೆಲೆಗಳು.... ಎಲ್ಲವೂ ಸುಸ್ಪಷ್ಟ! ಎಲ್ರೂ ನೆಟ್ಟ ಕಣ್ಣು ಬಿಟ್ಟ ಬಾಯಿ ಬಿಟ್ಟು ನೋಡಿಯೇ ನೋಡಿದ್ರು. ಸರಿಯಾಗಿ ಹನ್ನೊಂದು ಗಂಟೆ ಹದಿನಾರು ನಿಮಿಷ ಮೂವತ್ತಾರು ಸೆಕೆಂಡಿಗೆ, ಬೆಕ್!!! ಮುಕ್ಕಣ್ಣನ ಒಂದು ಕಣ್ಣು ಕ್ಷಣಾರ್ಧದಲ್ಲಿ ಸಂಪೂರ್ಣ ಮುಚ್ಚಿತ್ತು. ಕಂಪ್ಲೀಟ್ ಬ್ಲ್ಯಾಕೌಟ್! ಉಬ್ಬಿದ ಬಲೂನಿಗೆ ಸೂಜಿ ಚುಚ್ಚಿದಂತಾಯ್ತು.

ಬೀದಿ ಕಾಣುವ ಹಾಗಿಟ್ಟಿದ್ದ ಕ್ಯಾಮರಾವನ್ನು ಯಾರೋ ಕಿಡಿಗೇಡಿ ಮುಚ್ಚಿ ಹೋಗಿದ್ದ, ಅದೂ ತಾರಸಿಯಲ್ಲಿ ಒಣಹಾಕಿದ್ದ ರಾಯರದ್ದೇ ನಿಕ್ಕರ್‌ನಿಂದ!! ತಮ್ಮ ಮನೆಯ ಮೇಲೆ ಸರ್ಜಿಕಲ್ ಅಟ್ಯಾಕ್ ಆದ ಹಾಗೆ ರಾಯರು ಗಾಬರಿಯಾಗಿದ್ರು. ಈಗ ನೋಡಿದ್ರೆ ಕಿಡಿಗೇಡಿ ಕ್ಯಾಮರಾ ಕಣ್ಣಿಗೆ ಒಂಚೂರೂ ಕಾಣಿಸಿಕೊಳ್ದೇ ತಾರಸಿಯಿಂದ ಕೆಲಸ ಸಾಧಿಸಿದ್ದಾನೆ. ಮುಂದೇನು ಗ್ರಹಚಾರವೋ ಅಂತ ರಾಯರಿಗೆ ಚಿಂತೆಯಾಯ್ತು.

ಹೆಡ್.ಕಾ. ರಾಮರನ್ನ ಕೇಳ್ದ, ''ತಮ್ಮ ತಾರಸಿ ಕಾಣೋ ಹಾಗೆ ಸುತ್ತಮುತ್ತ ಎಲ್ಲಾದ್ರೂ ಸಿ.ಸಿ. ಕ್ಯಾಮೆರಾ ಇದ್ಯಾ ಸಾರ್...?''

ರತ್ನ, ''ಇಲ್ಲೆಲ್ಲೂ ಇಲ್ಲಾ....'' ಅಂದಳು.

''ಕ್ಯಾಮರಾದ ಮಾನಿಟರ್ ಸ್ಕ್ರೀನು ಯಾವಾಗ್ಲೂ 'ಆನ್' ಆಗೇ ಇರ್ಲಿ, ಆಗಾಗ ನೋಡ್ತಿರಿ, ಅಷ್ಟೇ.. ಇನ್ನೇನಿಲ್ಲ...'' ಇಷ್ಟು ಹೇಳಿ, ಹೆಡ್.ಕಾ. ರಾಯರ ಕೈ ಕುಲುಕಿ, ಪೇದೆಗಳ ಜೊತೆ ಹೊರನಡೆದ. ಜೀಪು ಹತ್ತಿ ಸ್ಟಾರ್ಟ್ ಮಾಡ್ತಲೇ, ರಮೇಶನಿಗೆ ಕೂಗಿ ಹೇಳ್ದ ''ಹೋಯ್...! ರಾಯರ ನಿಕ್ಕರ್ ತೆಗ್ಯಪ್ಪಾ...!''

ಅದೇನೋ! ರಾಡಿಯಾಗಿದ್ದ ಪರಿಸ್ಥಿತಿ ಈಗ ಇದ್ದಕ್ಕಿದ್ದಂತೆ ತಿಳಿಯಾಗಿಹೋಯ್ತು, ಜೀಪು ಮರೆಯಾದಂತೆ, ರಾಯರು ''ಉಸ್ಸಪ್ಪಾ...'' ಅಂದ್ರು. ಚಿನಕುರುಳಿ ಐಪಿಎಲ್ ಮುಂದುವರಿಸಿತ್ತು.... ಎಂಥಾ ಸಮಯದಲ್ಲಿ ಆಪದ್ಬಾಂಧವನಂತೆ ಬಂದ! ರಾಯರ ಕಣ್ಣಿಗೆ, ಯಮನ್ ರಾಗದ ಕರೆಗೆ ಓಗೊಟ್ಟ ಶ್ರೀಕೃಷ್ಣನಂತೆ ಕಂಡ..... ''ಕೃಷ್ಣಾ ನೀ ಬೇಗನೆ ಬಾರೋ... ಬೇಗನೇ ಬಾರೋ... ಮುಖವನೆ ತೋರೋ..... ಹಾಕಿದ ಬರ್ಮುಡಾ.... ಕೈಯಲ್ಲಿ ಮೊಬೈಲೂ.... ಕೊರಳಲಿ ಇಳಿಬಿಟ್ಟ ಕಿವಿಯ ಇಯರ್ ಫೋನೂ....''.

ರಾಯರು ತಮ್ಮಲ್ಲೇ ನಗ್ತಾ, ಫ್ರಿಡ್ಜಿನಿಂದ ಬೊಗಸೆ ತುಂಬಾ ಚಾಕಲೇಟು ತೆಗೆದು ಚಿನಕುರುಳಿ ಕೈಗಿತ್ತರು. ಐಪಿಎಲ್ ಮುಂದುವರಿದಿತ್ತು. ಅಕ್ಕರೆ ಸುರಿಸಿಕೊಳ್ತಾ, ಕಪಾಟಿನಿಂದ ಕೆಂಪು ದಪ್ಪ ರಟ್ಟಿನ, ದಪ್ಪದಪ್ಪದ ಮೂರ್‍ನಾಲ್ಕು ಪುಸ್ತಕಗಳ್ನ ಚಿನಕುರುಳಿ ಮುಂದಿಟ್ರು.

''ಬ್ರಿಟಾನಿಕಾ ಎನ್‌ಸೈಕ್ಲೋಪಿಡಿಯಾ. ಇನ್ನೂ ಎಂಟೋ ಹತ್ತೋ ವಾಲ್ಯೂಮುಗಳಿವೆ. ರೆಫರೆನ್ಸಿಗಿಟ್ಕೋ....'' ಅಂದ್ರು.

ವಾಟ್ಸ್ಯಾಪಿನಿಂದ ಮುಖವೆತ್ತಿ, ''ವಾಟ್?!...''.

ಹರಳೆಣ್ಣೆ ಕುಡಿದ ಮುಖ ಮಾಡಿ, 'ಇಷ್ಟು ಕೆ.ಜಿ. ಬ್ರಿಟಾನಿಕಾ ಇಟ್ಕೊಂಡ್ರೆ ತಿಕ್ಲು ಅಂತಾರಷ್ಟೆ! ಬ್ರಿಟಾನಿಯಾ (ಬಿಸ್ಕತ್ತು!) ಇದ್ರೆ ಕೊಡಿ, ತಿಂತೀನಿ...' ಅಂತು....

ಚಾಕಲೇಟಿಗೆ ಥ್ಯಾಂಕ್ಸ್ ಹೇಳಿ, ಮೊಬೈಲು ತೊಗೊಂಡು, ಕಿವಿಗೆ ಇಯರ್ ಫೋನ್ ಸಿಕ್ಕಿಸಿ, ಚಿನಕುರುಳಿ ಮನೆ ಕಡೆ ನಡೀತು.

ಸಿಕ್ಕ ಅವಕಾಶ ಶೈಲು ಬಿಡ್ತಾರ್‍ಯೇ? ರಾಯರನ್ನ ಎಂದಿನಂತೆ ಛೇಡಿಸಿದರು, ''ಶೈಲು ಗಂಡ... ಐಲೂ....!!''.

■

## ಬಿರುದು

ಅವನು ಸರಿ ರಾತ್ರಿಯಲ್ಲಿ ಬರುತ್ತಿದ್ದಾಗ ನಾಯಿ ಒಂದು ಅವನನ್ನು ಕಚ್ಚಲು ಬಂದಿತು. ಅವನು ಧೈರ್ಯದಿಂದ ನಿಂತು ಅದರ ಮುಖಕ್ಕೆ ಬಲವಾಗಿ ಗುದ್ದಿದ. ಆ ಒಂದೇ ಏಟಿಗೆ ನಾಯಿ ಅಲ್ಲೇ ಸತ್ತು ಬಿತ್ತು.

ಮಾರನೆ ಬೆಳಿಗ್ಗೆ ತನ್ನ ಸ್ನೇಹಿತರ ಬಳಿ ತನ್ನ ಶೌರ್ಯದ ವಿಚಾರವಾಗಿ ಹೇಳಿಕೊಳ್ಳುತ್ತಿದ್ದ. ಅದನ್ನು ಕೇಳಿಸಿಕೊಂಡ ನಮ್ಮ ಚಿಕ್ಕ ಹೇಳಿದ "ಟೀಪೂ ಸುಲ್ತಾನು ಹೀಗೆ ಹುಲಿಯನ್ನು ಕೊಂದಿದ್ದಕ್ಕೆ ಮೈಸೂರು ಹುಲಿ ಅಂತ ಹೇಳಿದ್ರು ಈಗ ನಿನ್ನನ್ನು. . ."

"ಈಗ ನನ್ನನ್ನೂ ?" ಸ್ನೇಹಿತ ಕುತೂಹಲದಿಂದ ಕೇಳಿದ

"ಬೆಂಗಳೂರು ನಾಯಿ ಎಂದು ಕರೆಯಬಹುದು' ಚಿಕ್ಕ ತಣ್ಣಗೆ ಉತ್ತರಿಸಿದ.

**ಕೆ.ಆರ್.ಮಧುಸೂದನ್.**

# ಗೋಕಲಾಷ್ಟಮಿಯೂ ಗೋಬಿಮಂಚೂರಿಯೂ.....

● **ಪ್ರಕಾಶ್. ಆರ್.**

ಗೋಕಲಾಷ್ಟಮಿಗೂ ಗೋಬಿಮಂಚೂರಿಗೂ ಏನು ಸಂಬಂಧ? ಸಂಬಂಧ ಇದೆ. ಕನ್ನಡದಲ್ಲಿ ಆ ಎರಡೂ ಪದಗಳಿಗೆ ಐದು ಅಕ್ಷರಗಳು ಮತ್ತೆ ಎರಡೂ ''ಗೋ'' ಇಂದ ಶುರುವಾಗಿ ''ಇ'' ಕಾರದೊಂದಿಗೆ ಕೊನೆಗೊಳ್ಳುತ್ತದೆ. ಆಂಗ್ಲಭಾಷೆಯಲ್ಲಿಯೂ ಎರಡೂ ಪದಗಳು ''G'' ಇಂದ ಶುರುವಾಗಿ ''I'' ಇಂದ ಕೊನೆಗೊಳ್ಳುತ್ತದೆ, ಹಾಗೂ ಎರಡರಲ್ಲೂ 12 ಅಕ್ಷರಗಳೇ. ಇನ್ನೊಂದು ಸಂಬಂಧ ಅಂದರೆ ಗೋಕಲಾಷ್ಟಮಿಯಲ್ಲಿ ಕರಿದ ತಿಂಡಿಗಳೇ ಜಾಸ್ತಿ. ಗೋಬಿಮಂಚೂರಿ ಸಹ ಎಣ್ಣೆಯಲ್ಲಿ ಕರಿದು ಮಾಡುವ ತಿಂಡಿಯೇ ಇದು.

ಇದಕ್ಕೆ ಸಂಬಂಧಿಸಿದಂತೆ ಸುಮಾರು 15 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಆದ ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಆಗಷ್ಟೇ ಗೋಬಿಮಂಚೂರಿ ಹೆಸರುವಾಸಿಯಾಗಿ ಎಲ್ಲೆಂದರಲ್ಲಿ ದೊರೆಯುವ ಕಾಲವಾಗಿತ್ತು. ಇದಕ್ಕೂ ಹಿಂದೆ ಗೋಬಿಮಂಚೂರಿ ಬರೀ ದೊಡ್ಡ ಹೋಟೆಲ್‌ಗಳಲ್ಲಿ ಮಾತ್ರ ದೊರಕುತ್ತಿತ್ತು. ದುಬಾರಿ ಬೆಲೆ. ಹೀಗಾಗಿ ಸಾಮಾನ್ಯ ಜನರು ತಿನ್ನಲು ಅಸಾಧ್ಯವಾಗಿತ್ತು. ಆದರೆ ಗೋಬಿಮಂಚೂರಿ ಮಿಕ್ಸ್ ಬಂದ ಮೇಲೆ ಎಲ್ಲಿ ನೋಡಿದರಲ್ಲಿ- ದರ್ಶಿನಿಗಳಲ್ಲಿ, ಸಣ್ಣ ಹೋಟೆಲ್‌ಗಳಲ್ಲಿ ತಳ್ಳು ಗಾಡಿಗಳಲ್ಲೂ ಲಭ್ಯವಾಗಿ ಹಾದಿ ಬೀದಿಗಳಲ್ಲೂ ಮಾರಲು ಶುರುವಾಯಿತು. ಹತ್ತು ರೂಪಾಯಿಗೆ ಒಂದು ಪ್ಲೇಟ್. ಯಾರಿಗೆ ಬೇಡ? ಎಲ್ಲರ ಬಾಯಿ ಸೇರಿತು. ನನ್ನ ಮಗಳು ಸುಪ್ರಿಯಾಗೆ ಗೋಬಿಮಂಚೂರಿ ಬಹಳ ಇಷ್ಟವಾಗಿತ್ತು. ನನ್ನ ಹೆಂಡತಿ ಸರಳಳಿಗೂ ಇಷ್ಟವಾಗಲು ಪ್ರಾರಂಭವಾಯಿತು.

ಅಂದು ಗೋಕಲಾಷ್ಟಮಿ ನನಗೆ ರಜೆ. ಸರಳ ಎಂದಿನಂತೆ ಆಫೀಸ್‌ಗೆ ಹೊರಟಳು. ಗೋಕಲಾಷ್ಟಮಿಯಂದು ನಮ್ಮ ಮನೆಯಲ್ಲಿ ಸಂಜೆ 8 ಘಂಟೆಗೆ ಪೂಜೆ. ಪೂಜೆಯ ನಂತರ ಫಲಹಾರ. ಸರಳ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಒಂದೆರಡು ದಿನದ ಹಿಂದೆಯೇ ಗೋಕಲಾಷ್ಟಮಿಯ ತಿಂಡಿಗಳನ್ನು ಮಾಡಿದ್ದಳು. ಚಕ್ಕಲಿ, ಕೋಡುಬಳೆ, ತೇಂಗೋಳು, ನಿಪ್ಪಟ್ಟು, ರವೆ ಉಂಡೆ, ಕೊಬ್ಬರಿ ಬರ್ಫಿ ಎಲ್ಲಾ ರೆಡಿ. ಹಬ್ಬದ ದಿವಸ ಗೊಜ್ಜವಲಕ್ಕಿ, ಸೀ ಅವಲಕ್ಕಿ, ಮೊಸರು ಅವಲಕ್ಕಿ ಮಾಡುವ ಪದ್ಧತಿ.

ನಾನು ಬೆಳಿಗ್ಗೆ ತಿಂಡಿ ತಿಂದು ಹೊರಗಡೆ ಹೋದೆ. ಮಧ್ಯಾಹ್ನ ಮನೆಗೆ ಹಿಂತಿರುಗುವ ವೇಳೆಯಲ್ಲಿ ದಾರಿಯಲ್ಲಿ ಗೋಬಿ ಮಾರುತ್ತಿದ್ದರು. ಹತ್ತು ರೂಪಾಯಿಗೆ ಒಂದು ತಾಜಾ ಮಾಲು. ದೊಡ್ಡದಾಗಿಯೂ ಇತ್ತು. ಒಂದು ಗೋಬಿ ಕೊಂಡೆ. ಗೋಬಿ ಮಿಕ್ಸ್ ಕೂಡ ಖರೀದಿಸಿ ಮನೆ ಸೇರಿದೆ. ಜೀವನದಲ್ಲಿ ಮೊದಲ ಬಾರಿಗೆ ಆ ತರಕಾರಿ ಕೊಂಡಿದ್ದೆ. ಅದನ್ನು ನೋಡಿ ನನ್ನ ಮಗಳಿಗೆ ಖುಷಿ. ಅವಳ ಖುಷಿ ನೋಡಿ ನನಗೂ ಸಂತೋಷ. ಊಟ ಮುಗಿಸಿದಾಕ್ಷಣ ಗೋಬಿಮಂಚೂರಿ ಮಾಡುವ ಯೋಜನೆ ಬಂತು. ಮಗಳೂ ಕೈ ಜೋಡಿಸಿದಳು.

ಊಟ ಮುಗಿಸಿದೊಡನೆ ಶುರು ಆಯಿತು ನಮ್ಮ ಗೋಬಿಮಂಚೂರಿ ಮಾಡುವ ಕಾರ್ಯಕ್ರಮ. ಗೋಬಿ ಕೊಂಡದ್ದೇ ಮೊದಲ ಬಾರಿಯಾಗಿದ್ದರಿಂದ ಗೋಬಿಮಂಚೂರಿ ಮಾಡಲು ಹೊರಟಿದ್ದೂ ಮೊದಲನೇ ಸಲ. ಗೋಬಿಮಂಚೂರಿ ಮಿಕ್ಸ್‌ನ ಪ್ಯಾಕೆಟ್ ಮೇಲೆ ಇದ್ದ ತಯಾರಿಸುವ ವಿಧಾನ ಓದಿದೆ. ಅದರಂತೆಯೇ ಎಲ್ಲಾ ಸಾಮಾನು ಅಣಿಮಾಡಿಕೊಂಡು

ಮಾಡಲು ಪ್ರಾರಂಭಮಾಡಿದೆವು. ಫ್ರೆಶ್ ಆಗಿ ಇದ್ದ ಗೋಬಿ, ಗೋಬಿಮಂಚೂರಿಯ ರುಚಿ ಮತ್ತೆ ಅದನ್ನು ಮನೆಯಲ್ಲೇ ಮಾಡುವ ಹುಮ್ಮಸ್ಸು ಎಲ್ಲವೂ ಆ ದಿನ ಗೋಕಲಾಷ್ಟಮಿ ಎನ್ನುವುದನ್ನು ಮರೆಸಿತು. ಜತೆಗೆ ಗೋಬಿಮಂಚೂರಿಯೂ ಕರೆದ ತಿಂಡಿ ತಾನೇ ಅನ್ನಿಸಿಬಿಟ್ಟಿತು. ಸರಳ ಆಫೀಸಿನಿಂದ ಬರುವಷ್ಟರಲ್ಲಿ ಗೋಬಿಮಂಚೂರಿ ಮಾಡಿ ಮುಗಿಸಿ ಅವಳಿಗೆ ಸರ್‌ಪ್ರೈಸ್ ಕೊಡುವ ಯೋಜನೆ ನಮ್ಮದಾಗಿತ್ತು.

ಪ್ರತಿ ದಿನ 7ಕ್ಕೆ ವಾಪಸಾಗುತ್ತಿದ್ದ ಸರಳ ಗೋಕಲಾಷ್ಟಮಿಯೆಂದು ಅಂದು 5.15ಕ್ಕೇ ಮನೆಗೆ ಬಂದಳು. ಅವಳು ಬಂದಾಗ ಗೋಬಿಯನ್ನು ಹಿಟ್ಟಿನಲ್ಲಿ ಅದ್ದಿ ಎಣ್ಣೆಯಲ್ಲಿ ಕರೆಯುವ ಕೆಲಸ ನಡೆದಿತ್ತು. ಗೋಬಿ ಒಂದು ಪಾತ್ರೆಯಲ್ಲಿ, ಕಲಸಿದ್ದ ಹಿಟ್ಟು ಇನ್ನೊಂದರಲ್ಲಿ, ಗ್ಯಾಸ್ ಮೇಲೆ ಕಾಯುತ್ತಿದ್ದ ಎಣ್ಣೆ, ಕೈ ಹಿಟ್ಟು ಮಾಡಿಕೊಂಡು ನಿಂತಿದ್ದ ನಾನು. ಪಕ್ಕದಲ್ಲಿ ನನ್ನ ಮಗಳು. ದೃಶ್ಯ ಕಂಪ್ಲೀಟ್.

''ಏನಮ್ಮ ಇವತ್ತು ಬೇಗ ಬಂದಿದ್ದೀಯಾ? ಎಂದು ಮಗಳು ಕೇಳುತ್ತಿದ್ದಂತೆ ಸರಳ 'ಇದೇನಿದು ವಾಸನೆ?' ಅಂತ ತನ್ನ ಬ್ಯಾಗನ್ನು ಕುರ್ಚಿಯ ಮೇಲಿಟ್ಟು, 'ಏನು ಮಾಡುತ್ತಿದ್ದೀರಾ?' ಎನ್ನುತ್ತಾ ನೆಟ್ಟಗೆ ಅಡುಗೆ ಮನೆಗೆ ಬಂದಳು. ನೋಡಿದವಳೇ ರುದ್ರಾವತಾರ ತಾಳಿದಳು. 'ನೀವೇನು ಬ್ರಾಹ್ಮಣರ ಮನೆಯಿಂದ ಬಂದಿದ್ದಿರೋ ಇನ್ನೆಲ್ಲಿಂದ ಬಂದಿದ್ದಿರೋ?. ನಿಮ್ಮ ಅಮ್ಮ, ಅವರ ಮನೆಯವರು ಅಷ್ಟೊಂದು ಮಡಿ, ಆಚಾರ ಅಂತ ಮಾಡ್ತಾರೆ. ನಿಮ್ಮದೇನು ಇದು ಕಥೆ. ಸ್ವಲ್ಪ ಆದರೂ ಕಾಮನ್ ಸೆನ್ಸ್ ಇದೆಯಾ. ನಾನು ಆಫೀಸಿನಿಂದ ಬರುವ ಹೊತ್ತಿಗೆ ಹೂವು, ಹಣ್ಣು ವೀಳೇದೆಲೆ ತಂದು ಪೂಜೆಗೆ ಅಣಿ ಮಾಡೋದು ಬಿಟ್ಟು, ಗೋಕಲಾಷ್ಟಮಿ ದಿವಸ ಗೋಬಿಮಂಚೂರಿ ಮಾಡಿಕೊಂಡು ಕೂತಿದ್ದಿರಾ..' ಎಂದು ನಮ್ಮಿಬ್ಬರನ್ನೂ ಬೈದು ರೂಮಿಗೆ ಹೋಗಿ ಮಲಗಿ ಬಿಟ್ಟಳು. ಆಗಲೇ ಏನೋ ಎಡವಟ್ಟಾಯಿತು ಎಂದು ನನಗೆ ಅನಿಸಿದ್ದು.

ಬೈಗುಳ ತಿಂದ ನಮ್ಮಿಬ್ಬರ ಮುಖ ಒಂದು ವಾರದಷ್ಟು ಹಳೆಯದಾದ ಗೋಬಿಯಂತೆ ಬಾಡಿತು. ನನ್ನ ಮಗಳೂ ತಣ್ಣಗಾಗಿ ಬಿಟ್ಟಳು. ಗೋಬಿಮಂಚೂರಿ ಮಾಡಲು ಸಿದ್ದಪಡಿಸಿದ್ದ ಪದಾರ್ಥಗಳನ್ನೆಲ್ಲ ಹೊರಗಡೆ ತೊಟ್ಟಿಯಲ್ಲಿ ಬಿಸಾಡಿ, ಎಲ್ಲಾ ಪಾತ್ರೆಗಳನ್ನು ತೊಳೆದು, ಹೊರ ಹೋಗಿ ಹೂವು, ಹಣ್ಣು ತಂದು ತಣ್ಣಗೆ ಕುಳಿತೆ. ಸರಳಳ ಕೋಪ ಕಮ್ಮಿಯಾಗುವಷ್ಟರಲ್ಲಿ 8.30 ಆಗಿತ್ತು. ಪುಸಲಾಯಿಸಿ, ತಪ್ಪು ಒಪ್ಪಿಕೊಂಡು ಪೂಜೆ ಮಾಡಲು ಎಬ್ಬಿಸಿದೆ. ಅರೆಮನಸ್ಸಿನಿಂದ ಪೂಜೆ ಮಾಡಿ, ಫಲಾಹಾರ ತಿಂದು, ಏನೂ ಮಾತಾಡದೆ ಸುಮ್ಮನೆ ಮಲಗಿದೆವು.

ಅದೇ ಮೊದಲು ಸಲ, ಅದೇ ಕಡೆಯ ಸಲ ಗೋಬಿ ಮನೆಗೆ ತಂದದ್ದು. ಇದೆಲ್ಲಾ ಮತ್ತೆ ಜ್ಞಾಪಕ ಬಂದದ್ದು ಹಲವಾರು ವರ್ಷಗಳ ನಂತರ. ಗೋಕಲಾಷ್ಟಮಿಯ ದಿವಸ. ಇಂದೂ ಸರಳ ಆಫೀಸಿಗೆ ಹೋಗಿದ್ದಳು. ನನಗೆ ರಜೆ ಮನೆಯಲ್ಲಿ ಇದ್ದೆ.

ಸರಳ ಆಫೀಸಿನಿಂದ ಬರುವ ಹೊತ್ತಿಗೆ ಹೂವು, ಹಣ್ಣು ವೀಳೇದೆಲೆ ತಂದು, ದೇವರ ಕೋಣೆಯಲ್ಲಿ ಎಲ್ಲಾ ಜೋಡಿಸಿ, ಅವಲಕ್ಕಿಯನ್ನು ಮಾಡಿದೆ. ಮನೆಯಲ್ಲೇ ಇದ್ದ ನನ್ನ ಮಗಳ ಹತ್ತಿರ ಹೋಗಿ ''ಬಾ ಗೋಬಿ ತರೋಣ'' ಅಂತ ಹೇಳಿ ಇಬ್ಬರು ನಗಾಡಿಕೊಂಡೆವು.

ಈಗ ನಾವು ಮೂವರೂ ಗೋಬಿಮಂಚೂರಿ ತಿನ್ನುವುದನ್ನೇ ಕಮ್ಮಿ ಮಾಡಿದ್ದೇವೆ, ಬಿಟ್ಟು ಬಿಟ್ಟಿದ್ದೇವೆ ಅಂದರೂ ಸರಿಯೇ.

ಈಗ ತಿಳಿಯಿತಲ್ಲಾ ಗೋಕಲಾಷ್ಟಮಿಗೂ ಗೋಬಿಮಂಚೂರಿಗೂ ಇರುವ ಸಂಬಂಧ. ■

TEMPLE OF KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಕುಶಾಗ್ರತನದ ಕುಶಲೋಪರಿ

**● ವೈ.ಎನ್. ಗುಂಡೂರಾವ್**

ಇತ್ತೀಚೆಗೆ ಯಾವುದೇ ಹೈಟೆಕ್ ಆಸ್ಪತ್ರೆಗಳಿಗೆ ಭೇಟಿ ನೀಡಿದರೂ ಒಳಗಡೆ ಅಡಿ ಇಡುತ್ತಿದ್ದಂತೆ ವಿಶಾಲವಾದ ಆವರಣದಲ್ಲಿ ದೊಡ್ಡ ಸೈಜಿನ ಗಣಪತಿಯ ವಿಗ್ರಹವನ್ನು ಕಾಣಬಹುದು. ಸುಂದರವಾದ ಕೆತ್ತನೆಯ ಕೆಲಸ ಮಾಡಿರುವ ಮಂದಾಸನದಲ್ಲಿ ತಳತಳನೆ ಹೊಳೆಯುವ ಬೆಳ್ಳಿಯ(?) ಬೃಹದಾಕಾರದ ಗಣಪತಿಯು ವಿರಾಜಮಾನನಾಗಿದ್ದು ಇಪ್ಪತ್ತು ನಾಲ್ಕು ಗಂಟೆಯೂ L.E.D ಬಲ್ಬ್‌ಗಳಿಂದಾವೃತ್ತವಾದ ದೀಪವು ದೇದೀಪ್ಯಮಾನವಾಗಿ ಬೆಳಗುತ್ತಲೇ ಇರುತ್ತದೆ. ಆಸ್ಪತ್ರೆಯಂತಹ ಸ್ಥಳದಲ್ಲಿ ಗಣಪತಿಯ ವಿಗ್ರಹವನ್ನು ಕಂಡಾಗ ನಿಮಗೆ ಅಚ್ಚರಿ – ಗೊಂದಲ ಎರಡೂ ಏಕಕಾಲದಲ್ಲಿ ಉಂಟಾದರೆ ಅಚ್ಚರಿಯೇನಲ್ಲ. ಏಕೆಂದರೆ ಹೈಟೆಕ್ ಆಸ್ಪತ್ರೆ ಎಂದ ಮೇಲೆ ಅಲ್ಲಿ ಧಾರ್ಮಿಕತೆಗೆ ಅವಕಾಶವೆಲ್ಲಿರುತ್ತದೆ ಎಂದು ಎಲ್ಲರ ಮನಸ್ಸಿನಲ್ಲಿಯೂ ಪ್ರಶ್ನೆ ಮೂಡುವುದು ಸಹಜ. ಎಲ್ಲರ ಸಂಕಷ್ಟಗಳ ನಿವಾರಕ ವಿಘ್ನೇಶ್ವರನೇ ಆದುದರಿಂದ, ಹಲವಾರು ದೈಹಿಕ ಸಮಸ್ಯೆಗಳನ್ನು ಹೊತ್ತು ಬರುವ ರೋಗಿಗಳು, ನಿರೋಗಿಗಳಾಗಿ ಹಿಂದಿರುಗಲಿ; ಗಣಪತಿಯ ಕೃಪಾ ಕಟಾಕ್ಷವು ಎಲ್ಲರ ಮೇಲೆಯೂ ಇರಲಿ ಎಂಬ ಸದಾಶಯದಿಂದ ಪ್ರತಿಷ್ಠಾಪಿಸಿರುವುದರಲ್ಲಿ ತಪ್ಪೇನಿಲ್ಲ. ಅಥವಾ ರೋಗಿಗಳಾಗಿ ಬಂದವರು, ಅವರ ಕಡೆಯ ದೈವಭೀರುಗಳಿಗೆ ರೋಗಿಗಳ ಶುಶ್ರೂಷೆಯಲ್ಲಿಯೇ ಬಹುಪಾಲು ಸಮಯ ಕಳೆದು ಹೋಗಿಬಿಡುವುದರಿಂದ ದೇವಸ್ಥಾನಗಳಿಗೆ ಹೋಗಿ ದೇವರಲ್ಲಿ ಮೊರೆಯಿಡಲು ಸಮಯಾವಕಾಶವಿಲ್ಲದೆ ಇರುವುದರಿಂದ ಆಸ್ಪತ್ರೆಯಲ್ಲಿಯೇ ದೇವರು ಪ್ರತ್ಯಕ್ಷನಾಗಿ ಕುಳಿತು 'ನಿನ್ನ ಆರೋಗ್ಯವನ್ನು ನಾನು ಸುಧಾರಿಸುತ್ತೇನೆ, ಭಯ ಪಡಬೇಡ' ಎಂಬ ಅಭಯವನ್ನು ದೇವರು ನೀಡಲಿರುವುದರಿಂದ ರೋಗಿಗಳಿಗೆ, ಅವರ ಸಂಬಂಧಿಗಳಿಗೆ ಇದಕ್ಕಿಂತ ದೈವಕೃಪೆ ಮತ್ತಾವುದಿದೆ ಹೇಳಿ? ನಿಮ್ಮ ಬಗ್ಗೆ ಆಸ್ಪತ್ರೆಯವರಿಗೆ ಎಂತಹ ಕಾಳಜಿ!

ಸಂಕಷ್ಟಕ್ಕೆ ಸಿಲುಕಿದ ಮನುಷ್ಯನಿಗೆ ಪರಿಹಾರೋಪಾಯದ ಮಾರ್ಗವೆಂದರೆ ದೈವಕೃಪೆಯಿಂದಲೇ ಎಂಬ ಕಟ್ಟಕಡೆಯ ನಿರ್ಧಾರಕ್ಕೆ ಬಂದು ಬಿಡುವುದರಿಂದ ಆ ದೇವರಲ್ಲಿ ಮೊರೆ ಹೋಗುವುದೇನೋ ಸರಿ, ಆದರೆ ಕೆಲವು ರೇಷ್ಮೆ ಸೀರೆಯ ಅಂಗಡಿಗಳಲ್ಲಿ, ಚಿನ್ನದ ವ್ಯಾಪಾರ ನಡೆಸುವ ಅಂಗಡಿಗಳಲ್ಲಿ, ಮೊಬೈಲ್ ಶಾಪಿನಲ್ಲಿ, ಹೆಚ್ಚೇಕೆ ಕೈಗಡಿಯಾರದ ಅಂಗಡಿಗಳಲ್ಲೂ ದೇವರು ಪ್ರತ್ಯಕ್ಷವಾಗಿ ಅಭಯ ಹಸ್ತ ನೀಡುತ್ತಾ ನಿಂತು ಬಿಟ್ಟರೆ ಜನರು ದೇವಸ್ಥಾನಗಳಿಗಾದರೂ ಹೋಗುವ ಅವಶ್ಯಕತೆಯಾದರೂ ಎಲ್ಲಿದೆ?

ಅದೊಂದು ರೇಷ್ಮೆ ವಸ್ತ್ರದ ಅಂಗಡಿ. ಹಲವಾರು ರಖಂನ ಮಾರಾಟ ಮಳಿಗೆ. ಸುಮಾರು ಎರಡು–ಮೂರು ಅಂತಸ್ತುಗಳಲ್ಲಿ ಹರಡಿಕೊಂಡು ಒಪ್ಪ-ಓರಣವಾಗಿ ಆಕರ್ಷಕವಾಗಿ ಸೀರೆಗಳನ್ನು ಜೋಡಿಸಿಟ್ಟು, ಎಲ್ಲ ವರಮಾನದವರಿಗೂ ಕೈಗೆಟುಕುವಂತಿದ್ದು ಅಂಗಡಿಯೊಳಗೆ ಕಾಲಿಡುತ್ತಿದ್ದಂತೆ ಖರೀದಿಸಲು ಪ್ರೇರೇಪಿಸುವಂತಹ ವಾತಾವರಣದಿಂದ ಕೂಡಿರುವ ಅಂಗಡಿ. ನೀವು ಯಾವುದೇ ವಸ್ತುವನ್ನು ಖರೀದಿಸಿದರೂ ಬಿಲ್ ತೆತ್ತನಂತರ ಅಲ್ಲೇ ಪೀಠಸ್ಥವಾಗಿರುವ ಕಾಮಾಕ್ಷಿದೇವಿಯ ಅನುಗ್ರಹ ಪಡೆಯದೆ ಹೊರಬರುವಂತೆಯೇ ಇಲ್ಲ. ಬಿಲ್ಲಿನ ಹಣ

ಸಂದಾಯ ಮಾಡುತ್ತಿದ್ದಂತೆ ಕ್ಯಾಶ್‌ಕೌಂಟರಿನಲ್ಲಿರುವಾತ ನಿಮಗೆ ರಶೀದಿ ಕೊಡುತ್ತಾನೆಯೇ ವಿನಃ ನೀವು ಖರೀದಿಸಿರುವ ವಸ್ತುವನ್ನು ನಿಮಗೆ ಕೊಡುವುದಿಲ್ಲ. ರಶೀದಿಯ ಜೊತೆಗೆ ನಿಮಗೊಂದು ಟೋಕನ್ ನಿಮ್ಮ ಕೈ ಸೇರುತ್ತದೆ. ಕೊಂಡ ವಸ್ತುವಿನ ನಿಮ್ಮದೇ ಪ್ಯಾಕೆಟ್ ಹಿಡಿದವನೊಬ್ಬ ಕೌಂಟರಿನಿಂದ ಹೊರಬಂದಾಗ ''ಅರೆ, ನಮ್ಮ ಪ್ಯಾಕೆಟನ್ನು ಇವನೆಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾನೆ?'' ಎಂದು ನಿಂತಲ್ಲಿಂದಲೇ ಪ್ಯಾಕೆಟ್ ಹಿಡಿದವನನ್ನು ನಿಮ್ಮ ಕಣ್ಣು ಹಿಂಬಾಲಿಸಿದರೆ ಆತ, ಕಾಮಾಕ್ಷಿದೇವಿಯ ಬಳಿಯ ಪುರೋಹಿತರು ಹಿಡಿದ ತಟ್ಟೆಗೆ ಪ್ಯಾಕೆಟ್ ದಾಟಿಸುತ್ತಾನೆ. ವಿಧಿಯಿಲ್ಲದೆ ನೀವು, ನಿಮ್ಮ ಪರಿವಾರ ಅಲ್ಲೇನು ನಡೆಯುತ್ತದೆ ಎಂದು ವೀಕ್ಷಿಸಲು ಕಾಮಾಕ್ಷಿದೇವಿಯ ಮುಂದೆ ನಿಲ್ಲುತ್ತೀರಿ.

ಅದೊಂದು ಭವ್ಯ ಕಾಮಾಕ್ಷಿ ವಿಗ್ರಹ. ಅಸಲಿಯದೋ, ಹೊಳಪುಮಾಡಿರುವುದೋ ಒಂದೂ ತಿಳಿಯದಂತಹ ಆಭರಣಗಳನ್ನು ಧರಿಸಿದ್ದು, ಪ್ರಖರ ಬೆಳಕಿನಲ್ಲಿ ಕಂಗೊಳಿಸುತ್ತಿರುವ ನಾಲ್ಕು ಕೈಗಳ ಕಾಮಾಕ್ಷಿಯಮ್ಮ. ಪೀಠಸ್ಥವಾಗಿರುವ ಕಾಮಾಕ್ಷಿಯ ಸುತ್ತಲೂ ಬೆಳ್ಳಿಯಂತೆ ಮಿರುಗುವ ದಪ್ಪ ದಪ್ಪ ಕಂಬಗಳಿಂದ ಸುತ್ತವರೆಯಲ್ಪಟ್ಟ ಗರ್ಭಗುಡಿಯಂತೆ ರಚಿತವಾದ ಚೌಕಾಕಾರದ ಪ್ರದೇಶ. ಹಿಂಬದಿಯಲ್ಲಿ ಹೊಳೆಯುವ ಪ್ರಭಾವಳಿ. ಒಳಗಡೆ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಎತ್ತರ ಪ್ರದೇಶದಿಂದ ತಗ್ಗಿಗೆ ಹರಿಯುವ ನೀರಿನ ಜುಳುಜುಳು ನಿನಾದದ ಜೊತೆಗೆ ಬಣ್ಣಬಣ್ಣದ ಬೆಳಕಿನ ಚಿತ್ತಾರ. ಪೀಠದ ಮುಂದೆ ದೊಡ್ಡ ಹರಿವಾಣದ ನೀರಿನಲ್ಲಿ ಹರವಿರುವ ದೊಡ್ಡದೊಡ್ಡ ಸೈಜಿನ ದಾಸವಾಳ, ಗುಲಾಬಿ, ತಾವರೆ ಹೂಗಳ ಸಂಸಾರ, ಅಷ್ಟುದೊಡ್ಡ ಹರಿವಾಣಕ್ಕೆ ಗಿಡದಿಂದ ಕಿತ್ತುತಂದ ಹೂಗಳನ್ನು ದಿನವೂ ಬದಲಿಸುತ್ತಾರೋ ಇಲ್ಲವೇ ಪ್ಲಾಸ್ಟಿಕ್ ಹೂಗಳೋ! ದೂರದಿಂದ ನೋಡಿದರೆ ಒಂದೂ ತಿಳಿಯುವುದಿಲ್ಲ. ಹರಿವಾಣದ ಪಕ್ಕದ ಸ್ಟೂಲಿನ ಮೇಲೆ ನಾಲ್ಕು ಕಡೆಯೂ ಗಾಜಿನಿಂದ ಕೂಡಿದ್ದು ಬೀಗ ಹಾಕಿಟ್ಟಿರುವ ದೊಡ್ಡ ಹುಂಡಿಯಂತಹ ಡಬ್ಬ.

ಹೆಂಗಸರು ಉತ್ಪ್ರೇಕ್ಷಿಸಿ ಮಾತನಾಡುವಂತೆ 'ಆ ದೇವಿಯನ್ನು ನೋಡಲು ನಾಲ್ಕು ಕಣ್ಣೂ ಸಾಲದು' ಎನ್ನುವಂತಹ ಭವ್ಯ ಕಾಮಾಕ್ಷಿಮೂರ್ತಿ.

ಹೊಳೆವ ಕಿರೀಟದಲ್ಲಿನ ಬಣ್ಣಬಣ್ಣದ ಕಲ್ಲುಗಳಿಂದ ಹೊರಡುವ ಬಣ್ಣದ ಬೆಳಕಿನ ಪ್ರತಿಫಲನ, ಉಡಿಸಿರುವ ಸೀರೆಯೋ ಮಿರಿಮಿರಿ ಮಿಂಚುವ ಅಪ್ಪಟ ರೇಷ್ಮೆಯಂತಹ ವಸ್ತ್ರ. ಮುಂದಲೆ ಕೂದಲನ್ನು ಇಬ್ಭಾಗಮಾಡಿ ಬಾಚಿ ಹಣೆಯ ಮೇಲೆ ಬರುವಂತೆ ಸಿಂಗರಿಸಿದ ಬೈತಲ್‌ಸರ. ಹಣೆಯ ಮೇಲೆ ಮಾವಿನಾಕಾರದ ಲಲಾಟ ಮಣಿ ತಿಲಕ. ಕುತ್ತಿಗೆಯಲ್ಲಿ ಧರಿಸಿರುವ ಮುತ್ತಿನ ಕಂಠಿಹಾರ. ಮುಂಗೈ, ತೋಳುಗಳಲ್ಲಿ ಕಟ್ಟಿರುವ ಕಂಕಣ ಹಾಗೂ ತೋಳ ಬಂದಿ. ಮಂಗಳ ಸೂತ್ರದಲ್ಲಿ ಮಿನುಗುವ ವಜ್ರಾಭರಣ. ಸೊಂಟಕ್ಕೆ ಬಿಗಿದ ಕಂಚಿ ಕಲಾಪ. ಅಂದರೆ ಇಪ್ಪತ್ತೈದು ಎಳೆ ಸರವನ್ನು ಸೊಂಟ, ಹಿಂಭಾಗ, ಮುಂಭಾಗದಿಂದ ಕೆಳಭಾಗಕ್ಕೆ ಹರಡಿಕೊಂಡಿರುವಂತೆ ಮಾಡಿರುವ ಅಲಂಕಾರ, ಸುತ್ತಲೂ ಹೊತ್ತಿಸಿರುವ ದೀಪಾಲಂಕಾರದಿಂದ ಝಗಮಗಿಸುತ್ತಿರುವ ದೇವಿ ಕಾಮಾಕ್ಷಿ! ಈಗ ಹೇಳಿ ಇಂತಹ ಸುಂದರ ಮೂರ್ತಿಯನ್ನು ಕಂಡ ಹೆಂಗೆಳೆಯರು ಕೈಮುಗಿಯದಿರುತ್ತಾರೆಯೇ?

ತಟ್ಟೆಯಲ್ಲಿಟ್ಟ ಪ್ಯಾಕೆಟ್ಟನ್ನು ಅಮ್ಮನವರ ಕಾಲಿನ ಬಳಿ ಇಟ್ಟು ಐದು ನಿಮಿಷ ಮನಸ್ಸಿನಲ್ಲಿಯೇ ಮಂತ್ರ ಪಿಟಿಪಿಟಿಸಿ, ಮಂಗಳಾರತಿ ಎತ್ತಿದ ಪ್ರರೋಹಿತರು ನಿಮ್ಮತ್ತ

ನೋಡುತ್ತಾರೆ. ಮಂಗಳಾರತಿ ತಟ್ಟೆಯನ್ನು ಹುಂಡಿಯಂತಹ ಗಾಜಿನ ಡಬ್ಬದ ಬಳಿಯೇ ಇಟ್ಟಾಗ ನಿಮ್ಮ ಗಮನ ಗಾಜಿನ ಹುಂಡಿಯ ಕಡೆಯೂ ಹೋಗಲೇ ಬೇಕು. ಹುಂಡಿಯ ಹಣ ಎಣಿಸಿಯೇ ಇಲ್ಲವೇನೋ ಎನ್ನುವಷ್ಟು ತುಂಬಿ ತುಳುಕುತ್ತಿರುತ್ತದೆ. ಅದರಲ್ಲೂ ಬರೇ ಪಿಂಕ್ ಕಲರ್ ನೋಟುಗಳೇ! (ಅಂದರೆ ಎರಡು ಸಾವಿರ ಬೆಲೆಯ ನೋಟು) ಎಲ್ಲೋ ಅಲ್ಲೊಂದು ಇಲ್ಲೊಂದು ಗ್ರೇ ಕಲರ್‌ದು (500ರ ನೋಟು). ನೀವು ಅಂಗಡಿಗೆ ಹೋಗಿರುವುದೇ ಸಾಮಾನ್ಯವಾಗಿ ಮದುವೆಯೋ ಮತ್ತೊಂದು ಸಮಾರಂಭಕ್ಕೆಂದು ಜವಳಿ ಖರೀದಿಸಲು. ಅಂದರೆ ಕನಿಷ್ಟವೆಂದರೂ ಒಂದು ಲಕ್ಷ ರೂ.ಗಳ ವ್ಯಾಪಾರ ಮಾಡೇ ಇರುತ್ತೀರಿ. ಈಗ ಹೇಳಿ ನಿಮ್ಮ ಘನತೆಗೆ ತಕ್ಕಂತೆ ಖರೀದಿಸಿರುವ ಪ್ಯಾಕೆಟ್ಟಿನ ಸೀರೆಗಳ ಭಾರಕ್ಕೆ ತಕ್ಕಂತೆ ಒಂದು ಪಿಂಕ್ ಕಲರ್ ನೋಟನ್ನು ಹಾಕದೆ ಬರಲಾದೀತೇ? ಕಡಿಮೆ ಬೆಲೆಯ ನೋಟು ಹಾಕಿ ಬಂದರೆ ನಿಮ್ಮ ಮರ್ಯಾದೆಗೇ ಕುಂದು. ಮನಸ್ಸಿನಲ್ಲಿ ಗೊಣಗಿಕೊಂಡು, ಬಾಯಿ ಮುಚ್ಚಿಕ್ಕೊಂಡು ಒಂದು ಪಿಂಕ್‌ನೋಟನ್ನು ಹುಂಡಿಯೊಳಗೆ ತೂರಿಸಿ ಮಂಗಳಾರತಿ ಎತ್ತಿಸಿಕೊಂಡು ಪ್ಯಾಕೆಟ್ ಪಡೆದು ಬರುತ್ತೀರಿ.

ಒಬ್ಬೊಬ್ಬ ಗ್ರಾಹಕರಿಂದಲೂ ಎರಡೆರಡು ಸಾವಿರವೆಂದರೆ ಕಾಮಾಕ್ಷಮ್ಮನವರ ಆದಾಯ ಎಷ್ಟಾಯಿತು. ಬಹುಶಃ ಆ ದುಡ್ಡೆಲ್ಲ ಪುರೋಹಿತರಿಗೆ ಸೇರುತ್ತದೆಂದುಕೊಂಡಿರಾ? ಇಲ್ಲ, ಅವರೂ ತಿಂಗಳ ಸಂಬಳದ ಮೇಲೆ ನೇಮಿಸಲ್ಪಟ್ಟಿರುವವರೇ! ನಿಮ್ಮ ಕಾರ್ಯಗಳೆಲ್ಲ ಸುಸೂತ್ರವಾಗಿ ನೆರವೇರಲೆಂದು 'ಅಮ್ಮ' ಹರಸಿದ್ದಾಳೆಂದು ಪುರೋಹಿತರು ಆಶೀರ್ವದಿಸಿ, ನಿಮ್ಮ ಯೋಗಕ್ಷೇಮದ ಕಾಳಜಿ ವಹಿಸಿ ಟೋಕನ್ ಪಡೆದು ನಿಮ್ಮ ಪ್ಯಾಕೆಟ್ ಕೈಯಲ್ಲಿಡುತ್ತಾರೆ.

ಇನ್ನು ಅಕ್ಷಯ ತೃತೀಯ ಸಂದರ್ಭ ಬಂದರಂತೂ ಚಿನ್ನದ ವ್ಯಾಪಾರಿಗಳಲ್ಲಿ ವ್ಯಾಪಾರಿ ಬುದ್ಧಿ ಜಾಗೃತಗೊಳ್ಳತೊಡಗುತ್ತದೆ, ''ಅಕ್ಷಯ ತೃತೀಯದಂದು ಚಿನ್ನ ಖರೀದಿಸಿದರೆ ಹತ್ತರಷ್ಟು ವೃದ್ಧಿಯಾಗುತ್ತದೆ. ಸಕಲ ಸೌಭಾಗ್ಯಗಳಿಗೂ ದಾರಿಯಾಗುತ್ತದೆ. ಮನೆಯಲ್ಲಿ ಲಕ್ಷ್ಮೀ ನೃತ್ಯ ಮಾಡಿಕೊಂಡಿರುತ್ತಾಳೆ. ಸಂಪತ್ತಿನ ಹೊಳೆ ಹರಿಯುತ್ತದೆ...'' ಇವೇ ಮುಂತಾದ ಜಾಹೀರಾತುಗಳನ್ನು ತೃತೀಯದ ಮುನ್ನಾದಿನಗಳ ಪತ್ರಿಕೆಗಳನ್ನು ಓದುವ ಹೆಂಗಸರ ಮನಸ್ಸನ್ನು ಚಿನ್ನ ಖರೀದಿಸಲು ಪ್ರೇರೇಪಿಸದೆ ಬಿಡದು.

ಅಕ್ಷಯ ತೃತೀಯದಂದು ಚಿನ್ನ ಖರೀದಿಸುವ ವಿಷಯದಲ್ಲಿ ವ್ಯಾವಹಾರಿಕ ವಿಚಾರಕ್ಕಿಂತ ಭಾವನಾತ್ಮಕ ಸಂಬಂಧವೇ ಹೆಚ್ಚು. ಅಂದು ಖರೀದಿಸಿದರೆ ಆಸ್ತಿ, ಜಮೀನು, ವಾಹನ, ಮನೆ ಎಲ್ಲವೂ ಅಭಿವೃದ್ಧಿ ಹೊಂದುತ್ತದೆಂದು ನಂಬುವ ಜನರಿಗೇನು ಕಡಿಮೆಯಿಲ್ಲ. ಅಂದೇ ಕೆಲವರು ಹೊಸಮನೆ ಕಟ್ಟಲು ಅಂಕುರಾರ್ಪಣೆ - ಗುದ್ದಲಿಪೂಜೆ, ಚೌಲ, ಚಂಡಿಕೆ, ಅಕ್ಷರಾಭ್ಯಾಸ, ಮುಂಜಿ, ಹೊಸ ವ್ಯಾಪಾರದ ಪ್ರಾರಂಭ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹೊಂದಿಸಿಕೊಳ್ಳುತ್ತಾರೆ. ಇದಕ್ಕೆ ತಕ್ಕಂತೆ ಅಂದಿನ ಸಂದರ್ಭದಲ್ಲಿ ದಿನಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುವ ಜಾಹೀರಾತುಗಳಿಗೇನೂ ಕಡಿಮೆಯಿಲ್ಲ, ಸಾಲಂಕೃತ ಕನ್ಯೆಯರಾಗಿ ಮಿಂಚುವ ಸಿನಿಮಾ ತಾರೆಯರ ಫೋಟೋ ನೋಡಿ ತಮ್ಮ ಸ್ಥಿತಿಯೂ ಅದೇ ರೀತಿ ಮಾರ್ಪಾಡಾಗುತ್ತದೆಂಬ ನಂಬಿಕೆಯಿಂದ ಚಿನ್ನದ ಅಂಗಡಿಗಳಿಗೆ ಮುಗಿಬೀಳುತ್ತಾರೆ. ಚಿನ್ನದ ಅಂಗಡಿ ಮಾಲೀಕರು ಚಿನ್ನಕೊಳ್ಳಲು ಬರುವ ಜನರಲ್ಲಿ ಎಷ್ಟೊಂದು ಉದ್ರೇಕಿಸುತ್ತಾರೆಂದರೆ ''ನಮ್ಮಲ್ಲಿ ಬೇಲೂರು ಶಿಲಾಬಾಲಿಕೆಯರು ಧರಿಸಿರುವ ಆಭರಣಗಳ ವಿನ್ಯಾಸಗಳು ಲಭ್ಯವೆಂದು ಒಬ್ಬರೆಂದರೆ, ಹರಪ್ಪ-ಮೊಹಂಜದಾರೋ ಡಿಸೈನ್‌ನಿಂದ ಹಿಡಿದು ಆತ್ಯಾಧುನಿಕ ಶೈಲಿಯವರೆವಿಗೂ ನಮ್ಮ

ಖಜಾನೆಯಲ್ಲಿ ಲಭ್ಯವೆಂದು ಮತ್ತೊಬ್ಬರು, ಇದಕ್ಕೂ ಮುಂದುವರೆದ ಕೆಲವರು ನಮ್ಮಲ್ಲಿರುವ ಆಭರಣಗಳನ್ನು ಖರೀದಿಸಿ ಧರಿಸಿದರೆ ಭಕ್ತಿಭಾವ ತಂತಾನೆ ಮೂಡದಿದ್ದರೆ ಕೇಳಿ'' ಎಂದು ಮತ್ತೊಬ್ಬರು ಸವಾಲೆಸೆಯುತ್ತಾರೆ.

ಜೊತೆಗೆ ಚಿನ್ನದ ಉತ್ಸವ ಎಂದು ಆಚರಿಸಿ ''ಐಫೋನ್ ಉಚಿತ, ರೂ. 5000ದವರೆಗೆ ಕ್ಯಾಷ್‌ಬ್ಯಾಕ್ ಪಡೆಯಿರಿ, ಲಕ್ಕೀ ಡ್ರಾಗೆ ಸೇರಿ, ಮೊದಲ ನೂರು ಗ್ರಾಹಕರಿಗೆ ಚಿನ್ನದ ಸರದ ಉಡುಗೊರೆ...'' ಇಂತಹ ಆಮಿಷಗಳು ದುರ್ಬಲ ಮನಸ್ಸಿನವರನ್ನು ಸೆಳೆಯದೆ ಬಿಡದು. ಈಗ ಹೇಳಿ ಜನ ಸುಮ್ಮನೆ ಕೂಡುತ್ತಾರೆಯೇ. ಕಡು ಬಡವರೆಂದರೂ ಒಂದೆರಡು ಗ್ರಾಂನಷ್ಟಾದರೂ ಅಂದು ಖರೀದಿಸಿ ಹಲವಾರು ಗ್ರಾಂನಷ್ಟಾಗುತ್ತದೆಂದು ಕನಸು ಕಾಣುತ್ತಾರೆ. ಸಾಲ-ಸೋಲ ಮಾಡಿಯಾದರೂ ಅಂದು ಚಿನ್ನ ಖರೀದಿಸಲು ತಯಾರಾಗುತ್ತಾರೆ. ಯಾವ ಚಿನ್ನದ ಅಂಗಡಿಗೆ ಹೋದರೂ ಜಾತ್ರೆಯ ರೀತಿ ಜನ ಸೇರಿಸುವುದನ್ನು ಕಾಣಬಹುದು ಹೀಗೇ ಸಾಲಮಾಡಿ ಚಿನ್ನ ಖರೀದಿಸಿದರೆ ಚಿನ್ನ ದ್ವಿಗುಣಗೊಳ್ಳದಿದ್ದರೂ ಸಾಲವಂತೂ ದ್ವಿಗುಣಗೊಳ್ಳುತ್ತದೆ. ಬಡ್ಡಿ ಬೆಳೆದು ಕೊಂಡು.

ಚಿನ್ನ-ಬೆಳ್ಳಿ ವ್ಯಾಪಾರಿಗಳು ಮತ್ತೊಂದು ಅಂಶವನ್ನು ಮರೆತು ಬಿಟ್ಟಿದ್ದಾರೆಂದೇ ನನ್ನ ಅನಿಸಿಕೆ. ಒಂದೇ ದಿನಕ್ಕೆ ಸೀಮಿತವಾಗಿರುವ ಅಕ್ಷಯ ತೃತೀಯದ ಜೊತೆಗೆ ಅಧಿಕ ಮಾಸದಲ್ಲಿ ಖರೀದಿಸಿದರೆ ಹೇರಳವಾಗಿ ಅಧಿಕಗೊಳ್ಳುತ್ತದೆಂದು ಜಾಹೀರಾತು ಪಡಿಸಿದರೆ ಅಧಿಕ ಮಾಸದ ತಿಂಗಳು ಪೂರ್ತಿ ವ್ಯಾಪಾರ ನಡೆದು, ಕೊಂಡವರಿಗೆ ಹಲವಾರು ಪಟ್ಟು ವೃದ್ಧಿಯಾಗುತ್ತದೋ ಬಿಡುತ್ತದೋ ವ್ಯಾಪಾರವಂತು ಇಡಿ ತಿಂಗಳು ನಡೆದು ವ್ಯಾಪಾರಿಗಳ ಲಾಭ ವೃದ್ಧಿಯಾಗುವುದಂತು ಗ್ಯಾರಂಟಿ.

ಹೀಗೆ ಅಕ್ಷಯ ತೃತೀಯ ದಿನದಂದೋ, ಅಧಿಕ ಮಾಸದಲ್ಲೋ ಚಿನ್ನ ಖರೀದಿಸಲು ಅಂಗಡಿಗೆ ಹೋಗುತ್ತೀರ. ಚಿನ್ನದ ಅಂಗಡಿಗೆ ಹೋಗಿ ಚಿನ್ನ ಖರೀದಿಸಿ, ದಿನಸಿಕೊಂಡಂತೆ ಸುಮ್ಮನೆ ಬಂದು ಬಿಡಲಾದೀತೇ! ಖಂಡಿತ ಇಲ್ಲ. ಸೀರೆಯಂಗಡಿಯಂತೆ ಇಲ್ಲೂ ಕೂಡಾ ಕೆಲವು ಅಂಗಡಿಗಳಲ್ಲಿ ಯಜಮಾನರ ದೈವ ಪ್ರೀತಿಗೆ ತಕ್ಕಂತೆ ದೇವರುಗಳು ಪೀಠಸ್ಥರಾಗಿರುತ್ತಾರೆ. ಖರೀದಿಸಿದ ಚಿನ್ನದ ರಶೀದಿ ನಿಮ್ಮ ಕೈಗೆ ಸೇರಿದರೆ, ಆಭರಣದ ಪೆಟ್ಟಿಗೆ ಅಲ್ಲಿ ಪ್ರತಿಷ್ಠಾಪಿತವಾಗಿರುವ ದೇವರ ಬಳಿಯ ಅರ್ಚಕರ ಹತ್ತಿರ ಸೇರಿಸುತ್ತದೆ. ಅಷ್ಟು ಹಣ ಕೊಟ್ಟು ಚಿನ್ನ ಖರೀದಿಸಿದ ಸಿರಿವಂತರೆನಿಸಿಕೊಂಡ ನೀವು ಮಂಗಳಾರತಿ ತಟ್ಟೆಗೆ ದೊಡ್ಡನೋಟೊಂದನ್ನು ಹಾಕದೆ ಬರಲಾದೀತೇ! ಹಾಕಲಿಲ್ಲವೆಂದರೆ ನೀವು ಕೊಂಡ ಚಿನ್ನ ದ್ವಿಗುಣಗೊಳ್ಳುವ ಬಗೆಯಾದರೂ ಹೇಗೆ? ಚಿನ್ನ ಕೊಂಡಿರುವ ಘನೋದ್ದೇಶವೇ ಮನೆಯಲ್ಲಿ ಚಿನ್ನವು ಹಲವಾರು ಪಟ್ಟು ಬೆಳೆಯಲೆಂದಲ್ಲವೇ? ಈಗ ನಿಮಗುಳಿದಿರುವ ದಾರಿ ತಟ್ಟೆಗೆ ಯಥಾಶಕ್ತಿಯ ನೋಟೊಂದನ್ನು ಹಾಕಿ ಸಂಪತ್ತು ಹಲವಾರು ಪಟ್ಟು ಬೆಳೆಯಲೆಂದು ಆಶೀರ್ವದಿಸುವ ಅರ್ಚಕರಿಂದ ಆಭರಣದ ಪೆಟ್ಟಿಗೆ ಪಡೆದು ಬರುವುದೇ ಆಗಿರುತ್ತದೆ.

ಹೀಗೆ ರೇಷ್ಮೆಸೀರೆ ಅಂಗಡಿ, ಚಿನ್ನದಂಗಡಿ, ಮೊಬೈಲ್ ಷಾಪ್, ಕೈಗಡಿಯಾರದಂಗಡಿ ಮುಂತಾದುವುಗಳಲ್ಲಿ ದೇವರನ್ನು ಪ್ರತಿಷ್ಠಾಪಿಸಿ ನಿಮ್ಮ ಯೋಗ ಕ್ಷೇಮ ನೋಡಿಕೊಳ್ಳುವ, ಸದಾ ನಿಮಗೆ ಒಳಿತಾಗಲೆಂದು ಬಯಸುವ ಸದಾಶಯ ಹೊಂದಿರುವ ಅಂಗಡಿಗಳನ್ನು ಇಂದು ಪ್ರಮುಖ ನಗರಗಳಲ್ಲಿ ಕಾಣಬಹುದು.

ಒಮ್ಮೆ ಕೊಂಚ ಬೆಳ್ಳಿಯ ಸಾಮಗ್ರಿ ಖರೀದಿಸಲು ನನ್ನ ಸ್ನೇಹಿತನೊಬ್ಬ ಒಂದು ಬೆಳ್ಳಿ ಅಂಗಡಿಗೆ ಹೋದ. ಖರೀದಿಸಿದ ನಂತರ ಅಲ್ಲೇ ಅಂಗಡಿಯ ಮುಂಭಾಗದಲ್ಲಿ, ಕುಳಿತಿದ್ದ ವ್ಯಕ್ತಿಯೊಬ್ಬ ಬೆಳ್ಳಿಯ ಲಕ್ಷ್ಮೀ ಚಿತ್ರವಿರುವ ನಾಣ್ಯವೊಂದನ್ನು ನನ್ನ ಸ್ನೇಹಿತನಿಗೆ ನೀಡಿ, ಇದು ಸಾಮಾನ್ಯವಾದ ಲಕ್ಷ್ಮೀ ನಾಣ್ಯವಲ್ಲ, ಲಕ್ಷ್ಮೀ ಸಾನಿಧ್ಯವಿರುವ ನಾಣ್ಯ. ಇದನ್ನು ಯಾವಾಗಲೂ ನಿಮ್ಮ ಪರ್ಸ್‌ನಲ್ಲೇ ಇರಿಸಿಕೊಂಡಿರಿ. ಬೆಲೆ ಕೇವಲ ನೂರು ರೂಪಾಯಿಕೊಟ್ಟರೆ ಸಾಕು. ಇನ್ನೊಂದು ಸಾರಿ ಇತ್ತ ಬಂದಾಗ ನೋಡಿ, ನಿಮ್ಮ ಪರ್ಸ್ ನೋಟುಗಳಿಂದ ತುಂಬಿಕೊಂಡು ಉಬ್ಬಿ ಹೋಗಿರುತ್ತದೆ ಎಂದ. ನಾಣ್ಯ ಪಡೆದ ನನ್ನ ಸ್ನೇಹಿತ ಪರ್ಸ್ ತೆಗೆದ. ಗ್ರಾಹಕನೊಬ್ಬ ಸಿಕ್ಕಿದನೆಂದು ಮಾರಾಟಗಾರ ಖುಷಿಯಾದ. ಪರ್ಸ್‌ಬಿಡಿಸಿ ಒಳಗಿದ್ದ ಇಂತಹ ಐದಾರು ನಾಣ್ಯಗಳನ್ನು ಮಾರಾಟಗಾರನ ಕೈಗೆ ಹಾಕಿ, ''ನೋಡಿ ಇವೆಲ್ಲ ಪರ್ಸ್‌ನಲ್ಲಿ ನೋಟು ತುಂಬುತ್ತದೆಂದು ಕೊಂಡದ್ದು. ಪರ್ಸ್‌ನಲ್ಲಿ ನೋಟು ತುಂಬಲಿಲ್ಲ. ಆದರೆ ನಾಣ್ಯಗಳೇ ತುಂಬಿವೆ. ಬೇಕಾದರೆ ಯಾವುದಾದರೊಂದನ್ನು ನಿಮ್ಮ ನಾಣ್ಯದ ಬದಲಿಗೆ ತೆಗೆದುಕೊಳ್ಳಿ. ನಾನು ಕೊಡುವ ನಾಣ್ಯದಿಂದ ನಿಮ್ಮ ಪರ್ಸ್ ತುಂಬಲಿ, ಇಲ್ಲವೇ ನೀವು ಕೊಡುವ ನಾಣ್ಯದಿಂದ ನನ್ನ ಪರ್ಸ್ ನೋಟಿನಿಂದ ತುಂಬಿ ಉಬ್ಬಿಕೊಂಡರೆ ಮುಂದಿನ ಸಾರಿ ಬಂದಾಗ ನಿಮಗೆ ಇನ್ನೂರು ರೂಪಾಯಿ ಗ್ಯಾರಂಟಿ'' ಎಂದ.

''ಇಷ್ಟಕ್ಕೂ ನೀವು ಹೇಳಿದಂತೆ ಲಕ್ಷ್ಮೀ ಸಾನಿಧ್ಯವಿರುವ ನಾಣ್ಯವನ್ನು ನಿಮ್ಮ ಪರ್ಸ್‌ನಲ್ಲೇ ಇಟ್ಟುಕೊಂಡು ನೋಟಿನಿಂದ ಪರ್ಸ್‌ನ್ನು ಉಬ್ಬಿಸಿಕೊಳ್ಳಬಹುದಲ್ಲ!'' ಲಕ್ಷ್ಮೀನಾಣ್ಯ ಮಾರಾಟಮಾಡಲು ಬಂದವ ತಬ್ಬಿಬ್ಬಾದ.

ನೋಡಿದಿರಲ್ಲ, ನಮ್ಮ ಸುತ್ತಮುತ್ತ ನಮ್ಮ ಯೋಗ ಕ್ಷೇಮ ವಿಚಾರಿಸಿಕೊಂಡು ನಾವು ಕೊಂಡದ್ದು ಹಲವಾರುಪಟ್ಟು ಬೆಳೆಯುತ್ತದೆಂದು ಆಸೆ ಹುಟ್ಟಿಸುವ, ನಮ್ಮ ಆಸ್ತಿ-ಪಾಸ್ತಿ-ಅಂತಸ್ತುಗಳನ್ನು ಹೆಚ್ಚಿಸುವ ಇರಾದೆ ಇರುವ ಹಲವಾರು ಮಂದಿ ನಮ್ಮ ಹಿಂದೆ-ಮುಂದೆ ಇರುವಾಗ ಜೀವನ ಕಷ್ಟವೆಂದು ಕೊರಗುವುದಕ್ಕಿಂತ ಇಂತಹವರೆಲ್ಲ ನಮ್ಮ ಬೆನ್ನ ಹಿಂದಿದ್ದಾರೆಂದು ಸಂತೋಷ ಪಡುವುದೇ ಒಳಿತಲ್ಲವೇ? ■

---

ಅಂತೂ ಇಂತೂ
ಮುಗಿಯಿತು ಚುನಾವಣೆ
ಮತದಾರರ ಮತಕ್ಕೆ ಬೀಗ
ಉಮೇದುವಾರರ ಬಾಯಿಗೂ ಬೀಗ
ಯಾರೋ ಗೆಲ್ಲುತ್ತಾರೆ
ಯಾರೋ ಸೋಲುತ್ತಾರೆ
ಆದರೆ ಸದಾ ಸೋಲುವುದು
ಮತದಾರನೇ

# ಕಂಡೋರ ಕಾಕ ದೃಷ್ಟಿ ಬಿದ್ದದೆ ಎಂದಳಲ್ಲ

● ಪ್ರೇಮಾಭಟ್

ತಂಗೆವ್ವ ತಂದುಕೊಟ್ಟ ''ನೀನಿಲ್ಲದೆ ನನಗೇನಿದೇ'' ಪುಸ್ತಕ ಓದುತ್ತಿದ್ದೆ. ಪುಸ್ತಕ ಸ್ವಾರಸ್ಯವಾಗಿದ್ದುದರಿಂದ ಕೈಬಿಡಲು ಮನಸ್ಸಿಲ್ಲದೆ ಓದು ಮುಂದುವರೆಸಿದ್ದೆ. ಹೊರಗೆ ಬಿಸಿಲ ತಾಪ ಜೋರಾಗಿತ್ತು. ಸೂರ್ಯ ಕೊತಕೊತನೆ ಕುದಿಯುತ್ತಿದ್ದ. ಹೊರಗೆ ಹೋದರೆ ಕೆಂಡದುಂಡೆ ಮೈಗೆ ಸುರಿದಂತೆ ಭಾಸವಾಗುತ್ತಿತ್ತು. ಮೂರು ತಿಂಗಳಿಂದ ನಾನು ಹೊರಗೆ ಬಂದಿರಲಿಲ್ಲ, ಬಿದ್ದ ನೋವಿನಿಂದ ಬಳಲುತ್ತಿದ್ದೆ. ನನಗೆ ವರ್ಟಿಗೋ ಇತ್ತು, ಆಗಾಗ ತಲೆ ಸುತ್ತಿ ಬರುತ್ತಿತ್ತು. ಆವತ್ತು ಏನಾಯ್ತೋ ಗೊತ್ತಿಲ್ಲ. ನನ್ನ ಅರಿವಿಗೆ ಬರುವುದರೊಳಗೆ ತಲೆ ಗಿರಗಟ್ಟೆಯಂತೆ ಸುತ್ತಿ ಗಾಳಿಪಟ ಹಾರಿ ಹೋಗುವಂತೆ ನಿಂತಲ್ಲಿಂದ ಹಾರಿ ನಮ್ಮ ಮನೆಯ ಪಕ್ಕದ ಮನೆಯವರ ಮೋರಿಯೊಳಗೆ ನನ್ನನ್ನು ಏಕಾಏಕಿ ತಳ್ಳಿ ಬಿಟ್ಟಿತ್ತು. ಮೋರಿಯೊಳಗಿಂದ ಎದ್ದು ಬರಲಾಗಲಿಲ್ಲ. ಹೆದರಿಕೆಯಿಂದ ಗಡಗಡ ಮೈ ನಡುಗುತ್ತಿತ್ತು, ಕೂಗಿದೆ ಮಗನನ್ನು; ಬೊಬ್ಬೆ ಹಾಕಿದೆ, ಬೆಳಗಿನ ಜಾವ ಐದು ಗಂಟೆಗೆ ಎದ್ದು ಕಸಗುಡಿಸಿ ರಂಗೋಲೆ ಬಿಡಿಸಲು ಹೋದವಳು ಬಿದ್ದಿದ್ದೇನೆ ಎಂದು ಮಗನಿಗೆ ಹೇಗೆ ಗೊತ್ತಾಗಬೇಕು. ಬಿಸಿಲ ತಾಪಕ್ಕೆ ಬೆಳಗಿನ ಜಾವದ ತಣ್ಣನೆಯ ನಿದ್ದೆಯಲ್ಲಿದ್ದ ಅವನಿಗೆ ನನ್ನ ಕೂಗಾದರೂ ಹೇಗೆ ಕೇಳಿಸಬೇಕು. ಹತ್ತು ನಿಮಿಷದ ನಂತರ ಒಬ್ಬರಲ್ಲ ನಾಲ್ಕಾರು ಮಂದಿ ನನ್ನನ್ನು ಸುತ್ತುವರೆದು ರಟ್ಟೆ ಹಿಡಿದು ಹಳ್ಳದಿಂದ ಎಬ್ಬಿಸಿದರು. ಏಳುತ್ತಿದ್ದ ಹಾಗೆ ಬೆನ್ನು ಮೂಳೆ ಮುರಿದು ಹೋದಂತೆ ಸಟಸಟನೆಂದು ನೋಯ ತೊಡಗಿತು. ಹಳ್ಳದಿಂದ ಎದ್ದು ಮನೆಯೊಳಗೆ ಪ್ರವೇಶಿಸುವುದರೊಳಗೆ ದಿಢೀರನೆ ನೋವು, ಯಾತನೆ, ಪಡಬಾರದ ಪರಮಕಷ್ಟಕ್ಕೆ ನನ್ನ ದೇಹ ಬಲಿಯಾಯ್ತು.

ಎರಡುದಿನದಲ್ಲಿ ನನ್ನ ಬೆನ್ನು ನೋವು ದುಪ್ಪಟ್ಟು ಹೆಚ್ಚಿತು. ಇಡೀ ಬೆನ್ನು ಗುಂಡು ಕಲ್ಲಿನಿಂದ ಹೊಡೆದು ಜಜ್ಜಿದ ಹಾಗೆ ನೀಲಿ ಬಣ್ಣಕ್ಕೆ ತಿರುಗಿತು. ಎದ್ದೆನೋ ಬಿದ್ದೆನೋ ಎಂದು ಮೂಳೆ ವೈದ್ಯರಲ್ಲಿಗೆ ಹೋದೆ. ''ಬಲವಾದ ಏಟು ಬಿದ್ದಿದೆ. ನಿಮ್ಮ ಪುಣ್ಯ ಚೆನ್ನಾಗಿತ್ತು ಮೂಳೆ ಮುರಿದಿಲ್ಲ'' ಎಂದರು. ನೋವಿನ ಮಾತ್ರೆ ಒಂದುವಾರ ತೆಗೆದುಕೊಳ್ಳಲು ಹೇಳಿ ಬರೆದುಕೊಟ್ಟರು. ಜಜ್ಜಿದ ನೋವು ಮಾಯಲು ತಿಂಗಳು ಎರಡು ತಿಂಗಳು ಬೇಕು ಎಂದರು, ಅವರು ಹಾಗೆನ್ನುತ್ತಿದ್ದಂತೆ ಬಿಕ್ಕಿದೆ, ಲಬೋಲಬೋ ಎಂದು ಬಡಿದುಕೊಳ್ಳತೊಡಗಿದೆ. ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿದು ಬಂತು. ದೇವರೆ ಕಣ್ಣೀರು ಪನ್ನೀರಾಗುವಂತೆ ಮಾಡು ಎಂದು ಪ್ರಾರ್ಥಿಸಿದೆ. ನಾನು ನಂಬಿದ ದೈವ ಶಿರಡಿ ಬಾಬರಿಗೆ ಹರಕೆ ಕಟ್ಟಿಕೊಂಡೆ. ಮನೆಯೊಳಗಿನ ಕಸವನ್ನು ಗುಡಿಸುತ್ತಿದ್ದ ತಿಮ್ಮವ್ವ ಮಲಗಿದ ನನ್ನ ಹತ್ತಿರಕ್ಕೆ ಬಂದು, ಯವ್ವಾ ಈ ವಯಸ್ನಾಗ ಎಷ್ಟು ಚಟುವಟಿಕೆಯಿಂದ ಇದ್ರಿ ಕಾಣ್ರವ್ವ. ಚಕಚಕ ಅಂತ ಓಡಾಡ್ಕೋಂಡಿದ್ರಿ ಕೈಲಾದ ಕೆಲಸ ಮಾಡ್ಕೋತ ಸುಮ್ಕೆ ಕೂಡ್ತಿರಲಿಲ್ಲ, ''ನಿಮ್ಗೆ ಕಂಡೋರ ಕಾಕ ದೃಷ್ಟಿ ಬಿದ್ದದೆ ಕಾಣ್ರವ್ವ. ದೃಷ್ಟಿ ನಿವಾಳ್ಸಲ ಅಂತ ಕೇಳಿದಳು. ಅವಳ ಸಮಾಧಾನಕ್ಕೆ ದೃಷ್ಟಿ ನಿವಾಳಿಸಿಕೊಂಡೆ. ತಿಮ್ಮವ್ವ ಪರಕೆ ಕಡ್ಡಿಯಿಂದ ದೃಷ್ಟಿ ನಿವಾಳಿಸಿ ಗೋಡೆಯ ಮೂಲೆಯಲ್ಲಿಟ್ಟಳು. ಅದು ಚಟಪಟನೆ ಸಿಡಿಯುವುದನ್ನು ನೋಡುತ್ತ ''ಆಕ ಕಂಡ್ರ, ಹ್ಯಾಂಗೆ ಸಿಡಿತದೆ, ಈ ಕೆಲ್ಸನ ನಾನು ಮೊದ್ಲೇ ಮಾಡ್ಬೇಕಾಗಿತ್ತು ಕಾಣ್ರವ್ವ'' ಎಂದಾಗ ಅವಳ ಮುಖದಲ್ಲಿ ಜಿನುಗುತ್ತಿದ್ದ ಸಮಾಧಾನವನ್ನು ಕಂಡೆ. ಏನಾದರೇನು ಮೂರು ತಿಂಗಳು ನಾನು ಅನುಭವಿಸಿದ ಯಾತನೆ ನನ್ನ ಜೀವನದುದ್ದಕ್ಕೂ ಮರೆಯಲು ಸಾಧ್ಯವಿಲ್ಲ. ಇದೀಗ ಸ್ವಲ್ಪ ಮಟ್ಟಿಗೆ ನೋವು ಮಾಸಿದೆ ಎಂದರೂ ಹೊರಗೆ ಹೋಗುವಂತಿಲ್ಲ. ನನ್ನಲ್ಲಿ ಮೊಂಡು ಧೈರ್ಯವಿದ್ದರೂ ಸೊಸೆಯ ಹೆದರಿಕೆಯಿಂದಾಗಿ ಮನೆಯೊಳಗೆ ಕಾಲ ಹಾಕುತ್ತಿದ್ದೆ. ಮಗ ಕೋಲು ಕೈಗೆ ತಂದುಕೊಟ್ಟಿದ್ದ. ವಯಸ್ಸಾಗಿದೆ ಎಂದು

ಹೇಳಲು ನನಗೆ ಇಷ್ಟವಿಲ್ಲ. ಕೋಲು ಹಿಡಿಯಲು ಮನಸ್ಸಿಲ್ಲದಿದ್ದರೂ ಈಗಿನ ಪರಿಸ್ಥಿತಿಯಲ್ಲಿ ಹಿಡಿಯಲೇ ಬೇಕಾಗಿತ್ತು.

ವರ್ಟಿಗೋ ಇದ್ದುದರಿಂದ ಎಲ್ಲೆಂದರಲ್ಲಿ ಅಲ್ಲಿ ಹೇಗೆಂದರೆ ಹಾಗೆ ಬಿದ್ದು ಬಿಡುತ್ತಿದ್ದರೂ, ನನ್ನಲ್ಲಿ ಅದೆಂತಹದ್ದೋ ಮೊಂಡು ಧೈರ್ಯ. ಅಲ್ಲದೆ ಸುಮ್ಮನೆ ಕುಳಿತು ಕಾಲ ಕಳೆಯುವುದು ನನ್ನ ಜಾಯಮಾನವಲ್ಲ. ಏನಾದರೂ ಹುಡುಕಿಕೊಂಡು ಕೆಲಸ ಮಾಡಬೇಕು. ಇಲ್ಲದಿದ್ದರೆ ಬರೆದು ಬದುಕ ಬೇಕು. ಅದೂ ಅಲ್ಲದಿದ್ದರೆ ಹೊರಗೆ ಅಡ್ಡಾಡಿ ಬರಬೇಕು. ಸೊಸೆ ಮೊದಲೇ ಕಡ್ಡಾಯವಾಗಿ ಹೇಳಿ ಬಿಟ್ಟಿದ್ದಾಳೆ, ಹೊರಗೆ ಹೋದರೆ ಅವಳು ಸಹಿಸುವುದಿಲ್ಲ. ಅವಳು ಹೇಳುವುದು ಸರಿ. ನಾನನುಭವಿಸಿದ ನೋವು ಎಂದಿಗೂ ಮಾಯುವುದಿಲ್ಲ. ಮತ್ತೆ ಬಿದ್ದರೆ ಚಟ್ಟಕಟ್ಟಬೇಕು ಎಂದುಕೊಂಡು ಸುಮ್ಮನೆ ಇದ್ದೆ. ನಾನನುಭವಿಸಿದ ನೋವಿನ ನೆನಪು ಬಂದಾಗಲೆಲ್ಲಾ ನನ್ನನ್ನು ಹಿಂಡಿ ಹಿಪ್ಪೆ ಮಾಡುತ್ತಿತ್ತು. ಪ್ರಾಯಶಃ ಹೆರಿಗೆ ನೋವು ನನ್ನನ್ನು ಇಷ್ಟು ಕಾಡಿರಲಿಲ್ಲ. ಕಂಗೆಡಿಸಿರಲಿಲ್ಲ. ಮೂರುವರ್ಷದ ಹಿಂದೆ ಚಿಕನ್‌ಗೂನ್ಯ ಬಂದು ಆಸ್ಪತ್ರೆಗೆ ಸೇರಿ ಗೋಡೆಹಿಡಿದು ನಡೆಯುತ್ತಿದ್ದೆನಾದರೂ ಈ ಪರಿಯಲ್ಲಿ ನಾನು ನೋವನ್ನನುಭವಿಸಿದ್ದಾಗಲಿ, ಅತ್ತದ್ದಾಗಲಿ ಇಲ್ಲ. ಅಬ್ಬಬ್ಬಾ ಈ ಬಿದ್ದ ನೋವು ನನ್ನನ್ನು ಎಷ್ಟು ಕಾಡಿತ್ತು ಎಂದರೆ, ಯಾಕೆ ಬದುಕಿದ್ದೇನೆ ಎನ್ನುವಷ್ಟು ಹಿಂಸೆ ಅನುಭವಿಸಿದ್ದೆ. ಈಗೇನೋ ನೋವು ಬಹಳ ಮಟ್ಟಿಗೆ ಕಡಿಮೆಯಾಗಿದ್ದರೂ ಬಿಸಿಲ ಬೇಗೆ ಇದೀಗ ನನ್ನನ್ನು ಹಣ್ಣುಗಾಯಿ ನೀರುಗಾಯಿಯನ್ನಾಗಿಸಿತ್ತು. ಹೊರಬಾಗಿಲು ಮಕ್ಕಳು ತೆಗೆದಿಟ್ಟಿದ್ದರು. ಬಿಸಿಲ ದಗೆ ಒಳಗೆ ನುಗ್ಗಿ ಬಂದಿತ್ತು. ಬೀಸಣಿಗೆ, ಫ್ಯಾನ್ ಯಾವುದಕ್ಕೂ ಬಗ್ಗದ ಬಿಸಿಲು. ಯಾವುದು ಬಂದರೂ ಮನುಷ್ಯನಿಗೆ ಸಹಿಸುವುದು ಕಷ್ಟ. ಆಯಾ ಕಾಲಕ್ಕೆ ಬರುವ ಸಂಕಟವೋ ಕಷ್ಟವೋ ನೋವೋ ಯಾತನೆಯೋ ಅದನ್ನು ಸಹಿಸಲಾರದೆ ಬಳಲುತ್ತೇವೆ. ಮರವೆಯಲ್ಲಿ ಹಿಂದೆ ಸರಿದದ್ದನ್ನೆಲ್ಲಾ ಮರೆತು ಬಿಡುತ್ತೇವೆ. ಮತ್ತೆ ಅಂತಹದ್ದೇ ಅಥವಾ ಅದಕ್ಕಿಂತ ಮಿಗಿಲಾದ್ದು ಬಂದರೆ ಹಿಂದೆ ಅನುಭವಿಸಿದ್ದಕ್ಕಿಂತಲೂ ಈಗಿನದ್ದು ಹೆಚ್ಚು ತ್ರಾಸು ಕೊಡುತ್ತಿದೆ ಎಂದುಕೊಳ್ಳುತ್ತೇವೆ. ಹೊರಗೆ ಪನ್ನೀರು ಹನಿಸಿದಂತೆ ಮಳೆ ಬೀಳತೊಡಗಿತ್ತು. ಮಣ್ಣಿನ ಹಸಿವಾಸನೆ ಮೂಗನ್ನು ಸವರುತ್ತಿದ್ದಂತೆ ಮನಸ್ಸು ಸಂತಸದಿಂದ ತುಯ್ದಾಡಿತು. ನಿದ್ರೆಯನ್ನು ಕಸಿದಿದ್ದ ಬಿಸಿಲು ಮಳೆಗೆ ಹಿಂದೆ ಸರಿಯುತ್ತದೆ ಎನ್ನುವ ಸಮಾಧಾನ ಒಡನೆ ಮನಸ್ಸಿಗೆ ಬಂದು ಸಂಭ್ರಮಿಸಿದ್ದೆ.

■

---

## ಗೊತ್ತೇನ್ರೀ

ಇಬ್ಬರು ಹೆಂಗಸರ ನಡುವೆ
ಮಾರಾಮಾರಿ
ಕಾವೇರಿದ ಕದನ ಕಿನ್ನರಿ
ಜಗಳ ಬಿಡಿಸುವವರು ಯಾರು
ಸಮಾಧಾನ ಪಡಿಸುವವರು ಯಾರು
ಸಮಾಧಾನವಿಲ್ಲ ಕಿರುಚುತ್ತಿದ್ದ ಹೆಂಗಸಿಗೆ
ಏರಿದ ಕಾವು ಇಳಿಯುತ್ತಲೇ ಇಲ್ಲ ಅವಳಿಗೆ
ಏಕೆಂದರೆ ಅವಳ ಹೆಸರೇ
ಕಾವೇರಮ್ಮ